

ಸಂಪುಟ 22 ಸಂಚಿಕೆ 46
ನವೆಂಬರ್ 5, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರಂಗ



ಸಾಲದ ಶೂಲಕ್ಕೆ ರೈತ




ನೇಕಾರರ ಮರಣ ಶಾಸನ



ಜನರ ಸಂಕಟ ಮರೆತ ವಿಧಾನಸಭೆ

ಬಡತನ–ಹಿಂಸೆ ವಿರೋಧಿಸಿದ ಮಹಿಳೆಯರು



ಪರಿಷ್ಕರಣವಾದಿಗಳಿಲ್ಲದ ಪಕ್ಷದ ಉದಯದತ್ತ.....

ಹಿಂದಿನ ಸಂಚಿಕೆಯಲ್ಲಿ ಮೂರನೇ ಸಾರ್ವತ್ರಿಕ ಚುನಾವಣೆ, ಕಾಂಗ್ರೆಸ್‌ಗೆ ಪರ್ಯಾಯವೊಂದರ ಉಗಮ ಹಾಗೂ ಭಾರತ-ಚೀನಾ ಬಿಕ್ಕಟ್ಟಿನ ಹೆಸರಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖಂಡರ ಬಂಧನದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಪರಿಷ್ಕರಣವಾದಿಗಳನ್ನು ಹೊರಗಿಟ್ಟು ಮಾರ್ಕ್ಸ್‌ವಾದ ಹಾಗೂ ಲೆನಿನ್‌ವಾದದ ಸಿದ್ಧಾಂತಗಳಡಿಯಲ್ಲಿ ಒಂದು ಹೊಸ ಪಕ್ಷವನ್ನು ಐತಿಹಾಸಿಕವಾದ 'ತೆನಾಲಿ' ಸಮಾವೇಶದಲ್ಲಿ ಸ್ಥಾಪಿಸಲಾಯಿತು ಈ ಬಗ್ಗೆ

ಪರಿಷ್ಕರಣವಾದಿಗಳನ್ನು ಹೊರತುಪಡಿಸಿದ ಒಂದು ಹೊಸ ಕಮ್ಯುನಿಸ್ಟ್ ಪಕ್ಷದ ರಚನೆಯ ಬಗ್ಗೆ ಈ ಅದ್ಯಾಯ ಮೀಸಲು. ಇದರಲ್ಲಿ ತೆನಾಲಿ ಸಮಾವೇಶ ಮಹತ್ವದ ಪಾತ್ರವನ್ನು ವಹಿಸಿದೆ.

ಪಕ್ಷದ ರಾಷ್ಟ್ರೀಯ ಮಂಡಳಿಯಲ್ಲಿ ಡಾಂಗೆ ನಿಷ್ಠರು ಬಹುಸಂಖ್ಯೆಯಲ್ಲಿದ್ದರು. ತಮ್ಮ ಪರಿಷ್ಕರಣವಾದಿ ನೀತಿಗಳನ್ನು ಸಾಂಸ್ಥೀಕರಿಸಲು ಅವರು ಇದನ್ನು ಬಳಸಿಕೊಂಡರು. ಪಕ್ಷದಲ್ಲಿ ಒಗ್ಗಟ್ಟನ್ನು ಮರಳಿ ಸ್ಥಾಪಿಸಬೇಕೆಂಬ ನಮ್ಮ ಪ್ರಸ್ತಾವವನ್ನು ಅವರು ಪದೇ ಪದೇ ತಿರಸ್ಕರಿಸಿದರು. ತಮ್ಮ ಷರತ್ತಿನ ಪ್ರಕಾರ ಒಗ್ಗಟ್ಟು ಸ್ಥಾಪನೆಯಾಗಬೇಕೆಂಬುದು ಪರಿಷ್ಕರಣವಾದಿಗಳ ನಿಲುವಾಗಿತ್ತು ಹಾಗೂ ವಿರೋಧಿ ಅಭಿಪ್ರಾಯ ಹೊಂದಿರುವವರ ಜತೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲು ಅವರು ನಿರಾಕರಿಸಿದರು.

ಒಂದೆಡೆ, ಅವರು ಏಕತೆಯ ಬಗ್ಗೆ ಮಾತನಾಡುತ್ತಿರುವಾಗಲೇ ಇನ್ನೊಂದೆಡೆ ಅದನ್ನು ಮುರಿಯಲು ಪ್ರಯತ್ನಿಸುತ್ತಿದ್ದರು. ಪಶ್ಚಿಮ ಬಂಗಾಳದಲ್ಲಿ ನಾವು ಬಹುಸಂಖ್ಯಾತರಾಗಿದ್ದೆವು. ಸಮಾನಾಂತರ ರಾಜ್ಯ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. ಇ.ಎಂ.ಎಸ್., ಪ್ರಮೋದ್ ದಾಸ್‌ಗುಪ್ತಾ, ಹರಿಕಿಷನ್ ಸಿಂಗ್ ಸುರ್ಜಿತ್ ಮತ್ತು ನಾನು ಡಾಂಗೆ ನಿಷ್ಠರ ಜತೆ ಮಾತುಕತೆ ನಡೆಸುತ್ತಿರುವ ಸಂದರ್ಭದಲ್ಲೇ ಡಾಂಗೆ ನಿಷ್ಠರು ಒಂದು ಹೇಳಿಕೆ ಹೊರಡಿಸಿದ್ದರು. ರಾಷ್ಟ್ರೀಯ ಮಂಡಳಿಯ ವ್ಯಾಪ್ತಿಯೊಳಗಷ್ಟೆ ಏಕತೆಯ ಮಾತುಕತೆ ನಡೆಸಬೇಕು ಎಂದು ಅವರಲ್ಲಿ ಹೇಳಿದ್ದರು. ಇದನ್ನು ಪ್ರತಿಭಟಿಸಲು 32 ಸದಸ್ಯರು ರಾಷ್ಟ್ರೀಯ ಮಂಡಳಿಯಿಂದ ಹೊರಬಂದರು. ಭೂಪೇಶ ಗುಪ್ತ ಕೂಡ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಆದರೆ ಅವರು ತೆನಾಲಿ ಸಮಾವೇಶದಲ್ಲಿ ಪಾಲ್ಗೊಳ್ಳಲಿಲ್ಲ.

ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ, ಕಾ. ಮುಝಫರ್ ಅಹ್ಮದ್ ಅಧಿವೇಶನದಲ್ಲಿ ಕಮ್ಯುನಿಸ್ಟ್ ಪಕ್ಷದ ಧ್ವಜಾರೋಹಣ ಮಾಡಿ, 'ನೈಜ ಕಮ್ಯುನಿಸ್ಟ್ ಪಕ್ಷವನ್ನು ರಚಿಸುವ ಪ್ರತಿಜ್ಞೆ ತೊಡಲು ನಾವೆಲ್ಲ ಮುಂದಾಗೋಣ' ಎಂದು ಕರೆ ನೀಡಿದರು.

ವರ್ಗ ಸಂಘರ್ಷದ ಬದಲು ರಾಜಿ

ರಾಷ್ಟ್ರೀಯ ಮಂಡಳಿ ಸಭೆಯಿಂದ ಹೊರಬಂದ 32 ಸದಸ್ಯರು, ಈ ಅಭೂತಪೂರ್ವ ಕ್ರಮಕ್ಕೆ ಏನು ಕಾರಣ ಎಂದು ವಿವರಿಸಿ ಹೇಳಿಕೆ ನೀಡಿದರು. ಪರಿಷ್ಕರಣವಾದಿಗಳು ವರ್ಗ ಸಂಘರ್ಷವನ್ನು ಒಂದು ಮುಖ್ಯ ನೀತಿಯಾಗಿ ಅಂಗೀಕರಿಸುವುದಿಲ್ಲ, ಬದಲಿಗೆ ಅವರು ರಾಜಿ ಮಾಡಿಕೊಳ್ಳುತ್ತಾರೆ ಎಂಬುದು ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಮಂಡಿಸಿದ ರಾಜಕೀಯ ಗೊತ್ತುವಳಿ ಸ್ಪಷ್ಟಪಡಿಸುತ್ತದೆ ಎಂದವರು ಹೇಳಿದರು.

ಈ ಹಿನ್ನೆಲೆಯಲ್ಲಿ, ಸಿಪಿಐ ಪರವಾಗಿ ಆಂಧ್ರಪ್ರದೇಶದ ತೆನಾಲಿಯಲ್ಲಿ ಒಂದು ಸಮಾವೇಶವನ್ನು ನಡೆಸಬೇಕೆಂದು ಈ 32 ಸದಸ್ಯರು ಒತ್ತಾಯಿಸಿದರು. 1964 ಜುಲೈ 7 ರಿಂದ 11 ರವರೆಗೆ ತೆನಾಲಿಯಲ್ಲಿ ಸಮಾವೇಶ ನಡೆಯಿತು. ಪಕ್ಷದ ಒಂದು ಲಕ್ಷ ಸದಸ್ಯರನ್ನು ಪ್ರತಿನಿಧಿಸಿ 146 ಪ್ರತಿನಿಧಿಗಳು ಅದರಲ್ಲಿ ಪಾಲ್ಗೊಂಡರು.

ಪರಿಷ್ಕರಣವಾದಿ ನೀತಿಗಳಿಂದಾಗಿ ರಾಜಕೀಯ ರಂಗದಲ್ಲಿ ಪಕ್ಷ ಎದುರಿಸುತ್ತಿರುವ ಬಿಕ್ಕಟ್ಟನ್ನು ಪರಿಶೀಲಿಸುವುದು ಸಮಾವೇಶದ ಉದ್ದೇಶವಾಗಿತ್ತು. 146 ಪ್ರತಿನಿಧಿಗಳ ಪೈಕಿ 10 ಜನರನ್ನು ಬಿಟ್ಟು ಉಳಿದವರೆಲ್ಲರೂ 15 ವರ್ಷಗಳ ಹಿಂದೆ ಪಕ್ಷವನ್ನು ಸೇರಿದವರಾಗಿದ್ದರು. ಉಳಿದ 10 ಮಂದಿ 1935 ರ ಮುಂಚೆ ಸೇರಿದವರು. ಅವರೆಲ್ಲರೂ ಅವರವರ ರಾಜ್ಯಗಳಲ್ಲಿ ಪರಿಚಿತ ಮುಖಂಡರಾಗಿದ್ದರು ಹಾಗೂ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವಲ್ಲಿ ಸಾಕಷ್ಟು ಕೆಲಸ ಮಾಡಿದವರಾಗಿದ್ದರು. ಡಾಂಗೆ ನಿಷ್ಠರು 'ಕಾಂಗ್ರೆಸ್ - ಕಮ್ಯುನಿಸ್ಟ್ ಏಕತೆ'ಯನ್ನು ಇಡೀ ಪಕ್ಷದ ಮೇಲೆ ಹೇಗೆ ಹೇರಿದರು ಹಾಗೂ ಅದನ್ನು ವಿರೋಧಿಸಿದವರನ್ನು ಹೇಗೆ ಪಕ್ಷದಿಂದ ಉಚ್ಚಾಟಿಸಲಾಯಿತು ಎಂಬುದನ್ನು ಅಧಿವೇಶನದಲ್ಲಿ ವಿವರಿಸಲಾಯಿತು.

ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಕಾ. ಮುಝಫರ್ ಅಹ್ಮದ್ ಅಧಿವೇಶನದಲ್ಲಿ ಕಮ್ಯುನಿಸ್ಟ್ ಪಕ್ಷದ ಧ್ವಜಾರೋಹಣ ಮಾಡಿ, 'ನೈಜ ಕಮ್ಯುನಿಸ್ಟ್ ಪಕ್ಷವನ್ನು ರಚಿಸುವ ಪ್ರತಿಜ್ಞೆ ತೊಡಲು ನಾವೆಲ್ಲ ಮುಂದಾಗೋಣ' ಎಂದು ಕರೆ ನೀಡಿದರು.

ಕಲಾಪಗಳ ನಿರ್ವಹಣೆಗೆ ಎ.ಕೆ.ಗೋಪಾಲನ್, ಶಿವವರ್ಮಾ ಮತ್ತು ನಾನು ಇದ್ದ ಅಧ್ಯಕ್ಷೀಯ ಮಂಡಳಿಯನ್ನು ಸಮಾವೇಶದದಲ್ಲಿ ರಚಿಸಲಾಯಿತು. ಸ್ವಾಗತ ಸಮಿತಿ ಪರವಾಗಿ ಪಿ.ಸುಂದರಯ್ಯ ಸ್ವಾಗತಿಸಿದರು. ಪಕ್ಷದ 7ನೇ ಮಹಾಧಿವೇಶನವನ್ನು ನಡೆಸಬೇಕೆಂಬ ಕರೆ ಸಹಿತಾವದ ಅಜೆಂಡಾವನ್ನು ರೂಪಿಸಲಾಯಿತು.

ರಾಷ್ಟ್ರೀಯ ಮಂಡಳಿಯ 32 ಸದಸ್ಯರ ಮನವಿ ಈ ಮಾತುಗಳಿಂದ ಕೊನೆಗೊಂಡಿತು:

"ರಾಷ್ಟ್ರೀಯ ಮಂಡಳಿಯಿಂದ ಹೊರಬಂದ ಕ್ರಮದ ಫಲಿತಾಂಶದಿಂದ ಚಿಂತಿತರಾದವರು, ನಾವು ಈ ಕ್ರಮ ಕೈಗೊಳ್ಳುವ ಬಲವಂತಕ್ಕೆ ಒಳಗಾದೆವು ಎನ್ನುವುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. ಇದರಿಂದ ನಮಗೆ ಸಂತೋಷವೇನೂ ಇಲ್ಲ. ಈಗಲೂ ಈ ಕ್ರಮವನ್ನು ನಿವಾರಿಸಲು ನಾವು ಕಾತರರಾಗಿದ್ದೇವೆ. ಈ ಕಾರಣದಿಂದಲೇ (ಒಗ್ಗಟ್ಟು ಸಾಧ್ಯವಿದ್ದ ವೇಳೆ) ನಾವು ಒಗ್ಗಟ್ಟು ಸಾಧಿಸಬೇಕು ಎಂದು ಪ್ರತಿಪಾದಿಸಿದೆವು. ಆದರೆ ನಮ್ಮ ಈ ಪ್ರಯತ್ನಕ್ಕೆ ವಿರೋಧ ವ್ಯಕ್ತವಾಯಿತು.

''ನಮ್ಮೊಂದಿಗೆ ಸಹಕರಿಸುವಂತೆ ನಿಮಗೆಲ್ಲರಿಗೆ ನಾವು ಮನವಿ ಮಾಡುತ್ತೇವೆ. ಕಮ್ಯುನಿಸ್ಟ್ ಪಕ್ಷವನ್ನು ಕಾರ್ಮಿಕ ವರ್ಗದ ಏಕೀಕೃತ ವೇದಿಕೆಯನ್ನಾಗಿ ಪುನರ್ ಸಂಘಟಿಸುವಲ್ಲಿ ಹಾಗೂ ಭಾರತೀಯ ಜನತೆಯ ಕ್ರಾಂತಿಕಾರಿ ಪರಂಪರೆ ಮತ್ತು ಇತಿಹಾಸವನ್ನು ಎತ್ತಿ ಹಿಡಿಯುವಲ್ಲಿ ನಮಗೆ ನೆರವಾಗಿ"

ಅದೇ ವರ್ಷ ಅಕ್ಟೋಬರ್ 24 ರಿಂದ 31 ರ ವರೆಗೆ ಭಾರತ ಕಮ್ಯುನಿಸ್ಟ್ ಪಕ್ಷದ ಏಳನೇ ಮಹಾಧಿವೇಶನ ನಡೆಯಬೇಕೆಂದು ತೀರ್ಮಾನಿಸಲಾಯಿತು. ಮಹಾಧಿವೇಶನದ ಅಜೆಂಡಾ ಈ ಕೆಳಗಿನಂತಿರಬೇಕು ಎಂದು ನಿಗದಿಪಡಿಸಲಾಯಿತು.

1. ಕಾರ್ಯನಿರ್ವಾಹಕ ಕಾರ್ಯಕ್ರಮವೊಂದರ ಅಂಗೀಕಾರ
2. ಪಕ್ಷದ ಆಡಳಿತ ಮತ್ತು ಅಧಿಕಾರ ಶ್ರೇಣಿಯ ಪುನರ್ ಸಂಘಟನೆ
3. ರಾಜಕೀಯ ಸಂಘಟನಾತ್ಮಕ ವರದಿಯ ಅಂಗೀಕಾರ
4. ಹೊಸ ನಾಯಕತ್ವದ ಆಯ್ಕೆ ಮತ್ತು
5. ಪಕ್ಷದ ಕೇಂದ್ರ ನಿಯಂತ್ರಣ ಆಯೋಗದ ಆಯ್ಕೆ

1963 ಡಿಸೆಂಬರ್ 31 ರವರೆಗಿನ ಪಕ್ಷ - ಸದಸ್ಯತ್ವವನ್ನು ಆಧಾರವಾಗಿಟ್ಟುಕೊಂಡು ಮಹಾಧಿವೇಶನವನ್ನು ನಡೆಸಬೇಕೆಂದೂ ನಿರ್ಧರಿಸಲಾಯಿತು. ಡಿಸೆಂಬರ್ 31 ರಂದು ಸದಸ್ಯತ್ವ ಮುಗಿದ ಎಲ್ಲರನ್ನು ಪೂರ್ವ ಪ್ರಮಾಣದ ಸದಸ್ಯರೆಂದು ತೆಗೆದುಕೊಳ್ಳುವುದು ಹಾಗೂ 1961 ರಲ್ಲಿ ಸದಸ್ಯತ್ವ ನವೀಕರಿಸದವರಿಗೆ ನವೀಕರಣಕ್ಕಾಗಿ ಒಂದು ಅವಕಾಶವನ್ನು ನೀಡುವುದು. ಆದರೆ ಮಹಾಧಿವೇಶನದಲ್ಲಿ ತಮ್ಮ ಪ್ರತಿನಿಧಿಗಳು ಯಾರಾಗಬೇಕು ಎನ್ನುವ ನಿರ್ಧಾರವನ್ನ ರಾಜ್ಯಸಮಿತಿಗಳ ವಿವೇಚನೆಗೆ ಬಿಡಲಾಯಿತು. ರಾಜ್ಯಗಳಿಂದ ಪ್ರತಿ 250 ಸದಸ್ಯರಿಗೆ ಒಬ್ಬ ಪ್ರತಿನಿಧಿ ಇರಬೇಕು; ಆದರೆ ಇಂಥ ಕನಿಷ್ಟ ಐವರು ಪ್ರತಿನಿಧಿಗಳನ್ನು ರಾಜ್ಯಗಳು ಕಳಿಸಬೇಕಾಗುತ್ತದೆ ಎಂದು ಕೂಡ ತೀರ್ಮಾನಿಸಲಾಯಿತು.

ಚೀನಾ-ಭಾರತ ಗಡಿ ವಿವಾದ ಕೂಡ ಅಜೆಂಡಾದಲ್ಲಿತ್ತು. ಗಡಿ ವಿವಾದವನ್ನು ಬಗೆಹರಿಸಲು ಶಾಂತಿಯುತ ಮಾತುಕತೆಗೆ ಪರ್ಯಾಯವಾದುದು ಇಲ್ಲ' ಎಂದು ಈಸಂಬಂಧ ಅಂಗೀಕರಿಸಿದ ಗೊತ್ತುವಳಿ ಹೇಳಿತು. 'ಪ್ರಥಮ ಅಂತರಾಷ್ಟ್ರೀಯದ'ಬ್ಗಗ್ಗೆ ಕೂಡ ಒಂದು ನಿರ್ಣಯವನ್ನು ಮಹಾಧಿವೇಶನ ಅಂಗೀಕರಿಸಿತು

ಜಾಗತಿಕ ಕಾರ್ಮಿಕ ವರ್ಗಕ್ಕೆ ನಿಷ್ಟವಾಗಿರಲು ಸಿಪಿಐ ಸಮಾವೇಶ ಬಯಸುತ್ತದೆ. 1964 ಸೆಪ್ಟೆಂಬರ್ 28 ನ್ನು ಪ್ರಥಮ ಅಂತಾರ್ರಾಷ್ಟ್ರೀಯವಾದ ಸ್ಥಾಪನೆಯ ಶತಮಾನೋತ್ಸವವನ್ನಾಗಿ ಗೌರವಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ" ಎಂದು ಗೊತ್ತುವಳಿ ಹೇಳಿತು. 1964 ಆಗಸ್ಟ್ 5, ಕಾಂ. ಮುಝಫರ್ ಅಹ್ಮದ್‌ರವರ 75ನೇ ಜನ್ಮದಿನವಾಗಿರುವುದರಿಂದ ಆ ದಿನವನ್ನು ಕೂಡ ಸೂಕ್ತವಾಗಿ ಆಚರಿಸಲು ನಿರ್ಣಯಿಸಲಾಯಿತು.

ಪಕ್ಷದ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಒಂದು ಸಂಘಟನಾ ಸಮಿತಿಯನ್ನು ರಚಿಸಲು ಸಮಾವೇಶ ನಿರ್ಧರಿಸಿತು. ರಾಷ್ಟ್ರೀಯ ಮಂಡಳಿಯ 32 ಸದಸ್ಯರಲ್ಲದೆ ಬಿಹಾರದ ಎಸ್.ಎಸ್. ಶ್ರೀವಾತ್ಸವ, ಅಸ್ಸಾಂನ ಅಚಿಂತ್ಯ ಭಟ್ಟಾಚಾರ್ಯ, ಮಹಾರಾಷ್ಟ್ರದ ಎಂ.ವೈ.ಕೊಲ್ಹಾಟ್ಕರ್, ಒರಿಸ್ಸಾದ ವನಮಾಲ ದಾಸ್ ಹಾಗೂ ಕರ್ನಾಟಕದಿಂದ ಒಬ್ಬ ಸದಸ್ಯರನ್ನು ಈ ಸಮಿತಿಯಲ್ಲಿ ಸೇರಿಸಲಾಯಿತು. ಸಂಘಟನಾ ಸಮಿತಿಯ ಕೆಲಸ ಕಾರ್ಯಗಳಿಗಾಗಿ 25 ಸಾವಿರ ರೂಪಾಯಿ ನಿಧಿಯನ್ನು ಸ್ಥಾಪಿಸುವ ಪ್ರಸ್ತಾವವನ್ನು ಮಂಡಿಸಲಾಯಿತು.

ತೆನಾಲಿ ಸಮಾವೇಶದಲ್ಲಿ ಪಾಲ್ಗೊಂಡ ಪ್ರತಿನಿಧಿಗಳ ರಾಜ್ಯವಾರು ವಿವರ ಹೀಗಿದೆ.

ಅಸ್ಸಾಂ -5, ದೆಹಲಿ-1, ತಮಿಳುನಾಡು-2, ಗುಜರಾತ್-1, ಜಮ್ಮು ಮತ್ತು ಕಾಶ್ಮೀರ-1, ಬಿಹಾರ -7, ಆಂಧ್ರಪ್ರದೇಶ-23, ಪಶ್ಚಿಮ ಬಂಗಾಳ-23, ಪಂಜಾಬ್-7, ರಾಜಸ್ಥಾನ-4, ಮಹಾರಾಷ್ಟ್ರ-10, ಉತ್ತರ ಪ್ರದೇಶ-10, ಹಿಮಾಚಲ ಪ್ರದೇಶ-1, ಮೈಸೂರು-4, ಒರಿಸ್ಸಾ-2, ಕೇರಳ-20 ಮತ್ತು ಕೇಂದ್ರ-3

ಏಳನೇ ಮಹಾಧಿವೇಶನ


ತೆನಾಲಿ ಸಮಾವೇಶ ಮುಗಿದ ತಕ್ಷಣವೇ ಏಳನೇ ಮಹಾಧಿವೇಶನದ ಸಂಬಂಧದ ಕೆಲಸ ಕಾರ್ಯಗಳು

ಪುಟ 3 ಕ್ಕೆ

ಶುಭಾಶಯಗಳೊಂದಿಗೆ



ರೇಷ್ಮೆ ಬೆಳೆಗಾರರ ಸಂಘ (ರಿ)



(ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸಂಯೋಜಿತ)
ಕೋರೆಗಾಲ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
ರಿ.ನಂ.69/ 99-2000

ಅಧ್ಯಕ್ಷರು	:	ಕೆ.ಸಿದ್ದರಾಜು
ಉಪಾಧ್ಯಕ್ಷರು	:	ಚಂದ್ರೇಶ್
ಕಾರ್ಯದರ್ಶಿ	:	ಲಕ್ಷ್ಮಿ ವೆಂಕಟಗೌಡ
ಸಹಕಾರ್ಯದರ್ಶಿ	:	ಕೆ.ಸಿದ್ದಲಿಂಗೇಗೌಡ
ಖಜಾಂಚಿ	:	ಸ್ವಾಮಿ ಉರುಫ್ ಕೆ.ಬಿ.ಚನ್ನೇಗೌಡ
ಸಂಚಾಲಕರು	:	ಮರಿಸ್ವಾಮಿ
ನಿರ್ದೇಶಕರು	:	ಗೋವಿಂದೇಗೌಡ
		ವಿ.ರಾಮು
		ಸಿದ್ದೇಗೌಡ
		ಕೆ.ಎಲ್.ಸಿದ್ದರಾಜು
		ಕೆ.ಬಿ.ಸಿದ್ದರಾಜು
		ಗೋವಿಂದೇಗೌಡ ಉರುಫ್ ದೊಡ್ಡತಮ್ಮಯ್ಯ
		ಮರೀಗೌಡ
		ಕೆಂಪೇಗೌಡ
		ಶ್ರೀನಿವಾಸ



ಮತ್ತು ಸದಸ್ಯರು

ಕರ್ನಾಟಕ ಈ ವಾರ

ಎಸ್.ವೈ.ಗುರುಶಾಂತ್

ಜನರ ಸಂಕಟಗಳು ಪ್ರತಿಧ್ವನಿಸದ ಸದನದ ಕಲಾಪಗಳು

ವಿಧಾನಸಭಾ ಅಧಿವೇಶನ ಪುನರಾರಂಭಗೊಂಡಿದೆ. ವಾರವೊಂದು ಕಳೆದರೂ ಕಲಾಪಗಳಲ್ಲಿ ಕಳೆಯಿಲ್ಲ. ಚರ್ಚೆಗಳಲ್ಲಿ ಮೊನಚಿಲ್ಲ. ಜನಜೀವನದ ನೋವು-ನರಳಿಕೆ, ಸಂಕಟಗಳ ಧ್ವನಿ ಇಲ್ಲವೇ ಇಲ್ಲ. ಹಳಸಲು ಪದಾರ್ಥಗಳಿಗೆ ಒಗ್ಗರಣೆ ಹಾಕುವುದೇ ಕಲಾಪವೆಂದಾಗಿದೆ.

ಅಧಿವೇಶನ ಆರಂಭಗೊಳ್ಳುವ ಮುನ್ನ ವಿರೋಧ ಪಕ್ಷವಾಗಿರುವ ಬಿಜೆಪಿ, ರಾಜ್ ಅಪಹರಣವನ್ನು



ಒಂದು ಗಂಭೀರ ಪ್ರಶ್ನೆಯನ್ನಾಗಿಸಿ, ಸರ್ಕಾರವನ್ನು 'ಇಕ್ಕಟ್ಟಿಗೆ' ಸಿಲುಕಿಸುವುದಾಗಿ ಹೇಳಿಕೊಂಡಿತು. ಆದರೆ ಕಳೆದ ಮೂರು ತಿಂಗಳಿಂದಲೂ ನಿಮ್ಮೊಂದಿಗೆ ಚರ್ಚಿಸುತ್ತಲೇ ಬಂದಿದ್ದೇವಲ್ಲ ... ಇನ್ನೇನಿದೆ' ಎಂಬ ಮುಖ್ಯಮಂತ್ರಿಗಳ ಮಾರುತ್ತರಕ್ಕೆ ಬಿಜೆಪಿಯಲ್ಲಿ ಉಸಿರಿಲ್ಲದಾಯಿತು. ಇದನ್ನು ಸಭಾಪತಿಗಳು ಚರ್ಚೆಗೆ ಎತ್ತಿಕೊಳ್ಳಲು ನಿರಾಕರಿಸಿದರು. ಹೀಗೆ ವಿರೋಧ ಪಕ್ಷವೆಂಬ ನಾಮ ಉಳಿಸಿಕೊಳ್ಳಲು ವಿರೋಧದ ಸಂಪ್ರದಾಯ ನಗೆಪಾಟಲಿಗೆ ಈಡಾಗುವಂತಹದ್ದು. ಹಾಗೆ ಗಮನಿಸಿದರೆ ಕಾಂಗ್ರೆಸ್‌ಗೂ, ಬಿಜೆಪಿಗೂ ಇತರೆ ಪಕ್ಷಗಳಿಗೂ ಜನರ ಸಮಸ್ಯೆಗಳನ್ನು ಆಳವಾಗಿ ಚರ್ಚೆಗೆ ಕೈಗೆತ್ತಿಕೊಳ್ಳುವುದು ಬೇಕಿಲ್ಲ. ಆರ್ಥಿಕ ನೀತಿಗಳಲ್ಲಂತೂ ಕಾಂಗ್ರೆಸ್-ಬಿಜೆಪಿಯಲ್ಲಿಯೇ ಅದರ ಜಾರಿಗೆ ಪೈಪೋಟಿ. ನಿಜವಾಗಿಯೂ ವಿಧಾನಸಭೆಯಲ್ಲಿ ಚರ್ಚಿಸಬೇಕಾದ ಜ್ವಲಂತ ಪ್ರಶ್ನೆಗಳಿವೆ. ಸರ್ಕಾರದ ವಿದ್ಯುತ್ ಬೆಲೆ ಹೆಚ್ಚಳ ಹಾಗೂ ಖಾಸಗೀಕರಿಸುವ ವಿದ್ಯುತ್ ನೀತಿ, ಕುಡಿಯುವ ನೀರಿನ ವ್ಯವಸ್ಥೆ ವಿದೇಶಿ ಕಂಪನಿಗಳಿಗೆ ಒಪ್ಪಿಸುವ ಖಾಸಗೀಕರಣದ ನೀತಿ, ದಿವಾಳಿಯೆಬ್ಬಿಸುತ್ತಿರುವ ಕೃಷಿ ನೀತಿಗಳು, ಬೆಳೆಗೆ ಬೆಲೆ ಸಿಗದೆ ಕಂಗಾಲಾಗಿರುವ ರೈತರು, ಕೆಲಸ, ಕೂಲಿ ಇಲ್ಲದಿರುವ ಕೂಲಿಕಾರರು, ಆತ್ಮಹತ್ಯೆಗೀಡಾದ ರೈತರು, ಮಳೆಯಿಂದ ಹಲವು ಜಿಲ್ಲೆಗಳಲ್ಲಿ ತತ್ತರಿಸಿ, ಹಾನಿಗೀಡಾದ ಜನತೆ, ಮುಚ್ಚುತ್ತಲೇ ಇರುವ ಕೈಗಾರಿಕೆಗಳು - ಸಣ್ಣ ಕೈಗಾರಿಕೆಗಳ ಬಿಕ್ಕಟ್ಟು, ಕಾರ್ಮಿಕರ ಸಮಸ್ಯೆಗಳು, ಪಡಿತರ ವ್ಯವಸ್ಥೆ, ಡಿಸೇಲ್, ಪೆಟ್ರೋಲ್, ಗ್ಯಾಸ್, ಸೀಮೆಎಣ್ಣೆ ಬೆಲೆ ಹೆಚ್ಚಿಸಿದ ಕೇಂದ್ರದ ಕ್ರಮಗಳು, ಬಸ್, ಆಟೋ ಪ್ರಯಾಣ ದರಗಳ ಹೆಚ್ಚಳ.... ಶಿಕ್ಷಣ ಶುಲ್ಕಗಳ ಸುಲಿಗೆ... ಒಂದೇ ಎರಡೆ.... ನೂರಾರು. ಜನರ ಪ್ರಶ್ನೆಗಳು ಇಲ್ಲಿವೆ. ಆದರೆ ಇವಾವೂ ಸದನದಲ್ಲಿ ಅವಕಾಶ ಪಡೆಯಬಾರದೆಂದೇ ಅಷ್ಟಾಗಿ ಪ್ರಶ್ನೆಗಳಾಗಿರದ ಪ್ರಶ್ನೆಗಳನ್ನೇ ರಾದ್ಧಾಂತ ಮಾಡಿ, ಕಡಿದು, ಕಟ್ಟು ಹಾಕಿದಂತೆ ನಟಿಸಿ, ಕಲಾಪಗಳನ್ನು ಮುಗಿಸಿದರೆ ಅಲ್ಲಿಗೆ ಸರ್ಕಾರ ನಿರುಮ್ಮಳ. ವಿರೋಧ ಪಕ್ಷಕ್ಕೂ ಸಾರ್ಥಕ. ಹೀಗೆ ನಾಡಿನ ಸಂಕಟಗಳು, ಜನರ ಆಕ್ರಂದನ, ಅಳಲು ವಿಧಾನಸಭೆಯಲ್ಲಿ ಪ್ರತಿಧ್ವನಿಸುತ್ತಿಲ್ಲ. ಅಂತಹ ಜನಪ್ರತಿನಿಧಿಗಳೂ ಕಾಣಬರುತ್ತಿಲ್ಲ. ಸದನದ ಆಚೆಗಿನ ಜನರ ಪ್ರತಿಭಟನೆ ಘರ್ಜನೆ ಮಾತ್ರ ಸದನದೊಳಗಿನ 'ಜಾಣ'ರನ್ನು ಎಬ್ಬಿಸಬಲ್ಲದು.

ವಾಹನ ನಿಲುಗಡೆ ಶುಲ್ಕವೆಂಬ ನಾಗರೀಕರ ಸುಲಿಗೆ

ನವೆಂಬರ್ 1 ಕ್ಕೆ ಉಡುಗೊರೆಯನ್ನು ನೀವು ಹುಡುಕಿಕೊಂಡು ಹೋಗಬೇಕಿಲ್ಲ. ನಿಂತಲ್ಲೇ ಸಿಗಲಿದೆ. ಈಗಾಗಲೇ ಮಹಾನಗರ ಪಾಲಿಕೆ ಅದನ್ನು ನಿಗದಿಪಡಿಸಿದೆ. ನಿಮ್ಮಲ್ಲಿ ದ್ವಿಚಕ್ರವಾಹನ ಅಥವಾ ಕಾರು, ಲಾರಿ ಇದ್ದರೆ ಸರಿ. ನಿಮ್ಮ ಜೇಬಿಗೆ ಕತ್ತರಿ ಖಾತರಿ.

ಸಾರ್ವಜನಿಕ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಇದೀಗ ಶುಲ್ಕ ವಸೂಲು ಮಾಡಲು ಮಹಾನಗರ ಪಾಲಿಕೆ ನಿರ್ಧರಿಸಿದೆ. ಸ್ಕೂಟರ್‌ಗೆ 2 ರೂ..ಗಳಿಂದ 5 ರೂ.ಗಳಿಗೆ(2 ತಾಸಿಗೆ) ಕಾರು ಇದ್ದಲ್ಲಿ ಕನಿಷ್ಟ ರೂ 10... ಹೀಗೆ ನೀವೊಬ್ಬ ಸ್ಕೂಟರ್ ಸವಾರನಾದರೂ ನಾಲ್ಕಾರು ಕೆಲಸಗಳಿದ್ದರೆ ಕನಿಷ್ಟ ದಿನಕ್ಕೆ 20-25 ರೂ.ಗಳನ್ನು ತೆರಬೇಕಾಗುತ್ತದೆ. ಉದಾರೀಕಣದ ಜಮಾನದಲ್ಲಿ ಯಾವುದೂ ಉಧ್ರಿ ಸಿಗೋದಿಲ್ಲಾರೀ.... ಎಲ್ಲಕ್ಕೂ ಬೆಲೆ ಬಂದಿದೆ. ಕಬ್ಬನ್‌ಪಾರ್ಕ್ ನಲ್ಲಿ ಹವಾ ಸೇವಿಸಬೇಕೆಂದರೆ ಅದಕ್ಕೂ ಪ್ರವೇಶ ಶುಲ್ಕ, ಕುಡಿಯುವ ನೀರಿಗೆ, ರಸ್ತೆಗೆ, ಸೇತುವೆಗೆ, ವಿದ್ಯುತ್‌ಗೆ ಎಲ್ಲವುಗಳೂ ಈಗ ಮಾರಾಟಕ್ಕೆ. ಹೀಗೆ ಎಲ್ಲೆಡೆ ಲೂಟಿ ನಡೆಯುತ್ತಿರುವಾಗ ಜಾಗ ಪುಕ್ಕಟೆ ಸಿಗಲಾರದು. ಈಗಾಗಲೇ ನಾಗರೀಕರು ಇಂತಹ ಹಲವು ಸುಲಿಗೆಗಳಿಂದ ತತ್ತರಿಸುವಾಗಲೇ ಬಹಳ ತುರುಸಿನಿಂದ ವಾಹನ ನಿಲುಗಡೆ ಶುಲ್ಕವೂ ಜಾರಿಗೆ ಸಿದ್ಧವಾಗಿದೆ. ನಾಗರಿಕರ ಮೊರೆ ಸರ್ಕಾರಕ್ಕೆ, ಮಹಾನಗರ ಪಾಲಿಕೆ ಆಡಳಿತಕ್ಕೆ ಕೇಳಿಸುತ್ತಿಲ್ಲ. ಆದ್ದರಿಂದ ಸರ್ಕಾರ ಮಧ್ಯಪ್ರವೇಶಿಸಿ ಈ ಶುಲ್ಕದ ಸುಲಿಗೆ ನಿಲ್ಲಿಸಬೇಕು. ಖಾಸಗಿಯಾಗಿ ಈಗಾಗಲೇ ಅನಧಿಕೃತವಾಗಿ ಹಣ ಸುಲಿಗೆ ನಡೆಯುತ್ತಿದೆ. ಅದನ್ನು ತಡೆಗಟ್ಟಬೇಕು.... ಬಹುಶಃ ಸಾಲ ನೀಡುವ ಸರದಾರ ವಿಶ್ವಬ್ಯಾಂಕ್‌ನ ಅಧ್ಯಕ್ಷ ಮುಂದಿನ ವಾರ ಬೆಂಗಳೂರಿಗೆ ಬರುತ್ತಿರುವ ಮೊದಲೇ 'ತಾವು ಎಷ್ಟು ಸುಲಿಯಬಲ್ಲವರು, ವಿಶ್ವಬ್ಯಾಂಕಿನ ಶರತ್ತಿಗೆ ನಿಷ್ಠರು' ಎಂದು ತೋರಿಸಲು ಸರ್ಕಾರ ಬಯಸಿದಂತಿದೆ.

ಬರುತ್ತಿದ್ದಾನೆ, ನಾಡು ನುಂಗುವ ಕಿರಾತಕ

ವಿಶ್ವಬ್ಯಾಂಕ್‌ನ ಅಧ್ಯಕ್ಷ ಜೇಮ್ಸ್ ಡಿ.ವುಲ್ಫೆನ್ಸನ್ ನವೆಂಬರ್ 7 ರಂದು ಬೆಂಗಳೂರಿಗೆ ಬರಲಿದ್ದಾನೆ. ಸರ್ಕಾರ ಚುರುಕುಗೊಂಡು, ತಮ್ಮ ಪಾಲಿಗೆ ಬಂದ ಮಹಾ ಪಂಚಾಮೃತವೆಂದು ರತ್ನಗಂಬಳಿ ಹಾಕಿ ಸ್ವಾಗತಿಸಲು ಸಂಭ್ರಮಿಸುತ್ತಿದೆ. ದೇಶದ-ರಾಜ್ಯದ ಜನತೆಯ ಸಾರ್ವಭೌಮತೆಯನ್ನು, ಸ್ವಾತಂತ್ರ್ಯವನ್ನು ವಿಶ್ವಬ್ಯಾಂಕ್-ಐಎಂಎಫ್ ಪಾದಾರವಿಂದಗಳಲ್ಲಿ ಅರ್ಪಿಸಲು ಸಡಗರದ ಸಿದ್ಧತೆಯಲ್ಲಿ ತೊಡಗಿರುವ ಸರ್ಕಾರದ ನಿಲುವು ಅತ್ಯಂತ ಹೇಯ ಗುಲಾಮತನದ್ದು.

ಈ ಅಧ್ಯಕ್ಷ ಬರುತ್ತಿರುವುದು ನಗರ-ನಾಡು ಸಂದರ್ಶನಕ್ಕಲ್ಲ. ಈಗಾಗಲೇ ನೀಡಿರುವ ಸಾಲದಲ್ಲಿ ಏನೇನು 'ಅಭಿವೃದ್ಧಿ' ಆಗಿದೆ ಎಂದು ನೋಡಲು. ಮತ್ತೆ ಸಾಲ ನೀಡಲು! ಅರ್ಥಾತ್ ಅವರ ಆಜ್ಞೆ-ಷರತ್ತುಗಳನ್ನು ಸರಿಯಾಗಿ ಪಾಲಿಸಿದ್ದರೆ ಶಹಬ್ಬಾಸ್ ಗಿರಿ ನೀಡುವುದು. ಮತ್ತೆ ಹೊಸ ಒಪ್ಪಂದಗಳ ಮೂಲಕ ಶರತ್ತುಗಳನ್ನು ಅಂಗೀಕರಿಸಿದರೆ, ಹೇಳಿದಷ್ಟು ಬಾಗಿದರೆ ಹೊಸ ಕಂತಿನ ಸಾಲ ನೀಡುವುದು.... ಇದರ ಗುಟ್ಟು. ಈ ಬಾರಿ ಒಟ್ಟು 2.5 ಬಿಲಿಯನ್ ಡಾಲರ್ ಸಾಲ ನೀಡುವರಂತೆ. 330 ಮಿಲಿಯನ್ ಡಾಲರ್ ರಸ್ತೆಗೆ, 250 ಮಿಲಿಯನ್ ಡಾಲರ್ ನೀರಿಗೆ, 1.5 ಮಿಲಿಯನ್ ವಿದ್ಯುತ್ ಉತ್ಪಾದನೆಗೆ, 200 ಕೋಟಿ ಡಾಲರ್ ನೀರಾವರಿ ಇತ್ಯಾದಿಗೆ.... ಈ ನೆರವಿನ ಪ್ರಮಾಣ ಊಹಿಸಿದರೇ ಸಾಕು, ಎಂತಹ ವಿಪತ್ತು ಎರಗಲಿದೆಯೋ? ಜನರ ಜೀವನ, ಅದೆಷ್ಟು ಕೊರಗಬೇಕಾಗಿದೆಯೋ? ಎಂಬುದು ಅರಿವಾಗುತ್ತದೆ. ಈ ಪಾತಕ ಕೆಲಸಕ್ಕೆ ಕೃಷ್ಣರ ಸರ್ಕಾರ ಹಾತೊರೆಯುತ್ತಿರುವುದು ಖಂಡನೀಯ. ಎಲ್ಲವನ್ನೂ ನುಂಗಿ ನೀರು ಕುಡಿಯುವ ಈ ಖದೀಮರ ದುಷ್ಟ ಯೋಜನೆಗಳ ವಿರುದ್ಧ ಸೂಕ್ತ ಪ್ರತಿಭಟನೆ ಭುಗಿಲೇಳಬೇಕಿದೆ. ಜಗತ್ತಿನ ವಿವಿಧ ಕಡೆ ಜನತೆ ನೀಡಿದ ಪ್ರತಿಭಟನೆಯ ತಕ್ಕ ಸನ್ಮಾನ ಇಲ್ಲೂ ನೀಡಬೇಕಿದೆ.

ಉಚ್ಚಾಟನೆಯಿಂದ ಕ್ಷಮಾಯಾಚನೆಯತ್ತ ಬಿಜೆಪಿ

ಬಿಜೆಪಿಯಲ್ಲಿ ಬಿಕ್ಕಟ್ಟು ಮತ್ತೇ ಮರುಕಳಿಸಿದೆ. ಶಾಸಕ, ಹಿರಿಯ ನಾಯಕ ಬಿ.ಬಿ.ಶಿವಪ್ಪನವರನ್ನು ಪಕ್ಷದಿಂದ ಉಚ್ಚಾಟಿಸಿದ ಬಳಿಕ ಕುದಿಯುತ್ತಿದ್ದ ಅತೃಪ್ತಿ ಹೊರಬರುತ್ತಿದೆ. ವಿಧಾನಸಭಾ ಅಧಿವೇಶನ ಆರಂಭಗೊಳ್ಳುವ ಸಂದರ್ಭದಲ್ಲಿ ಬಹಿರಂಗವಾಗಿಯೇ ಕೆಲವು ಶಾಸಕರು ಶಿವಪ್ಪನವರಿಗೆ ಬೆಂಬಲಿಸಿ, ಬಿಜೆಪಿ ನಾಯಕತ್ವ ಟೀಕಿಸಿದ್ದಾರೆ. ಬಂಡಾಯವೆದಿದ್ದಾರೆ. ಹಾಗೆ ನೋಡಿದರೆ ಕಳೆದ ವಿಧಾನಸಭಾ-ಲೋಕಸಭಾ ಚುನಾವಣೆಗಳಿಂದ ಇಲ್ಲಿಯವರೆಗೂ ಬಿಜೆಪಿ ಒಳಗೆ ಒಂದಿಲ್ಲೊಂದು ಬಂಡಾಯ, ಒಳಜಗಳ ರಂಪಾಟ ನಡೆದೇ ಇದೆ. ಈ ದಿನಗಳಲ್ಲಿ ಬೆಲೆ ಏರಿಕೆ, ತೆರಿಗೆಗಳ ಸುಲಿಗೆ, ಜನರ ಸಮಸ್ಯೆಗಳಿಗೆ ಪರಿಹಾರ ನೀಡದೇ, ಕಷ್ಟಗಳ ಹೊರೆ ಹೊರಿಸುತ್ತಿರುವ ಕೇಂದ್ರ ಬಿಜೆಪಿ ಸರ್ಕಾರದ ನೀತಿಗಳು ಜನರಲ್ಲಿ ಅತೃಪ್ತಿ ಹುಟ್ಟಿಸಿವೆ. ದಿನದಿಂದ ದಿನಕ್ಕೆ ಜನರಿಂದ ಬಿಜೆಪಿ ದೂರ ತಳ್ಳಲ್ಪಡುತ್ತಿದೆ. ಪಂಚಾಯತ್ ಚುನಾವಣೆಗಳ ಫಲಿತಾಂಶ ಬಿಜೆಪಿಗೆ ಮುಖಭಂಗ ತಂದಿದೆ. ಪರಿಸ್ಥಿತಿ ಹೀಗಿರುವಾಗ ಪಕ್ಷ ವಿಭಜನೆ ಆದರೆ ಹೇಗೆ? ಎಂಬ ಆತಂಕ ಸಹಜವಾಗಿಯೇ ನಾಯಕ ಮಣಿಗಳನ್ನು ಕಾಡುತ್ತಿದೆ. ವಿವಿಧ ಜಿಲ್ಲೆಗಳ ಸ್ಥಿತಿಯೂ ಭಿನ್ನವಿಲ್ಲ. ಆದ್ದರಿಂದ ಶಿವಪ್ಪನವರು ಕ್ಷಮಾಪಣೆ ಕೇಳಿದರೆ ಶಿಸ್ತುಕ್ರಮ ರದ್ದು ಪಡಿಸಬಹುದು ಎಂಬ 'ರಾಜೀ ಸೂತ್ರ' ಸಹ ಮಂಡಿಸಲಾಗಿದೆ. ಒಟ್ಟಾರೆ ಬಿಜೆಪಿಗೆ ತನಗಂಟಿರುವ 'ಕಜ್ಜಿ ತುರಿಕೆಯ ಕಲಾಪಗಳಲ್ಲಿ ಕಾಲಹರಣ. ಈ ದೇಶಪ್ರೇಮಿಗಳಿಗೆ ಜನರ ಬಗ್ಗೆ ಚಿಂತಿಸಲು ಪುರುಸೊತ್ತು ಎಲ್ಲಿ?

ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಜನರನ್ನು ಹಾದಿ ತಪ್ಪಿಸುವುದು ಬೇಡ

ನವೆಂಬರ್ ಒಂದರಂದು ಹೈದ್ರಾಬಾದ್-ಕರ್ನಾಟಕದಲ್ಲಿ ಕರಾಳದಿನವನ್ನಾಗಿ ಆಚರಿಸುವುದಾಗಿ ಮಾಜಿ ಸಚಿವ ವೈಜನಾಥ ಪಾಟೀಲರು ಹೇಳಿದ್ದಾರೆ. ಆಘಾತಕಾರಿ ಪರಿಣಾಮ ಬೀರಬಲ್ಲದ್ದನ್ನು, ಏನೊಂದು ಯೋಚಿಸದೇ ಹಗುರವಾಗಿ ನಾಲಿಗೆ ತುದಿಯಿಂದ ತೇಲಿಸಿ ಬಿಡಬಲ್ಲ ನಿಪುಣತೆ ಇವರಿಗಿರಬಹುದು. ಇದು ಅವರ ಬೇಜವಾಬ್ದಾರಿತನದ ಪರಮಾವಧಿ. ಈ ಪ್ರದೇಶವು ಹಿಂದುಳಿದಿದೆ, ಅದಕ್ಕೆ ಹಲವಾರು ಕಾರಣಗಳೂ ಇವೆ. ಬರೀ ಈ ಪ್ರದೇಶ ಮಾತ್ರವಲ್ಲ ಇಡೀ ಕರ್ನಾಟಕ ಹಾಗೂ ಭಾರತವೇ ಹಿಂದುಳಿದಿದೆ. ಇದಕ್ಕೆ ಕಾರಣವಾದ ನೀತಿಗಳನ್ನು ಕಿತ್ತೆಸೆದು ಪರ್ಯಾಯ ಅಭಿವೃದ್ಧಿ ಮಾರ್ಗ ತೋರಿಸಿ, ಅದಕ್ಕಾಗಿ ಹೋರಾಡುವ ಛಲದ ಮಾರ್ಗ ಪರಿಹಾರ ತರಬಲ್ಲದು. ಅದನ್ನು ಬಿಟ್ಟು ಸಮಸ್ಯೆಗಳಿಗೆ ಮೂಲ ಕಾರಣವಾದ ಶಕ್ತಿಗಳು, ಸಂದರ್ಭಗಳನ್ನು ಗುರುತಿಸದೇ ಮರೆಸುವುದು, ಹೋರಾಟ ಅಭಿನಯಿಸುವುದು, ಸಮಸ್ಯೆ ಇತ್ಯರ್ಥಕ್ಕೆ ಸಹಾಯಕವೇ? ಪಾಟೀಲರ ಈ ಕರೆಯು ಒಂದೇ ಭಾಷೆ ಮಾತನಾಡುವವರು ಒಂದೆಡೆ ಕಲೆತು, ಅಭಿವೃದ್ಧಿ ಸಾಧಿಸುವ ಭಾಷಾವಾರು ಪ್ರಾಂತ್ಯಗಳ ರಚನೆಯ ಪ್ರಜಾಸತ್ತಾತ್ಮಕ ಮೂಲಆಶಯಕ್ಕೆ ವಿರುದ್ಧವಾದದು. ಈಗಾಗಲೇ ಇಂತಹ ಒಗ್ಗಟ್ಟನ್ನು, ರಾಷ್ಟ್ರೀಯತೆಯನ್ನು ಒಡೆದು ದುರ್ಬಲಗೊಳಿಸಿ ಕೇಂದ್ರದ ಫ್ಯಾಸಿಸ್ಟ್ ಮಾದರಿಯ ಹಿಡಿತ ಹೇರಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಹವಣಿಸುತ್ತಿರುವಾಗಲೇ ಕರ್ನಾಟಕದಿಂದ ದೂರ ಸರಿಯುವಂತಹ ಮಾತುಗಳು, ಯಾರ ಹಿತಗಳನ್ನು ಬಲಪಡಿಸಬಲ್ಲವು ಎಂದು ಯೋಚಿಸಬೇಕು. ಈ ಸ್ಥಿತಿಗೆ ಕಾರಣವಾದ ಆರ್ಥಿಕ, ಸಾಮಾಜಿಕ-ರಾಜಕೀಯ ನೀತಿಗಳ ವಿರುದ್ಧ ಸಮಗ್ರ ಅಭಿವೃದ್ಧಿಗಾಗಿ ಹೋರಾಡಲು ಮುಂದಾಗಬೇಕು. ಒಗ್ಗಟ್ಟಿಗೆ ಭಂಗ ತರುವುದನ್ನು ಬಿಡಬೇಕು. ಇಲ್ಲವೇ ಜನರೇ ಅಂತಹವರನ್ನು ತಿರಸ್ಕರಿಸಬೇಕು.

ಜ್ಯೋತಿಬಸು ಆತ್ಮಕಥನ

ಪುಟ 2 ರಿಂದ

ಆರಂಭವಾದವು. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ನೀತಿಗಳು ಮತ್ತು ಸಿದ್ಧಾಂತಗಳನ್ನು ಆಧರಿಸಿದ ಒಂದು ಹೊಸ ಪಕ್ಷವನ್ನು ತೆನಾಲಿ ಸಮಾವೇಶದಲ್ಲಿ ಸ್ಥಾಪಿಸಲಾಯಿತು. ದೇಶಾದ್ಯಂತ ಸಭೆಗಳು ನಡೆದವು.

ಐತಿಹಾಸಿಕ ಏಳನೇ ಮಹಾಧಿವೇಶನ ತ್ಯಾಗರಾಜ ಹಾಲ್‌ನಲ್ಲಿ ಆರಂಭವಾಯಿತು. ಸ್ಮಾರಕದ ಸಮೀಪದ ಮೈದಾನದಲ್ಲಿ ಎ.ಕೆ.ಜಿ. ಅಧ್ಯಕ್ಷತೆಯಲ್ಲಿ ರ್‍ಯಾಲಿ ನಡೆಯಿತು. ಏಳನೇ ಮಹಾಧಿವೇಶನದ ಕಲಾಪಗಳ ವಿಚಾರದಲ್ಲಿ ಬೇರೊಂದು ಅಧ್ಯಾಯದಲ್ಲಿ ವಿವರವಾಗಿ ಪ್ರಸ್ತಾಪಿಸುತ್ತೇನೆ. ಆದರೆ, ಮಹಾಧಿವೇಶನದ ಸಂದರ್ಭದಲ್ಲಿ ಪಿ.ಸಿ.ಸೇನ್ ನೇತೃತ್ವದ ಸರಕಾರ ನಡೆಸಿದ ದೌರ್ಜನ್ಯದ ಬಗ್ಗೆ ಇಲ್ಲಿ ಉಲ್ಲೇಖಿಸುವುದು ಅಗತ್ಯವೆನಿಸುತ್ತದೆ.

ಅಕ್ಟೋಬರ್ 30 ರಂದು ವ್ಯಾಪಕ ದಾಳಿ ಮತ್ತು ಬಂಧನಗಳನ್ನು ನಡೆಸಲಾಯಿತು. ರಾಷ್ಟ್ರೀಯ ಭದ್ರತಾ ಕಾನೂನಿನ(ಎನ್.ಎಸ್.ಎ) ಪ್ರಕಾರ ನಮ್ಮ ಪಕ್ಷದ ಬಹುತೇಕ ಮುಖಂಡರನ್ನು ಬಂಧಿಸಲಾಯಿತು.

ಮುಝಫರ್ ಅಹಮದ್, ಪ್ರಮೋದ್ ದಾಸ್‌ಗುಪ್ತಾ, ಹರೇಕೃಷ್ಣ ಕೋನಾರ್, ಸಮರ್ ಮುಖರ್ಜಿ, ನಿರಂಜನ ಸೇನ್‌ಗುಪ್ತ, ಬೀರೇನ್ ಡೇ ಸರ್ಕಾರ್ ಮತ್ತು ಲಕ್ಷ್ಮಿ ಸೇನ್ ಅವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲಾಯಿತು. ಆದರೆ ಪಕ್ಷದ ಮಹಾಧಿವೇಶನದ ಕಲಾಪಗಳಲ್ಲಿ ಅಸ್ತವ್ಯಸ್ತಗೊಳಿಸುವ ರಾಜ್ಯ ಸರಕಾರದ ಪಿತೂರಿ ಫಲಿಸಲಿಲ್ಲ. ಮಹಾಧಿವೇಶನ ಸ್ಫೂರ್ತಿ ಹಾಗೂ ಉಲ್ಲಾಸದ ವಾತಾವರಣದಲ್ಲಿ ನಡೆಯಿತು. ಸಾರ್ವಜನಿಕ ರ್‍ಯಾಲಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದರು. ಪಕ್ಷದ 10ನೇ ರಾಜ್ಯ ಸಮ್ಮೇಳನದಲ್ಲಿ ಕಾಂ. ಪ್ರಮೋದ್ ದಾಸ್‌ಗುಪ್ತಾ ರಾಜ್ಯಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. ದಾಸ್‌ಗುಪ್ತಾ ಮತ್ತು ಕೋನಾರ್ ಮೊದಲಾದ ಮುಖಂಡರು ಜೈಲಿನಲ್ಲಿದ್ದರೂ ರಾಜ್ಯಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸಲಾಯಿತು.

ನವೆಂಬರ್ 7 ರಂದು ಸಾರ್ವಜನಿಕ ರ್‍ಯಾಲಿ ಮುಗಿದ ಮೇಲೆ ಏಳನೇ ಅಧಿವೇಶನ ಮುಕ್ತಾಯವಾಯಿತು. ಪಕ್ಷದ ಆಂತರಿಕ ಕಲಹಗಳಿಗೆ ನಾವು ಬಲಿಯಾಗುತ್ತೇವೆಂದು ಅನೇಕ ಜನರು ಭಾವಿಸಿದ್ದರು. ಕಲ್ಕತ್ತದಲ್ಲಿ ನಡೆದ ಪಕ್ಷದ ಮಹಾಧಿವೇಶನದಲ್ಲಿ ಪಾಲ್ಗೊಂಡ ಸದಸ್ಯರಲ್ಲಿ ಒಗಟ್ಟಿಲ್ಲ, ಡಾಂಗೆ ನಿಷ್ಠರ ವಿರುದ್ಧವಷ್ಟೇ ಇವರು ಒಂದಾಗಿದ್ದಾರೆ ಎಂಬ ಮಾತುಕೂಡ ಕೇಳಿಬಂದಿತ್ತು. ಕಮ್ಯುನಿಸ್ಟ್ ಪಕ್ಷದ ತಕ್ಷಣದ ಹಾಗೂ ಭವಿಷ್ಯದ ಜವಾಬ್ದಾರಿ ಮತ್ತು ಕರ್ತವ್ಯಗಳ ವಿಚಾರದಲ್ಲಿ ಸರ್ವಸಮ್ಮತ ಗೊತ್ತುವಳಿಗಳನ್ನು ಮಹಾಧಿವೇಶನ ಅಂಗೀಕರಿಸಿರುವುದನ್ನು ಈ ಜನರು ಬೇಕೆಂತಲೇ ನಿರ್ಲಕ್ಷಿಸುತ್ತಾರೆ.

ಮೊದಲನೆಯದಾಗಿ, ರಾಜಕೀಯ-ಸಂಘಟನಾತ್ಮಕ ಗೊತ್ತುವಳಿಯನ್ನು ಸರ್ವಸಮ್ಮತಿಯಿಂದ ಅಂಗೀಕರಿಸಲಾಯಿತು. ಪಕ್ಷದಿಂದ ಪರಿಷ್ಕರಣವಾದಿಗಳನ್ನು ಹೊರಹಾಕಬೇಕಾಗಿರುವುದು ಅಗತ್ಯವೆಂಬ ವಿಚಾರದಲ್ಲಿ ಒಮ್ಮತ ಇರುವುದನ್ನು ಗೊತ್ತುವಳಿಯ ಅಂಗೀಕಾರಕ್ಕೆ ಮುನ್ನ ಖಾತರಿಪಡಿಸಿಕೊಳ್ಳಲಾಯಿತು; ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಮತ್ತು ಈ ಸಂಬಂಧ ಕಮ್ಯುನಿಸ್ಟ್ ಪಕ್ಷದ ಪಾತ್ರದ ಬಗೆಗಿನ ಅಭಿಪ್ರಾಯಗಳಲ್ಲಿ ಭಿನ್ನತೆ ಇರಲಿಲ್ಲ.

(ಮುಂದುವರಿಯುವುದು)

ಜನಾರೋಗ್ಯದ ಸುಳ್ಳುಗಳು



ಸ್ವಾತಂತ್ರ್ಯದ 33 ವರ್ಷದ ನಂತರ ಜನಾರೋಗ್ಯ ಪರಿಸ್ಥಿತಿ ಸುಧಾರಿಸಬೇಕಿತ್ತು ಎಂಬ ಆಶಯ ಸ್ವಾಭಾವಿಕ. ಈ ಸಮಯದಲ್ಲಿನ ವಿಜ್ಞಾನ ಹಾಗೂ ತಂತ್ರಜ್ಞಾನ ಬೆಳವಣಿಗೆ ಅಪಾರ, ಆರೋಗ್ಯ ಸೇವೆಗಳಲ್ಲಿ (ಆಸ್ಪತ್ರೆ, ವೈದ್ಯರು, ಔಷಧಿಗಳು) ಸಾಕಷ್ಟು ಪ್ರಗತಿಯಾಗಿದೆ. ಆದರೂ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಲೇ ಇವೆ. ಏಡ್ಸ್‌ರೋಗ ಹೆಚ್ಚುತ್ತಿದೆ. ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಬೆಳೆದರೂ, ಪೌಷ್ಟಿಕಾಂಶದ ಕೊರತೆಯಿಂದ ಉಂಟಾದ ರೋಗಗಳು ಹೆಚ್ಚಾಗಿಯೇ ಕಂಡುಬರುತ್ತಿವೆ. ಆರೋಗ್ಯ ಸೇವೆಗಳು ಸರಕಾರಿ ಕ್ಷೇತ್ರಕ್ಕಿಂತ ಖಾಸಗೀ ಕ್ಷೇತ್ರದಲ್ಲೇ ಹೆಚ್ಚಿದ್ದು ಜನಸಾಮಾನ್ಯರಿಗೆ ಕೊಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆರೋಗ್ಯ ಕ್ಷೇತ್ರದಲ್ಲಿನ ಬೆಳವಣಿಗೆ ಕೆಲವರಿಗೆ ಮಾತ್ರ ಲಭ್ಯವಿದೆ. ಹೆಚ್ಚಿನ ಜನರು ವಂಚಿತರಾಗುತ್ತಿದ್ದಾರೆ. ಇಂದು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿ ಜಾರಿಯಲ್ಲಿದೆ. ಈ ನೀತಿಯಿಂದಾಗಿ ಆರೋಗ್ಯ ಪರಿಸ್ಥಿತಿ ಸುಧಾರಿಸುತ್ತದೆಂಬ ಭ್ರಮೆ ಹುಟ್ಟಿಸಲಾಗಿದೆ. ಆದರೆ ಜನಾರೋಗ್ಯ ಸುಧಾರಣೆಯ ಉದ್ದೇಶವನ್ನು ಕಡೆಗಣಿಸಲಾಗಿದೆ. ಜನಾರೋಗ್ಯ ಸುಧಾರಣೆಯ ಮಿಥ್ಯವನ್ನು ಸೃಷ್ಟಿಸಿ ಪ್ರಚಾರ ಮಾಡಲಾಗುತ್ತಿದೆ. ಸತ್ಯಾಂಶವನ್ನು ಅರಿಯಲು ಈ ಮಿಥ್ಯಗಳನ್ನು ಪರಿಶೀಲಿಸೋಣ.

ಡಾ|| ಪ್ರಕಾಶ್ ಸಿ.ರಾವ್

ಮಿಥ್ಯ: ಆರೋಗ್ಯ ಸುಧಾರಣೆ ವೈದ್ಯಕೀಯ ತಂತ್ರಜ್ಞಾನ ಹಾಗೂ ಆರ್ಥಿಕ ಬೆಳವಣಿಗೆಯನ್ನು ಅವಲಂಬಿಸುತ್ತದೆ.

ಸತ್ಯ: ಹೊಸ ಆರ್ಥಿಕ ನೀತಿಯಿಂದಾಗಿ ವಿಶ್ವಬ್ಯಾಂಕ್ ಹಾಗೂ ಐಎಂಎಫ್ ಇಂದು ಭಾರತದ ಆರೋಗ್ಯ ಕ್ಷೇತ್ರದಲ್ಲೂ ಹಸ್ತಕ್ಷೇಪ ಮಾಡುತ್ತಾ ಬಂದಿದೆ. ಜನಾರೋಗ್ಯ ಸುಧಾರಿಸಲು ವೈದ್ಯಕೀಯ ತಂತ್ರಜ್ಞಾನ ಹಾಗೂ ಆರ್ಥಿಕ ಬೆಳವಣಿಗೆಯನ್ನು ಸುಧಾರಿಸಲು ಕರೆ ಕೊಟ್ಟಿದೆ. ಜನಾರೋಗ್ಯ ಸುಧಾರಿಸಲು ವೈದ್ಯಕೀಯ ತಂತ್ರಜ್ಞಾನ ಹಾಗೂ ಆರ್ಥಿಕ ಬೆಳವಣಿಗೆ ಅಗತ್ಯ ಆದರೆ ಅದಕ್ಕಿಂತಲೂ ಜೀವನದ ಗುಣಮಟ್ಟ, ಸ್ವಚ್ಛ ಕುಡಿಯುವ ನೀರು, ಪೌಷ್ಟಿಕ ಆಹಾರ, ನೈರ್ಮಲ್ಯಕರ ವಾತಾವರಣ ಹೆಚ್ಚು ಮುಖ್ಯವಾಗುತ್ತದೆ. ಇದಲ್ಲದೆ ಶಿಕ್ಷಣ, ಉದ್ಯೋಗ, ನ್ಯಾಯವಾದ ಕೂಲಿ ಮುಂತಾದವುಗಳನ್ನು ಜನರಿಗೆ ದೊರಕಿಸಿಕೊಡಬೇಕಾಗುತ್ತದೆ. ಆದ್ದರಿಂದ ವಿಶ್ವಬ್ಯಾಂಕ್ ಹಾಗೂ ಐಎಂಎಫ್ ನ ಈ ಆದೇಶ ಅವೈಜ್ಞಾನಿಕ ಹಾಗೂ ಅಪ್ರಯೋಜಕ. ಈ ಆದೇಶಗಳು ಶ್ರೀಮಂತ ವರ್ಗವನ್ನು ಪೋಷಿಸುತ್ತದೆ. ಶ್ರೀಮಂತ ವರ್ಗದಿಂದ ಲಾಭ ಸೇರಿಸಿ ಬಡಜನರಿಗೆ ಹೋಗಿ ಅವರಿಗೂ ಅದರ ಲಾಭ ದೊರಕುತ್ತದೆ ಎಂಬುದು ಅರ್ಥಹೀನ. ವಾಸ್ತವವಾಗಿ ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ, ಬಡವರು ಹೆಚ್ಚು ಬಡವರಾಗುತ್ತಿದ್ದಾರೆ.

ಆರೋಗ್ಯ ಸುಧಾರಣೆಯಾಗಲು ಸರಕಾರದ ಸಾಮಾಜಿಕ ನೀತಿ ಹಾಗೂ ರಾಜಕೀಯ ಒಲವು ಅತ್ಯಗತ್ಯ. ಇತರೇ ಎಲ್ಲಾ ರಾಜ್ಯದಲ್ಲಿರುವಂತಹ ಆರ್ಥಿಕ ಪರಿಸ್ಥಿತಿ ಇರುವ ಕೇರಳ ರಾಜ್ಯದಲ್ಲಿನ ಆರೋಗ್ಯ ಕ್ಷೇತ್ರದ ಬೆಳವಣಿಗೆ ಅಪಾರ. ಜಗತ್ತಿನ ಅನೇಕ ಬಡರಾಷ್ಟ್ರಗಳಲ್ಲಿಯೂ(ಕ್ಯೂಬಾ) ಆರೋಗ್ಯ ಕ್ಷೇತ್ರದ ಬೆಳವಣಿಗೆ ಅಪಾರವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಮಿಥ್ಯ: ಅನಾರೋಗ್ಯಕ್ಕೆ ರೋಗವೇ ಕಾರಣ ಹಾಗೂ ಔಷಧಿಗಳು ಅನಾರೋಗ್ಯ ಸರಿಪಡಿಸಲು ಸಾಧ್ಯವಾಗುತ್ತದೆ.

ಸತ್ಯ: ಅನಾರೋಗ್ಯ ಉಂಟಾಗಲು ಹಲವಾರು ಕಾರಣಗಳಿವೆ. ರೋಗವೂ ಕಾರಣವಾಗಬಹುದು. ಆದರೆ ಅನಾರೋಗ್ಯಕ್ಕೆ ಭಾರತದಂತಹ ದೇಶದಲ್ಲಿ ಮುಖ್ಯಕಾರಣ 1. ಅನೈರ್ಮಲ್ಯ 2. ಪೌಷ್ಟಿಕಾಂಶದ ಕೊರತೆ 3. ಹಾಗೂ ಮಾನಸಿಕ ಒತ್ತಡ. ಈ ಕಾರಣಗಳನ್ನು ನಿರ್ಮೂಲನ ಮಾಡಿ ಅನಾರೋಗ್ಯವನ್ನು ನಿರ್ಮೂಲನ ಮಾಡಬಹುದಾಗಿದೆ. ಈ ಕಾರಣಗಳನ್ನು ನಿರ್ಮೂಲನೆ ಮಾಡಲು ಔಷಧಿಗಳ ಅಗತ್ಯತೆ ಖಂಡಿತವಾಗಿಯೂ ಇಲ್ಲ.

ಔಷಧಿಗಳು, ರೋಗ ಗುಣಪಡಿಸಲು ನಿರ್ಣಾಯಕ ಪಾತ್ರವಹಿಸುತ್ತವೆ. ಅದರಲ್ಲಿ ಎರಡು ಮಾತಿಲ್ಲ. ಆದರೆ ಇಂದಿನ ಎಲ್ಲ ಅನಾರೋಗ್ಯ ಸಮಸ್ಯೆಗಳಿಗೆ ಔಷಧಿಗಳು ಪರಿಹಾರವಲ್ಲ. ಇಂದು ಬಹುರಾಷ್ಟ್ರೀಯ ಔಷಧಿ ಉದ್ಯಮ ಅನಾರೋಗ್ಯಕ್ಕೆ ರೋಗವೇ ಕಾರಣ, ರೋಗ ಗುಣಪಡಿಸಲು ತಾವು ತಯಾರಿಸಿದ ಔಷಧಿಯೇ ಅದಕ್ಕೆ ಪರಿಹಾರ ಎಂದು ಘೋಷಿಸುತ್ತಾ ಬಂದಿದೆ.

ಅನಾರೋಗ್ಯಕ್ಕೆ ರೋಗವೇ ಕಾರಣ ಎಂಬ ವಾದ ಮೇಲ್ನೋಟಕ್ಕೆ ಸರಿಯೇ ಆಗಿದೆ.. ಆದರೆ ಇಂದು ಉಂಟಾಗುತ್ತಿರುವ ಅನಾರೋಗ್ಯಕ್ಕೆ ರೋಗಗಳಿಂದ ಮಾನವನೇ ಬಲಿಯಾದ ಸನ್ನಿವೇಶ ಇದು. ಮಾನವನ ದುರಾಸೆ, ಸಂಪನ್ಮೂಲಗಳ ದುರ್ಬಳಕೆ ಹಾಗೂ ಮಾನವನ ಶೋಷಣೆಯಿಂದ ಅನಾರೋಗ್ಯ ಉಂಟಾಗುತ್ತದೆ.

ಮಿಥ್ಯ: ಅನಾರೋಗ್ಯ ಹಾಗೂ ಸಾವಿಗೆ ಬ್ಯಾಕ್ಟೀರಿಯಾ,ವೈರಸ್‌ಗಳಂತಹ ಕಾರಣಗಳು ಮುಖ್ಯವಾದವು

ಸತ್ಯ: ಅನಾರೋಗ್ಯ ಉಂಟಾಗಲು ಬ್ಯಾಕ್ಟೀರಿಯಾ ಹಾಗೂ ವೈರಸ್‌ಗಳು ಕಾರಣವಾಗುತ್ತದೆ. ಆದರೆ ಅವು ಮುಖ್ಯ ಕಾರಣವಲ್ಲ ಎಂಬುದನ್ನು ಗುರುತಿಸಬೇಕಾಗುತ್ತದೆ. ಸ್ವಾಭಾವಿಕ ಕಾರಣಗಳಿಗಿಂತ, ಮಾನವನೇ ಅನಾರೋಗ್ಯ ಉಂಟುಮಾಡಲು ಮುಖ್ಯಕಾರಣ ಎಂದು ಹೇಳಬಹುದಾಗಿದೆ. ಇಂದು ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ಕೀಟನಾಶಕಗಳು, ಮಕ್ಕಳ ಹಾಲಿನ ಪುಡಿ, ಹೊಗೇಸೊಪ್ಪು, ಮದ್ಯಸಾರ, ಅನಗತ್ಯ ಔಷಧಿಗಳು, ಚಟ ಉಂಟು ಮಾಡುವ ಔಷಧಿಗಳು ಹಾಗೂ ಅತಿಮುಖ್ಯವಾಗಿ ಯುದ್ಧೋಪಕರಣಗಳು ಸಾವು ನೋವಿಗೆ ಕಾರಣವಾಗಿವೆ. ಬಹುರಾಷ್ಟ್ರಿಯ ಕಂಪನಿಗಳ ಲಾಭಕೋರ ನೀತಿಗೆ, ನೂರಾರು ಕೋಟಿ ಜನರು ಬಲಿಯಾಗಿದ್ದಾರೆ. ಅವರಲ್ಲಿ ಹೆಚ್ಚು ಜನರು ಬಡವರು ಹಾಗೂ ಅಪಾಯದ ಅಂಚಿನಲ್ಲಿರುವವರಾಗಿದ್ದಾರೆ.

ವಿಶ್ವಸಂಸ್ಥೆ, ಸಾರ್ಕ್ ಒಕ್ಕೂಟ ಹಾಗೂ ಮಾನವಹಕ್ಕು ಸಂಘಟನೆಗಳು ಈ ಬಹುರಾಷ್ಟ್ರೀಯ ಕಂಪನಿಗಳು ಮಾಡುತ್ತಿರುವ ನಾಶವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿವೆ. ಆದರೆ ಅಮೆರಿಕಾ ಈ ಬಹುರಾಷ್ಟ್ರೀಯ ಕಂಪನಿಗಳ ನೀತಿಯನ್ನು ಖಂಡಿಸುವ ಬದಲು ಪುಷ್ಟಿಕೊಡುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಐ.ಎಂ.ಎಫ್ ನೀತಿಯಿಂದಾದ ಅಸ್ತವ್ಯಸ್ತತೆಯನ್ನು ಹಸಿರು, ಬಿಳಿ, ನೀಲಿ ಕ್ರಾಂತಿಗಳು ಸರಿಪಡಿಸಲು ಸಾಧ್ಯವಾಗುವುದಿಲ್ಲ.

ಈ ಬೆಳವಣಿಗೆಯನ್ನು ಹಿಮ್ಮೆಟ್ಟಿಸಲು ಜನಜಾಗೃತಿಯೊಂದು ಸಂವಾದ ಮಾರ್ಗ.

ಮಿಥ್ಯ: ಆಧುನಿಕ ಔಷಧಿಗಳಿಂದಲೇ ಅನಾರೋಗ್ಯವನ್ನು ಸರಿಪಡಿಸಲು ಸಾಧ್ಯ.

ಸತ್ಯ: ಇಂದು ಆಧುನಿಕ ಔಷಧಿಗಳು ಚಿಕಿತ್ಸೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಇಂದು ಆಧುನಿಕ ಚಿಕಿತ್ಸೆ ಪಡೆಯಲು ಹೆಚ್ಚು ಹೆಚ್ಚು ಜನರು ಮುಂದಾಗುತ್ತಿದ್ದಾರೆ. ಇದರರ್ಥ ಎಲ್ಲ ತೊಂದರೆಗಳನ್ನು ಆಧುನಿಕ ಔಷಧಿಗಳಿಂದ ಸರಿಪಡಿಸಲು ಸಾಧ್ಯ ಎಂಬುದು ತಪ್ಪು ನಂಬಿಕೆ. ಆಧುನಿಕ ಔಷಧಿಗಳಾದ ಜೀವ ವಿರೋಧಿ ಔಷಧಿಗಳು ಹೆಚ್ಚು ಪರಿಣಾಮಕಾರಿ ಔಷಧಿಗಳೆಂದು ಹೇಳಬಹುದು. ಆದರೆ ಈ ಔಷಧಿಗಳನ್ನು ಅನಗತ್ಯವಿದ್ದಾಗ ಉಪಯೋಗಿಸಿ, ತಪ್ಪು ಪ್ರಮಾಣದಲ್ಲಿ ಉಪಯೋಗಿಸಿ ಅನಾರೋಗ್ಯ ಉಂಟುಮಾಡುವ ಪ್ರಸಂಗಗಳು ಹಲವಾರು. ಅನೇಕ ತೊಂದರೆಗಳಿಗೆ ಆಧುನಿಕ ಔಷಧಿಗಳೇ ಇಲ್ಲದ ಪ್ರಸಂಗಗಳು ಅನೇಕ.

ಇಂದು ಮಾರುಕಟ್ಟೆಯಲ್ಲಿ ಅನೇಕ ಔಷಧಿಗಳು ಲಭ್ಯವಿವೆ. ಆದರೆ ಈ ಔಷಧಿಗಳು ಅನಗತ್ಯ ಔಷಧಿಗಳು, ಔಷಧಿ ಗುಣವೇ ಇಲ್ಲದ ಔಷಧಿಗಳು. ಔಷಧಿಗಳೆಂದು ಪ್ರಚಾರ ಮಾಡಿ ಜನರ ಅನಕ್ಷರತೆ ಹಾಗೂ ಅಜ್ಞಾನವನ್ನು ತಮ್ಮ ಲಾಭಕ್ಕಾಗಿ ಉದ್ಯಮ ಉಪಯೋಗಿಸುವ ತಂತ್ರವಷ್ಟೆ.

ನಮ್ಮ ದೇಶದಲ್ಲಿ ಸಾಮಾನ್ಯ ರೋಗ ತೊಂದರೆಗಳಿಗೆ ಗಿಡಮೂಲಿಕೆ ಔಷಧಿಗಳನ್ನೊಳಗೊಂಡ ರೂಢಿಗತ ಚಿಕಿತ್ಸಾ ಪದ್ಧತಿಗಳನ್ನು ಉಪಯೋಗಿಸಲಾಗುತ್ತಿದೆ. ಹೆಚ್ಚು ಜನರು ಈ ಚಿಕಿತ್ಸೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೋಗಗಳಿಂದ ಉಂಟಾದ ಸಾವು ತಡೆಗಟ್ಟಲು ಆಧುನಿಕ ಔಷಧಿಗಳ ಪಾತ್ರ ಹಿರಿದು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೋಗಗಳಿಂದುಂಟಾದ ಸಾವಿನ ಪ್ರಮಾಣ ಕಡಿಮೆಯಾದ ನಂತರದ ದಶಕಗಳಲ್ಲಿ, ಸಾಂಕ್ರಾಮಿಕ ರೋಗಗಳನ್ನು ಹತೋಟಿಯಲ್ಲಿಡುವ ತಂತ್ರಜ್ಞಾನದ ಅವಿಷ್ಕಾರವಾಗಿದೆ. ಪೋಲಿಯೋ ರೋಗ ಒಂದು ಬಿಟ್ಟರೆ ಇನ್ನಾವ ರೋಗದಲ್ಲಿಯೂ ತಂತ್ರಜ್ಞಾನದ ಅವಿಷ್ಕಾರ ಮರಣದರವನ್ನು ಕಡಿಮೆ ಮಾಡಲಿಲ್ಲ. ಪ್ರವೃದ್ಧಿ ಪೂರ್ವ ಜನನದಿಂದ ಮಕ್ಕಳ ತೂಕ ಹಾಗೂ ಬೆಳವಣಿಗೆ ಕಡಿಮೆ ಇರುತ್ತದೆ. ಆಗ ಮಕ್ಕಳಿಗೆ ಆಧುನಿಕ ಆಸ್ಪತ್ರೆ ಚಿಕಿತ್ಸೆ ಬೇಕಾಗುತ್ತದೆ. ಆದರೆ ಆಸ್ಪತ್ರೆ ಚಿಕಿತ್ಸೆ ನಂತರ ಮಕ್ಕಳು ಜನಜಂಗುಳಿ ಹಾಗೂ ಅನೈರ್ಮಲ್ಯದ ವಾತಾವರಣಗಳಲ್ಲಿ ಬೆಳೆಯುವಾಗ ಶೇಕಡಾ 70 ರಷ್ಟು ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಈ ಸಮಯದಲ್ಲಿ ಔಷಧಿಗಳ ಬದಲು ತಾಯಿಯ ಪೋಷಣೆ, ಸ್ವಚ್ಛ ಕುಡಿಯುವ ನೀರು, ನೈರ್ಮಲ್ಯಕರ ವಾತಾವರಣ, ಈ ಸಾವುಗಳನ್ನು ತಡೆಗಟ್ಟಬಹುದಾಗಿದೆ. ಆಧುನಿಕ ಚಿಕಿತ್ಸೆಯೊಂದೇ ಸಾವು ನೋವು ತಪ್ಪಿಸಲು ಸಾಧ್ಯ ಎಂಬುದು ಮಿಥ್ಯವಷ್ಟೆ.



ಮಿಥ್ಯ: ಮಕ್ಕಳ ಸಾವಿಗೆ ಗೋಬಿ(GOBI) ಸುಲಭ ಸೂತ್ರದ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿ

ಸತ್ಯ: ಮಕ್ಕಳ ಅನಾರೋಗ್ಯ, ಮಕ್ಕಳ ಉಳಿವಿಗೆ ಆತಂಕ ಉಂಡುಮಾಡುತ್ತಿದೆ. ಶಿಕ್ಷಣ, ಕುಡಿಯುವ ನೀರು, ವಸತಿ, ಆರೋಗ್ಯಕರ ವಾತಾವರಣ, ವೈದ್ಯಕೀಯ ಸೌಲಭ್ಯಗಳು ಮಕ್ಕಳ ಆರೋಗ್ಯ ಕಾಪಾಡಲು ಅಗತ್ಯವಾಗಿವೆ. ಕುಸಿಯುತ್ತಿರುವ ಆರ್ಥಿಕತೆ, ಯುದ್ಧದ ಭೀತಿ, ಅನಕ್ಷರತೆ, ಕೋಮು ಗಲಭೆಗಳು, ವಾತಾವರಣ ನಾಶ, ಭಯೋತ್ಪಾದಕರ ಚಟುವಟಿಕೆಗಳು ಆರೋಗ್ಯ ಸೌಲಭ್ಯ ಇಲ್ಲದಿರುವಂತಹ ಪರಿಸ್ಥಿತಿಯಲ್ಲಿ ಮಕ್ಕಳ ಉಳಿವಿಗೆ ಆತಂಕ ಉಂಟಾಗುತ್ತದೆ.

ಇಂದು ತಾಂತ್ರಿಕತೆಯನ್ನು ಆಧರಿಸಿದ ಆರೋಗ್ಯ, ಸಾಧನೆ ವಿಧಾನಗಳನ್ನು ಹೊಮ್ಮಿಕೊಳ್ಳಲು ಐ.ಎಂ.ಎಫ್., ವಿಶ್ವಬ್ಯಾಂಕ್ ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲ ದೇಶಗಳನ್ನು ಪ್ರೋತ್ಸಾಹಿಸುತ್ತಿವೆ. ತಾಂತ್ರಿಕತೆ ಆಧಾರದ ಈ ಕಾರ್ಯಕ್ರಮ ಮಕ್ಕಳ ಆರೋಗ್ಯ ಹಾಗೂ ಉಳಿವಿಗೆ ಸುಲಭ ಸೂತ್ರಗಳೆಂದು ಪ್ರಚಾರ ನಡೆದಿದೆ. ಈ ಸುಲಭ ಸೂತ್ರಗಳಿಂದ ಮಕ್ಕಳ ಆರೋಗ್ಯ ಸುಧಾರಿಸಲು ಸಾಧ್ಯ, ಸಾವಿನ ಪ್ರಮಾಣವನ್ನು ಕಡಿಮೆ ಮಾಡಬಹುದು ಹಾಗೂ ಸರ್ಕಾರಗಳಿಗೆ ಹಣಕಾಸಿನ ಖರ್ಚು ಕಡಿಮೆಯಾಗುತ್ತದೆಂದು ಈ ಸಂಸ್ಥೆಗಳು ಪ್ರತಿಪಾದಿಸುತ್ತಿವೆ.

ಈ ಸುಲಭ ಸೂತ್ರಗಳನ್ನು ಗೋಬಿ(GOBI) ಎನ್ನುವರು.

Growth Monitoriny - ಮಕ್ಕಳ ಬೆಳವಣಿಗೆ ಮಾಪನ

ORS - ಜೀವ ಜಲ ಉಪಯೋಗ (ಭೇದಿಯಿಂದ ಉಂಟಾದ ನಿರ್ಜಲೀಕರಣವನ್ನು ತಡೆಗಟ್ಟಲು)

Breast feedinl ಸ್ತನ ಪಾಲನೆ

Immunisation ಲಸಿಕೆ ಹಾಕಿಸುವುದು

ಗೋಬಿ ಕಾರ್ಯಕ್ರಮ ಒಂದು ಅಪೂರ್ಣ ಕಾರ್ಯಕ್ರಮ. ಜನಾರೋಗ್ಯ ಸುಧಾರಿಸಲು ಸಮಗ್ರ ಕಾರ್ಯಕ್ರಮದ ಅವಶ್ಯಕತೆ ಇದೆ. ಈ ಕಾರ್ಯಕ್ರಮ ಯಶಸ್ವಿಯಾಗುತ್ತದೆ ಎಂದು ಹೇಳುವ ಸಮೀಕ್ಷೆ ಆಧರಿಸಿದ ಯಾವ ಅಧ್ಯಯನವನ್ನು ಮಾಡದೆ ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ಈ ಸಂಸ್ಥೆಗಳು ಪ್ರೋತ್ಸಾಹಿಸುತ್ತಿವೆ. ಮಕ್ಕಳ ಆರೋಗ್ಯದ ಬಗ್ಗೆ ಕಳಕಳಿ ಇರುವ ಯುನಿಸೆಫ್ ಸಂಸ್ಥೆ ಕೂಡ ಈ ಕಾರ್ಯಕ್ರಮವನ್ನು ಪ್ರೋತ್ಸಾಹಿಸುತ್ತಿದೆ. ಹಿಂದೆ ಮಕ್ಕಳ ಉಳಿವಿಗೆ ಯುನಿಸೆಫ್ ಕೈಗೊಂಡ ಕಾರ್ಯಕ್ರಮಗಳು ಪ್ರಶಂಸನೀಯ. ಬಡತನದ ಕಾರಣಗಳನ್ನು ನಿರ್ಮೂಲನ ಮಾಡುವ ಬದಲು, ಸುರಕ್ಷಾಜಾಲ ಹರಡಿ, ಆರೋಗ್ಯ ಸುಧಾರಿಸುವುದರ ಬದಲು ಕೇವಲ ರೋಗ ತಡೆಗಟ್ಟುವ ಈ ನೀತಿ ಅಪ್ರಯೋಜಕ. ಹೀಗೆ ಹೇಳಿದಾಗ ಲಸಿಕಾ ಕಾರ್ಯಕ್ರಮವನ್ನು ವಿರೋಧಿಸಲಾಗುತ್ತಿದೆ ಎಂದಲ್ಲ. ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆ ವ್ಯವಸ್ಥೆಯನ್ನು ಸುಧಾರಿಸುವುದರ ಬದಲು, ಈ ತರಹದ ಅಪೂರ್ಣ ಮಧ್ಯಸ್ಥಿಕೆಯ ತಂತ್ರ ಯಶಸ್ವಿಯಾಗುವುದು ಅನುಮಾನಾಸ್ಪದ.

ಹಿಂದೆ ಇಂತಹ ಅನೇಕ ಅಪೂರ್ಣ ಮಧ್ಯಸ್ಥಿಕೆಯ ಕಾರ್ಯಕ್ರಮಗಳು ಯಶಸ್ವಿಯಾಗಿಲ್ಲ. ಆದರೂ ನಾವು ಹಿಂದಿನ ಅನುಭವಗಳನ್ನು ಕಡೆಗಣಿಸಿ, ಪುನಃ ಆಧಾರರಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದೆ ಸಾಗಿದ್ದೇವೆ.

ಮಿಥ್ಯ: ರೂಢಿಗತ ಚಿಕಿತ್ಸೆಗಳು ಪ್ರಾಚೀನ ಹಾಗೂ ಮೌಢ್ಯಭರಿತ ಚಿಕಿತ್ಸೆಗಳಾಗಿವೆ.

ಸತ್ಯ: ರೂಢಿಗತ ಚಿಕಿತ್ಸೆಗಳಾದ ಗಿಡಮೂಲಿಕೆ,

ಪುಟ 10 ಕ್ಕೆ

"ಜನ ಜೊತೆಗಿದ್ದರೆ ಏನನ್ನೂ ಸಾಧಿಸಬಲ್ಲೆವು"

ಪ.ಬಂಗಾಳದ ಗ್ರಾಮೀಣ ಅಭಿವೃದ್ಧಿ ಸಚಿವ ಸೂರ್ಯಕಾಂತ ಮಿಶ್ರ

ಈ ಶತಮಾನದ ಆರಂಭ ಹಾಗೂ ಅಂತ್ಯದಲ್ಲಿ ಪ.ಬಂಗಾಳದ ಜನತೆ ಭೀಕರ ನೆರೆಹಾವಳಿಯನ್ನು ಅನುಭವಿಸಿದೆ. ಅಪಾರ ಸಾವು-ನೋವು, ಆಸ್ತಿ ಹಾನಿ ಆಗಿದೆ. ಈ ಸಲದ ನೆರೆ ಹಾವಳಿಯಲ್ಲಿ ಪ.ಬಂಗಾಳದ 8.5 ಕೋಟಿ ಜನತೆಯಲ್ಲಿ ಸಂಕಷ್ಟಕ್ಕೆ ಸಿಲುಕಿದವರು ಎರಡು ಕೋಟಿಯಷ್ಟು. ಇದು ರಾಷ್ಟ್ರೀಯ ದುರಂತ. ಆದರೆ ನಮ್ಮ ದೇಶದ ಟಿ.ವಿ., ಪತ್ರಿಕೆ, ಮಾಧ್ಯಮಗಳು ಈ ದುರಂತವನ್ನು ಸರಿಯಾಗಿ ಪ್ರಕಟಿಸಲಿಲ್ಲ. ಇಲ್ಲೂ ತಮ್ಮ ಸ್ಥಾಪಿತ ಹಿತಾಸಕ್ತಿಯ ರಾಜಕೀಯ ಬೇಳೆ ಬೇಯಿಸಿಕೊಂಡರು. ಕೇಂದ್ರದ ವಾಜಪೇಯಿ ಸರ್ಕಾರವೂ ಅಷ್ಟೇ. ಆದರೆ ಇವೆಲ್ಲವುಗಳಿಂದ ಬಂಗಾಳದ ಜನತೆ, ಅಲ್ಲಿನ ಎಡರಂಗ ಸರ್ಕಾರ ಎದೆಗುಂದಲಿಲ್ಲ. ಎಲ್ಲವನ್ನೂ ಜನರ ಎದುರು ತೆರೆದಿಟ್ಟರು. ದಿಟ್ಟತನದಿಂದ ಎದುರಿಸಲು ಮುಂದಾದರು. ಪ್ರವಾಹದ ಎದುರು ಈಜಿಯೇ ಅನುಭವ ಇರುವವರು ಅವರಲ್ಲವೇ?

ಈ ಧಾರುಣ ಘಟನೆಯ ಬಗ್ಗೆ ಐಕ್ಯರಂಗ ಈಗಾಗಲೇ ಹಲವು ಕಂತುಗಳ ವರದಿ ಪ್ರಕಟಿಸಿದೆ. ಇತ್ತೀಚೆಗೆ ತಿರುವನಂತಪುರದಲ್ಲಿ ನಡೆದ ಸಿಪಿಐ(ಎಂ) ವಿಶೇಷ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬಂದಿದ್ದ ಪ.ಬಂಗಾಳದ ಗ್ರಾಮೀಣ ಅಭಿವೃದ್ಧಿ ಸಚಿವ ಸೂರ್ಯಕಾಂತ ಮಿಶ್ರಾ, ಪ್ರಾಥಮಿಕ ಶಿಕ್ಷಣ ಸಚಿವ ಕಾಂತಿ ಬಿಸ್ವಾಸ್‌ರವರ ಸಂದರ್ಶನಗಳನ್ನು ಇಲ್ಲಿ ನೀಡುತ್ತಿದ್ದೇವೆ. ಸಂದರ್ಶನ: ಮಾರುತಿ ಮಾನ್ಪಡೆ, ಎಸ್.ವೈ.ಗುರುಶಾಂತ್.

ಐಕ್ಯರಂಗ ಸಂದರ್ಶನ

ಸಂಗಾತಿ, ಈ ಪ್ರವಾಹದಲ್ಲಿ ಆದ ಹಾನಿ ಎಂತಹುದು?

ಸೂ.ಮಿಶ್ರ: ಈ ಪ್ರವಾಹದಲ್ಲಿ ಸುಮಾರು 17 ಲಕ್ಷ ಮನೆಗಳು ಧ್ವಂಸವಾಗಿವೆ. ಇದರಲ್ಲಿ ಪೂರ್ಣ ನಿರ್ನಾಮ ಆದ ಮನೆಗಳು 10 ಲಕ್ಷಕ್ಕೂ ಅಧಿಕ ಉಳಿದವುಗಳು ಭಾಗಶಃ. ಈ ಪ್ರದೇಶಗಳ ಎಲ್ಲ ರಸ್ತೆಗಳು, ಒಳದಾರಿಗಳು ಶಾಲೆ, ಸಾರ್ವಜನಿಕ ಕಟ್ಟಡಗಳು, ಬಹುತೇಕ ಪೂರ್ಣ ಹಾಳಾಗಿವೆ. ಒಂದೂ ನೂರಕ್ಕೆ ಅಧಿಕ ಸೇತುವೆಗಳು ಗುರುತು ಸಿಗದಷ್ಟು ಕೊಚ್ಚಿಹೋಗಿವೆ. ಸುಮಾರು 75 ಸಾವಿರ ಜಾನುವಾರಗಳು, 1300 ರಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ. ಇದರಲ್ಲಿ 70 ಜನ ಹಾವಿನ ಕಡಿತದಿಂದ ಸಾವನ್ನಪ್ಪಿದ್ದಾರೆ. ಕೃಷಿ, ಬೆಳೆ ಪೂರ್ಣ ಹಾನಿಗೊಳಗಾಗಿವೆ. ಒಟ್ಟು ಕೃಷಿ ಹಾನಿ ಏನಿಲ್ಲವೆಂದರೂ 3000 ಕೋಟಿಯಷ್ಟು. ಬಹುತೇಕ ಭತ್ತದ ಬೆಳೆಯದೇ ಹೆಚ್ಚು.

ಈಗ ಪರಿಹಾರದ ಕಾರ್ಯ ಹೇಗೆ ಸಾಗಿದೆ?

ಸೂ.ಮಿಶ್ರ: ಪ್ರವಾಹದ ಮೊದಲ ದಿನದಿಂದಲೇ ಜನ ಹಾಗೂ ಆಸ್ತಿ ರಕ್ಷಣೆಗೆ ದುಮುಕಿದ್ದೇವೆ. ಭೂಸೈನ್ಯ, ವಾಯುಪಡೆ ಒಳಗೊಂಡು ಸ್ವಯಂ ಸೇವಕ ತಂಡಗಳು ವಿವಿಧ ಸಂಘಟನೆಗಳು ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ಸಾರ್ವಜನಿಕ ಕಟ್ಟಡಗಳಲ್ಲಿ ಜನರಿಗೆ ಆಶ್ರಯ ಕಲ್ಪಿಸಲಾಗಿದೆ. 15 ಲಕ್ಷದಷ್ಟು ಟಾರ್ಪಲಿನ್ ಬೇಕಾಗಿದ್ದು ಈಗಾಗಲೇ 8 ಲಕ್ಷ ಒದಗಿಸಲಾಗಿದೆ. ಈ ನೆರೆಯಲ್ಲಿ ಸುಮಾರು ಎರಡು ಲಕ್ಷ ಕೊಳವೆ ಬಾವಿಗಳು ಹಾಳಾಗಿವೆ. ಆದ್ದರಿಂದ ಹಲವು ಸಾವಿರ ಕೊಳವೆಬಾವಿ ಹೊಸದಾಗಿ ತೆಗೆಯಲಾಗಿದೆ, ತೆಗೆಯಲಾಗುತ್ತಿದೆ. ಮಕ್ಕಳಿಗಾಗಿ ಬಾಲ ಆಹಾರ, ಜನತೆಗಾಗಿ ಊಟದ ವ್ಯವಸ್ಥೆ, ಬಟ್ಟೆ ನೀಡಿಕೆ ಕಾರ್ಯ ನಿರಂತರ ನಡೆದಿದೆ. ಆರೋಗ್ಯದ ವ್ಯವಸ್ಥೆ, ತಪಾಸಣೆ, ಔಷಧಿ ನೀಡಿಕೆ ಸಾಗಿದೆ. ಈ ಪ್ರವಾಹದ ತಾಂಡವ ನೃತ್ಯಕ್ಕೆ ಬಲಿಯಾದವರು ನೈಸರ್ಗಿಕ ಪ್ರಕೋಪದಿಂದಲೇ ಹೊರತು. ನಿರ್ಲಕ್ಷ್ಯದಿಂದಲ್ಲ. ಅಂತಹ ದುರ್ಘಟನೆಗಳು ಸಂಭವಿಸದಂತೆ ಕ್ರಮ ವಹಿಸುವುದು ಗಮನಿಸಬೇಕಾದ ಮಹತ್ವದ ಅಂಶ. ಈಗ ಪುನರ್‌ನಿರ್ಮಾಣದ ಕಾರ್ಯ ನಡೆದಿದೆ. ಮನೆ ನಿರ್ಮಿಸಿಕೊಳ್ಳಲು ಸರ್ಕಾರ 2000 ರೂಗಳನ್ನು ನೀಡುತ್ತಿದೆ, ಇತರರ ನೆರವಿನಿಂದ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿದೆ. ಪುನರ್‌ನಿರ್ಮಾಣದ ಕೆಲಸವನ್ನು ಪೂರ್ಣವಾಗಿ ಪಂಚಾಯತ್‌ಗಳು ನೋಡಿಕೊಳ್ಳುತ್ತಿವೆ. ಸಹಾಯ ನೀಡುತ್ತಿವೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಹ ಸಹಾಯ ಒದಗಿಸಲಾಗುತ್ತಿದೆ. ಈ ದುರಂತದಿಂದ ಸತ್ತ ವ್ಯಕ್ತಿಗೆ ಪರಿಹಾರ ನಿಧಿಯಿಂದ 80 ಸಾವಿರ ನೀಡಲಾಗುತ್ತಿದೆ. ಈ ಪರಿಹಾರ, ಪುನರ್‌ನಿರ್ಮಾಣಕ್ಕೆ ಕೇಂದ್ರ ಸರ್ಕಾರ 1500 ಕೋಟಿ ರೂ.ಗಳ ನೆರವು ನೀಡಬೇಕೆಂದು ಮನವಿ ಸಲ್ಲಿಸಿದ್ದೇವೆ.

ಕೇಂದ್ರದಿಂದ ಬಂದ ನೆರವು ಎಷ್ಟು?

ಸೂ.ಮಿಶ್ರ: ಕೇಂದ್ರ ಸರ್ಕಾರದ ನೆರವು ಕೇವಲ ಬಾಯಿ ಮಾತಿನಲ್ಲಿ ಉಳಿದಿದೆ. ಹಾಗೂ ದೋಷಾರೋಪಣೆಯಲ್ಲಿ ನಿರತವಾಗಿ ಸಂದಿಗ್ಧ ಸಂದರ್ಭದಲ್ಲಿ ಕೀಳು ಹಿತಾಸಕ್ತಿಗೆ ಬಳಸುತ್ತಿದೆ. ಪರಿಹಾರದ ಕಾರ್ಯದಲ್ಲಿ ತೊಡಗಿದ ಸೈನ್ಯಕ್ಕೆ ಕೇಂದ್ರ ಸರ್ಕಾರ 20 ಕೋಟಿ ಕೊಡಬೇಕಲ್ಲ ಎನ್ನುತ್ತಿದೆ.

ನೂರಾರು ಕೋಟಿ ಹಣ ನೀಡಿದರೆ ಅದನ್ನು ಬಳಸಲೇ ಇಲ್ಲ ಎಂದು ಕೇಂದ್ರ ಸಚಿವ ವೆಂಕಯ್ಯ ನಾಯ್ಡು ಹೇಳುತ್ತಿದ್ದಾರಲ್ಲ?

ಸೂ.ಮಿಶ್ರ: 700 ಕೋಟಿ ಪ.ಬಂಗಾಳಕ್ಕೆ ನೀಡಲಾಗಿತ್ತು ಎನ್ನುತ್ತಾರೆ ಅವರು. ಈ ಹಣ ನೆರೆ ಹಾವಳಿಗೆ ನೀಡಿದ್ದಲ್ಲ. ಅದು ಮಾರ್ಚ್ 27 ರಂದು ವಿವಿಧ ಯೋಜನೆಗಳಿಗೆಂದು ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡುತ್ತೇವೆ ನೀವು ಅದರ ಖರ್ಚು ಯೋಜನೆ ಕೊಡಿ ಎಂದು ಕೇಳಿತ್ತು. ಈ ಹಣವನ್ನು ಮಾರ್ಚ್ 31 ರೊಳಗೆ ಬಳಸಲೇ ಬೇಕು. ಇಲ್ಲವಾದರೆ ಹಣ ವಾಪಾಸಾಗಿ ಬಿಡುತ್ತದೆ. ಆದ್ದರಿಂದ ಕೇವಲ 3 ದಿನಗಳಲ್ಲಿ ಖರ್ಚು ಮಾಡಬೇಕಾದ ಯೋಜನೆ ತಯಾರಿಸುವುದು ಮತ್ತು ಅದನ್ನು ತರಾತುರಿಯಲ್ಲಿ ಹಂಚುವುದು ನಮಗೆ ಅಸಾಧ್ಯದಮಾತು. ಬೇರೆ ರಾಜ್ಯಗಳು ಮಾಡುತ್ತವೆ ಎನ್ನುತ್ತಾರೆ. ಅದು ಅವರಿಗೆ ಬಿಟ್ಟ ವಿಷಯ. ನಾವು ಬೇಕಾಬಿಟ್ಟಿ, ಬೋಗಸ್ ಯೋಜನೆ ರೂಪಿಸಲು ಸಿದ್ದರಿಲ್ಲ. ಆದ್ದರಿಂದಲೇ ನಾನು ಕೇಂದ್ರ ಸಚಿವರಿಗೆ ಹೇಳಿದೆ "ಈ ಮೂರುದಿನಗಳ ಪವಾಡದ ಕಲೆ ಅಸಾಧ್ಯವೆಂದೆ.ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ನಾಯ್ಡು ಪುನಃ ಅದೇ ಮಾತುಗಳನ್ನು ಪುನರಾವರ್ತಿಸಿದಾಗ 'ಇನ್ನೂ ನೀವಿನ್ನೂ ಈ ಖಾತೆಗೆ ತೀರಾ ಹೊಸಬರು. ಮೊದಲು ಖಾತೆಯ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ" ಎಂದು ತಿಳಿಸಿದೆ.


ರಾಜ್ಯ ಸರ್ಕಾರ ಹಾಗೂ ಜನರ ಪಾತ್ರ ಹೇಗಿದೆ?

ಸೂ.ಮಿಶ್ರ: ಈ ಹಾನಿಯನ್ನು ಎದುರಿಸಲು ಎಲ್ಲಾ ಜಿಲ್ಲಾ ಆಡಳಿಗಳು ಪೂರ್ಣ ಪ್ರಮಾಣದಲ್ಲಿ ತೊಡಗಲು ಸೂಚಿಸಿದ್ದೇವೆ. ಆಯಾ ಜಿಲ್ಲೆಗಳಲ್ಲಿ ಲಭ್ಯ ಇರುವ ಹಣ, ಮುಂತಾದ ಸಂಪನ್ಮೂಲಗಳನ್ನು ಅಲ್ಲಿನ ನೆರವಿನ ಪ್ರಾಶಸ್ತ್ಯದ ಆಧಾರದಲ್ಲಿ ಬಳಸಲು ನಿರ್ದೇಶಿಸಿದ್ದೇವೆ. ಆಹಾರದ ಬೆಳೆ ನಾಶವಾಗಿರುವುದರಿಂದ ಅದನ್ನು ಸರಿದೂಗಿಸಲು ಹಿಂಗಾರಿನ ಬೆಳೆಯಲ್ಲಿ ಭತ್ತವನ್ನು ಶೇ 20 ಹೆಚ್ಚುವರಿ ಉತ್ಪಾದಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. ಅದಕ್ಕಾಗಿ ಅಗತ್ಯವಿರುವ ಭತ್ತದ ತಳಿಗಳನ್ನು ಹಾಗೂ ಗೊಬ್ಬರವನ್ನು ಸಂಗ್ರಹಿಸಿ ಸಿದ್ಧವಾಗಿಡಲಾಗಿದೆ.

ಈ ಕಾರ್ಯದಲ್ಲಿ ಪಂಚಾಯತ್‌ಗಳು ಹಾಗೂ ಜನತೆಯ ಭಾಗವಹಿಸುವಿಕೆ ಅತಿ ಹೆಚ್ಚಿನದು. ವಿವಿಧ ಸಾಮೂಹಿಕ ಜನ ಸಂಘಟನೆಗಳು ಸ್ವಯಂ ಸೇವಕರಾಗಿ ಭಾಗಿಯಾಗುತ್ತಿದ್ದಾರೆ. ಅಹೋರಾತ್ರ ಶ್ರಮಿಸುತ್ತಿದ್ದಾರೆ. ಜನ ಜೊತೆಗಿದ್ದರೆ ಏನನ್ನೂ ಸಾಧಿಸಬಲ್ಲೆವು ಎಂಬ ಅಚಲ ವಿಶ್ವಾಸ ನಮ್ಮಲ್ಲಿದೆ.

"ಎಲ್ಲವನ್ನೂ ಹೊಸದಾಗಿ ನಿರ್ಮಿಸಬೇಕಿದೆ"

- ಕಾಂತಿ ಬಿಸ್ವಾಸ್



ಈ ಪ್ರವಾಹ ಶಿಕ್ಷಣ ರಂಗದಲ್ಲಿ ಹೆಗೆ ಭಾದಿಸಿದೆ ಎಂದು ತಿಳಿಯಲು ಪತ್ರಿಕೆ ಬಯಿಸಿತು. ವಿಶೇಷ ಸಮ್ಮೇಳನದ ಬಿಡುವಿರದ ಕಲಾಪಗಳ ನಡುವೆ ಪ.ಬಂಗಾಳದ ಶಿಕ್ಷಣ ಸಚಿವರಾದ ಶಾಂತಿ ಬಿಸ್ವಾಸ್‌ರಲ್ಲಿ ಇದನ್ನು ಪ್ರಸ್ತಾಪಿಸಿದ್ದೆವು. ಅದಕ್ಕೆಂದೇ ಕಲಾಪ ಆರಂಭಗೊಳ್ಳುವ ಮೊದಲು ಸಂದರ್ಶನಕ್ಕಾಗಿ ಸಿಕ್ಕರು.

ಇದು 95 ವರುಷಗಳ ನಂತರ ಬಂಗಾಳ ಕಂಡ ಭೀಕರ ದುರಂತ. ಹಿಂದೆ 1905 ರಲ್ಲಿ ಇಂಥಹುದೇ ದುರ್ಘಟನೆ ಸಂಭವಿಸಿತು. ಈಗ 2000 ರಲ್ಲಿ ಮತ್ತೆ ಘಟಿಸಿದೆ. ಸೆಪ್ಟೆಂಬರ್ 17 ರಿಂದ 23 ರವರೆಗೆ ಸುರಿದ ಧಾರಾಕಾರ ಮಳೆಯ ಪ್ರವಾಹವು 9 ಜಿಲ್ಲೆಗಳನ್ನು ಪೂರ್ಣವಾಗಿ ಭಾದಿಸಿದೆ. ನಮ್ಮ ರಾಜ್ಯದಲ್ಲಿ ವರ್ಷದ ಸರಾಸರಿ ಮಳೆ 1000 ಮಿಲಿಮೀಟರ್. ಆದರೆ ಈ ಅವಧಿಯಲ್ಲಿ ಸುರಿದ ಮಳೆ 1400 ಮಿಲಿಮೀಟರ್. ಮುಂದಿನ ಜನವರಿ - ಮೇ ತಿಂಗಳಲ್ಲಿ ಕೃಷಿಯ ನೀರಾವರಿಗೆಂದು ಸಂಗ್ರಹಿಸಲಾಗಿದ್ದ ಅಣೆಕಟ್ಟುಗಳು ಈ ಮಳೆಯಿಂದ ತುಂಬಿಹೋಗಿದ್ದರಿಂದ ನದಿಯಾ ಜಿಲ್ಲೆಯಲ್ಲಿ ಬಾಗಿಲುಗಳನ್ನು ತೆರೆದು ನೀರು ಬಿಡಬೇಕಾಗಿ ಬಂತು. ಈ ಎಲ್ಲಾ ಜಿಲ್ಲೆಗಳಲ್ಲಿಯೂ ಜನ ತಮ್ಮ ಸಾಮಾನು ಸರಂಜಾಮು, ದರಕರುಗಳನ್ನು ರಕ್ಷಿಸಿಕೊಳ್ಳಲು ಆಗದಂತೆ ಪ್ರವಾಹದ ನೀರು ಧಾಳಿಯಿಟ್ಟಿದೆ. ಬಟ್ಟೆ ಬರೆ, ಪಾತ್ರ ಸಾಮಾನುಗಳು ಕೊಚ್ಚಿ ಹೋಗಿವೆ. ಮನೆಗಳಲ್ಲಿನ ಅವರು ಬೆಲೆಬಾಳುವ ವಸ್ತುಗಳನ್ನು ಹೆಕ್ಕಿಕೊಳ್ಳಲು ಅಲ್ಮೇರಾಗಳನ್ನ, ಬಾಗಿಲುಗಳನ್ನು ತೆಗೆಯಲೂ ಆಗಿಲ್ಲ. ಹೀಗೆ 1300 ರಷ್ಟುಜನ, ಸಾವಿರಾರು ಜಾನುವಾರುಗಳು, ಮನೆಗಳ ಗುರುತೇ ಇಲ್ಲದಂತೆ ತೇಲಿಹೋದವು. ಎಂಟೂವರೆ (8.5) ಕೋಟಿ ಜನಸಂಖ್ಯೆಯ ಪ.ಬಂಗಾಳದಲ್ಲಿ 2 ಕೋಟಿ ಜನ ತೀರಾ ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂದರೆ ಈ ದುರಂತದ ಪ್ರಮಾಣ ಅಂದಾಜಾಗುವುದು. ಇದರಲ್ಲಿ ಶಿಕ್ಷಣ ಸಂಸ್ಥೆಗಳ ಪಾಡೇನು? ಆದ ಹಾನಿ ಎಂತಹುದು ಎಂದು ಕೇಳಿದೆವು.

ಈ ಪ್ರದೇಶಗಳ ಸಿಮೆಂಟ್ ಕಟ್ಟಡಗಳೂ ನೆಲಸಮವಾಗಿವೆ. ಬಹುತೇಕ ಶಾಲಾ-ಕಾಲೇಜು ಬಿಲ್ಡಿಂಗ್‌ಗಳು ಕುಸಿದಿವೆ, ಇಲ್ಲವೇ ನೆಲ ಕಚ್ಚಿವೆ. ಸರಿಸುಮಾರು ಹೊಸ ಕಟ್ಟಡಗಳನ್ನೇ ಕಟ್ಟಬೇಕಾಗುತ್ತದೆ. ಈ ಅಕ್ಟೋಬರ್ 30 ಕ್ಕೆ 'ಪೂಜಾ ರಜಾ ದಿನಗಳು' ಮುಗಿಯುತ್ತಿದ್ದು ಶಿಕ್ಷಣ ಸಂಸ್ಥೆಗಳು ಪುನರಾರಂಭವಾಗಬೇಕಿದೆ. ಇನ್ನೊಂದೆಡೆ ಈ ಶಾಲೆಗಳಲ್ಲಿದ್ದ ದಾಖಲೆಗಳು, ಬಹುಮುಖ್ಯವಾಗಿ ಶಿಕ್ಷಕಕರ, ಸೇವಾ ದಾಖಲಾತಿ ಪುಸ್ತಕಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ಇಲ್ಲವೇ ಪೂರ್ತಿಹಾಳಾಗಿವೆ. ಅವುಗಳನ್ನು ಹೇಗೆ ಪುನರ್‌ಸಿದ್ದಪಡಿಸುವುದು? ಪೆನ್‌ಷನ್, ನಿವೃತಿ ಮುಂತಾದವುಗಳಿಗೆ ಇವು ಮುಖ್ಯ ಆಧಾರವಾಗಿವೆ. ಬೋರ್ಡ್, ಬೆಂಚ್, ಪಠ್ಯಪುಸ್ತಕ, ನೋಟ್ಸ್ ಪುಸ್ತಕಗಳು ಲೇಖನ ಸಾಮಗ್ರಿಗಳು ಎಲ್ಲವನ್ನು ಹೊಸದಾಗಿ ಹೊಂದಿಸಬೇಕು. ಕೆಲವೆಡೆ ನೆರೆ ಹಾವಳಿಗೀಡಾದವರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಿದ್ದ ಶಾಲೆಗಳ ಬೆಂಚ್, ಬೋರ್ಡ್, ಅಲ್ಲಿ ಕಟ್ಟಿಗೆಗಳು ವಸ್ತುಗಳು, ಪುಸ್ತಕಗಳನ್ನು, ಅಡಿಗೆ ತಯಾರಿಸಿಕೊಳ್ಳಲು ಉರುವಲಾಗಿ ಬಳಸಿ ಬಿಟ್ಟಿದ್ದಾರೆ. ಯಾಕೆಂದರೆ ಮನುಷ್ಯ ಬದುಕುವುದು ಮುಖ್ಯ. ಇವರನ್ನೆಲ್ಲಾ ಪುನರ್ ವ್ಯವಸ್ಥೆ ಮಾಡಬೇಕು. ಸುಮಾರು 6000 ಕೋಟಿಯಷ್ಟು ಹಾನಿಯಾಗಿದೆ.

ಈ ನೆರೆ ಹಾವಳಿಯಿಂದ ತತ್ತರಿಸಿದ ಜನತೆಗೆ ಬೇರೆ ಕಡೆಯಿಂದ ಬಂದ ನೆರವು, ಪ್ರತಿಕ್ರಿಯೆಯತ್ತ ಮಾತು ಹೊರಳಿತು.

ಮುಖ್ಯಮಂತ್ರಿಗಳ ನಿಧಿಗೆ ದೇಶದ ವಿವಿಧ ಭಾಗಗಳ ಜನತೆ ಈಗಾಗಲೇ ಆರು ಕೋಟಿ ಹಣ ನೀಡಿದ್ದಾರೆ, ನೀಡುತ್ತಿದ್ದಾರೆ. ತ್ರಿಪುರಾ, ಪಂಜಾಬ್, ಒರಿಸ್ಸಾ, ಆಂಧ್ರಪ್ರದೇಶಗಳಿಂದ...... ಬಂಗಾಳದ ಜನತೆ ಸಹ ಸಹಾಯ ನೀಡುವಲ್ಲಿ ಹಿಂದೆ ಬಿದ್ದಿಲ್ಲ. ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರೆ ನೆರೆ ಹಾವಳಿ ಪರಿಹಾರ ನೀಡುವ ಕಾನೂನಿನಲ್ಲಿ ಅವಕಾಶ ಇಲ್ಲವೆನ್ನುತ್ತಾರೆ. 'ರಾಷ್ಟ್ರೀಯ ಅವಘಡ ನಿಧಿ'ಯಿಂದ ಹಣ ನೀಡಲು ಸಾಧ್ಯ. ಕಾನೂನು ಮಾಡುವವರೆಗೂ ಕಾಯದೆ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ (ರಾಷ್ಟ್ರಪತಿಗಳಿಂದ ಅಂಕಿತ ಹಾಕಿ) ನೀಡಬಹುದಲ್ಲಾ ಎಂದರೆ ಅದಕ್ಕೆ ಅವರ ಉತ್ತರವಿಲ್ಲವಾಗಿದೆ. ಈಗ ಸಚಿವ ವೆಂಕಯ್ಯನಾಯ್ಡು ಹೇಳುತ್ತಿರುವ ನೆರವು 'ಯೋಜನೆಯ ಅಡ್ವಾನ್ಸ್' ಎಂದು. (ಪ್ರಧಾನಿ ರೋಜಗಾರ್ ಯೋಜನೆಯಂತಹವುಗಳು) ಅದನ್ನು ಕೊಡಬೇಕಿದೆ ಅಷ್ಟೆ.

ಕೇಂದ್ರ ಸರ್ಕಾರದ ಭರವಸೆಗಳು ಎಡರಂಗ ಸರ್ಕಾರದ ಮೇಲೆ ತಳಬುಡವಿಲ್ಲದ ದುರುದ್ದೇಶಪೂರ್ವ ಆರೋಪಗಳು. ಸರ್ಕಾರ ವಜಾ ಗೊಳಿಸಲೆಂದೇ ಕಲ್ಕತ್ತಾ-ಹೈದ್ರಾಬಾದ್-ದೆಹಲಿಗೆ ಹಾರಾಟಗಳಲ್ಲಿ ಮಗ್ನರಾದ ತೃಣಮೂಲ ಕಾಂಗ್ರೆಸ್ ನ ನಾಯಕಿ ಸಚಿವೆ ಮಮತಾ ಬ್ಯಾನರ್ಜಿ.... ಸಾವು-ಬದುಕಿನ ನಡುವೆ ಹೋರಾಡುತ್ತಿರುವ ಜನತೆಯತ್ತ ಮಾತುಕತೆ ಹೊರಳಿತು. ಸಮ್ಮೇಳನದ ಕಲಾಪಕ್ಕೆ ಸಮಯವಾದಂತೆ ಅತ್ತ ಕಡೆ ಹೆಜ್ಜೆ ಹಾಕತೊಡಗಿದೆವು.

ಸತ್ಯಂ ಸಮಿತಿ ವರದಿ

ನೇಕಾರರ ಪಾಲಿಗೆ ಮರಣಶಾಸನ



ಭಾರತದಲ್ಲಿರುವ ಸುಮಾರು 4 ಕೋಟಿ ಕೈಮಗ್ಗ ನೇಕಾರರ ಪಾಲಿಗೆ ಮರಣ ಶಾಸನದಂತೆ ಬಂದಿರುವ ಸತ್ಯಂ ಸಮಿತಿ ಶಿಫಾರಸುಗಳ ವಿರುದ್ಧ ದೇಶವ್ಯಾಪಿ ಚಳುವಳಿಯನ್ನು ಆರಂಭಿಸಲು ಕಳೆದ ಜುಲೈ ತಿಂಗಳಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕೈಮಗ್ಗ ನೇಕಾರ ಕಾರ್ಮಿಕರ ಸಮಾವೇಶವು ನಿರ್ಧರಿಸಿದೆ. ಸಮಾವೇಶವನ್ನು ಸಿಐಟಿಯು ನೇತೃತ್ವದ ಅಖಿಲ ಭಾರತ ಜವಳಿ ಕಾರ್ಮಿಕರ ಸಮನ್ವಯ ಸಮಿತಿ ಏರ್ಪಡಿಸಿತ್ತು. ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತ್ರಿಪುರ, ಅಸ್ಸಾಂ, ಒರಿಸ್ಸಾ, ಕರ್ನಾಟಕದ ಮೊದಲಾದ ರಾಜ್ಯಗಳಿಂದ ಸುಮಾರು 300 ಜನ ಕೈಮಗ್ಗದ ನೇಕಾರ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರ ಕೈಮಗ್ಗ ಕ್ಷೇತ್ರವನ್ನು ರಕ್ಷಿಸಬೇಕು

"ಕೇಂದ್ರ ಸರ್ಕಾರವು ತನ್ನ ನೀತಿಗಳನ್ನು ಬದಲಾಯಿಸಿ ಕೈಮಗ್ಗ ಕ್ಷೇತ್ರವನ್ನು ರಕ್ಷಿಸಲು ಮುಂದಾಗಬೇಕು; ಇಲ್ಲದೆ ಹೋದರೆ ಕೈಮಗ್ಗ ಉದ್ದಿಮೆ ಇಡಿಯಾಗಿ ಅಳಿದುಹೋಗುವ ಅಪಾಯವಿದೆ" ಎಂದು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಪಶ್ಚಿಮ ಬಂಗಾಳದ ಸಿಐಟಿಯು ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಚಿತ್ತಬ್ರತ ಮಜುಂದಾರ್ ಹೇಳಿದ್ದರು.

ಕೈಮಗ್ಗದ ನೇಕಾರರು ತಮ್ಮ ಭವಿಷ್ಯದ ಬಗ್ಗೆ ಆತಂಕಪಡುತ್ತಿರುವುದು ಸಹಜವಾಗಿದೆ ಎಂದು ಹೇಳಿದ ಅವರು ಕೈಮಗ್ಗ ಕ್ಷೇತ್ರವು ಮಾನವ ಸಮಾಜದ ಮೂಲಭೂತ ಅವಶ್ಯಕತೆಗಳಲ್ಲಿ ಒಂದನ್ನು ಪೂರೈಸುತ್ತಾ ಬಂದಿರುವ ಅತ್ಯಂತ ಪ್ರಾಚೀನ ಕ್ಷೇತ್ರವಾಗಿದೆ ಎಂದರು. ಜವಳಿ ಮಿಲ್ಲುಗಳ ಆಗಮನದಿಂದ ಕೈಮಗ್ಗ ಕ್ಷೇತ್ರಕ್ಕೆ ಮೊದಲ ಪೆಟ್ಟು ಬಿದ್ದಂತಾಯಿತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಮೀಸಲಾತಿಯಂತಹ ಕ್ರಮಗಳಿಂದ ಕೈಮಗ್ಗ ಕ್ಷೇತ್ರಕ್ಕೆ ರಕ್ಷಣೆ ನೀಡುವ ನೀತಿಯನ್ನು ಅನುಸರಿಸಲಾಯಿತು. ಆದರೆ ಸರ್ಕಾರದ ಈ ನೀತಿ ಬಹಳಷ್ಟು ಸಲ ಉಲ್ಲಂಘನೆಯಾಗುತ್ತಾ ಬಂತು. ಕೈಮಗ್ಗಕ್ಕೆ ಮೀಸಲಿಟ್ಟ ಸೀರೆ ಮೊದಲಾದ ಉತ್ಪನ್ನಗಳನ್ನು ಮಿಲ್ಲುಗಳಲ್ಲಿಯೂ ತಯಾರಿಸಲಾಗುತ್ತಿತ್ತು. ಸೀರೆಗಳಿಗಾಗುವ ಬಟ್ಟೆಯನ್ನು ಮಿಲ್ಲುಗಳಲ್ಲಿ ತಯಾರು ಮಾಡಿ, ಅನಂತರ ಸೀರೆಗಳಾಗಿ ಪ್ರಿಂಟ್ ಮಾಡಿ ಮಾರಾಟ ಮಾಡಲಾಗುತ್ತಿತ್ತು. ವಿದ್ಯುತ್ ಮಗ್ಗಗಳ ಆಗಮನದಿಂದ ಕೈಮಗ್ಗ ಕ್ಷೇತ್ರಕ್ಕೆ ಮತ್ತೊಮ್ಮೆ ಭಾರೀ ಪೆಟ್ಟು ಬಿತ್ತು. ಕೈಮಗ್ಗ ಕ್ಷೇತ್ರವು ಈ ದಾಳಿಯನ್ನು ಎದುರಿಸಿ ಇಂದಿಗೂ ಉಳಿದಿದ್ದರೆ ಅದು ಕೇವಲ ಅದರ ವೈಶಿಷ್ಟತೆ ಹಾಗೂ ಗುಣಮಟ್ಟದಿಂದ ಮತ್ತು ಸರ್ಕಾರದಿಂದ ದೊರೆಯುತ್ತಿದ್ದ ಸಬ್ಸಿಡಿ ಮತ್ತು ಮಾರುಕಟ್ಟೆ ಸೌಲಭ್ಯದಿಂದ. ವಿದ್ಯುತ್ ಮಗ್ಗಗಳಲ್ಲಿ ತಯಾರಾದ ಬಟ್ಟೆಯನ್ನು ಕೈಮಗ್ಗದ ಬಟ್ಟೆ ಎಂದು ಮಾರಾಟ ಮಾಡಿ ವಿದ್ಯುತ್ ಮಗ್ಗಗಳ ಮಾಲೀಕರು ಸರ್ಕಾರದ ಸಬ್ಸಿಡಿಯನ್ನು ಕಬಳಿಸತೊಡಗಿದರು. ಕೈಮಗ್ಗ ಕ್ಷೇತ್ರದಲ್ಲಿ ಮೋಸಕ್ಕೆ ಅವಕಾಶ ಕಡಿಮೆ. ಆದರೆ ವಿದ್ಯುತ್ ಮಗ್ಗಗಳ ಲಾಬಿ ಲಂಚದ ವ್ಯವಹಾರದಲ್ಲಿ, ಗೋಲ್‌ಮಾಲ್ ಮಾಡುವುದರಲ್ಲಿ ಎತ್ತಿದ ಕೈ.

ಈಗಂತೂ ಕೇಂದ್ರ ಸರ್ಕಾರ ಜಾಗತೀಕರಣ, ಉದಾರೀಕರಣ ನೀತಿಗಳಿಗೆ ಮೊರೆ ಹೋಗಿದೆ. ಸಬ್ಸಿಡಿ, ರಿಬೇಟ್ ರೂಪದ ಪ್ರೋತ್ಸಾಹವನ್ನು ಹಿಂತೆಗೆದುಕೊಂಡಿದೆ. ಸರ್ಕಾರದ ನೆರವು ಇಲ್ಲದೆ ಕೈಮಗ್ಗ ಕ್ಷೇತ್ರ ಉಳಿಯಲಾರದು. ಕೇಂದ್ರ ಸರ್ಕಾರದ ಸಬ್ಸಿಡಿಯಿಂದ ಜನತಾ ಬಟ್ಟೆಯನ್ನು ಕೈಮಗ್ಗಗಳಲ್ಲಿ ತಯಾರಿಸಲಾಗುತ್ತಿತ್ತು. ಬಡವರಿಗೆ ರಿಯಾಯ್ತಿ ದರಗಳಲ್ಲಿ ಬಟ್ಟೆ ಲಭ್ಯವಾಗುತ್ತಿತ್ತು ಮತ್ತು ನೇಕಾರರಿಗೆ ಉದ್ಯೋಗ ದೊರೆಯುತ್ತಿತ್ತು. ಬಿ.ಜೆ.ಪಿ. ನೇತೃತ್ವದ ಎನ್‌ಡಿಎ ಸರ್ಕಾರ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿ ಜನತಾಬಟ್ಟೆ ಉತ್ಪಾದನೆಯನ್ನು ಕೈಬಿಟ್ಟಿರುವುದರಿಂದ ಬಡವರಿಗೆ ಸುಲಭ ದರದ ಬಟ್ಟೆ ಸಿಗದಂತಾಗಿದೆ ಮತ್ತು ಕೈಮಗ್ಗದ ನೇಕಾರರಿಗೆ ಉದ್ಯೋಗ ಇಲ್ಲದಂತಾಗಿದೆ.

ಸ್ವಾತಂತ್ರ್ಯ ನಂತರ ಸ್ವಾವಲಂಬನೆಯನ್ನು ಸಾಧಿಸುವ ಉದ್ದೇಶದಿಂದ ಕೈಗಾರಿಕರಣದ ನೀತಿಯನ್ನು ಅಂಗೀಕರಿಸಿ ಸಾರ್ವಜನಿಕ ರಂಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ದೊಡ್ಡ ಕೈಗಾರಿಕೆಗಳ ಜೊತೆಯಲ್ಲೇ ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ನೀತಿಯನ್ನು ಅನುಸರಿಸಲಾಯಿತು. ಇದರಿಂದ ಕೈಗಾರಿಕಾ ಉತ್ಪಾದನೆ ಹೆಚ್ಚಾಯಿತಲ್ಲದೆ ಹೆಚ್ಚೆಚ್ಚು ಉದ್ಯೋಗವಕಾಶಗಳ ಸೃಷ್ಟಿಯಾಯಿತು. ಮಾರುಕಟ್ಟೆಯ ಭದ್ರತೆಯನ್ನು ಒದಗಿಸುವ ಮೂಲಕ ದೇಶೀಯ ಉತ್ಪನ್ನಗಳ ಮಾರಾಟಕ್ಕೆ ಅನುಕೂಲಕರ ವಾತಾವರಣವನ್ನು ಖಚಿತಪಡಿಸಲಾಗಿತ್ತು.

ಆದರೆ ಇಂದು, ತಂತ್ರಜ್ಞಾನ ಕ್ಷೇತ್ರದಲ್ಲಿ ಅದ್ಭುತವಾದ ಪ್ರಗತಿಯಾಗಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರುವ ಬಲಾಢ್ಯ ರಾಷ್ಟ್ರಗಳಲ್ಲಿ ಇಂದು ಉತ್ಪತ್ತಿಯಾಗುತ್ತಿರುವ ಉತ್ಪನ್ನಗಳಿಗೆ ಮಿತಿಯೇ ಇಲ್ಲದಂತಾಗಿದೆ. ಅತ್ಯಾಧುನಿಕ ಯಂತ್ರಗಳಿಂದಾಗಿ ಉತ್ಪಾದನೆ ಸಿಕ್ಕಾಪಟ್ಟೆ ಹೆಚ್ಚಾಗುತ್ತದೆ. ಆದರೆ ಅದೇಯಂತ್ರಗಳ ಕಾರಣದಿಂದಾಗಿ ಜನ ಉದ್ಯೋಗವನ್ನು ಕಳೆದುಕೊಂಡು ಬಡವರಾಗುತ್ತಿದ್ದಾರೆ. ಬಡವರ ಸಂಖ್ಯೆ ಬೆಳೆಯುತ್ತಿದ್ದಂತೆ ಅವರ ಕೊಂಡುಕೊಳ್ಳುವ ಸಾಮರ್ಥ್ಯ ಕಡಿಮೆಯಾಗಿ ಮಾರುಕಟ್ಟೆ ಕ್ಷೀಣಿಸುತ್ತಾ ಹೋಗುತ್ತದೆ. ಆಗ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯಾದ ಉತ್ಪನ್ನಗಳು ಮಾರಾಟವಾಗದೆ ರಾಶಿ ಬೀಳುತ್ತದೆ. ಇಂತಹ ಮಾರುಕಟ್ಟೆ ಬಿಕ್ಕಟ್ಟಿನಿಂದ ನರಳುತ್ತಿರುವ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಭಾರತದಂತಹ ದೇಶಗಳ ಮಾರುಕಟ್ಟೆಗಳನ್ನು ಹಿಡಿಯಲು ಬಲಪ್ರಯೋಗ ಮಾಡುತ್ತವೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳ ಇಂತಹ ಒತ್ತಡಗಳಿಗೆ ಮಣಿದು ಭಾರತ

ನಿತ್ಯಾನಂದ ಸ್ವಾಮಿ

ಸರ್ಕಾರ 1991 ರಿಂದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಜಾರಿಗೆ ತಂದಿದೆ. ಹಿಂದಿನ ಕಾಂಗ್ರೆಸ್ ಸರ್ಕಾರಕ್ಕಿಂತಲೂ ಈಗಿನ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರವು ಅಮೆರಿಕದಂತಹ ರಾಷ್ಟ್ರಗಳೊಂದಿಗೆ ಹೆಚ್ಚು ಅನ್ಯೋನ್ಯತೆಯನ್ನು ಹೊಂದಿರುವ ಸರ್ಕಾರ ಈ ನೀತಿಗಳನ್ನು ಅತಿ ರಭಸದಿಂದ ಜಾರಿಗೆ ತರುತ್ತಿದೆ. ಉದಾಹರಣೆಗೆ ವಿಶ್ವ ವ್ಯಾಪಾರ ಸಂಸ್ಥೆಯ ಜತೆ ಒಪ್ಪಂದಕ್ಕೆ ಸಹಿ ಹಾಕಲು ಇನ್ನೂ 3 ವರ್ಷಗಳ ಕಾಲಾವಕಾಶ ಇದ್ದರೂ, ಭಾರತಕ್ಕೆ ಭೇಟಿ ನೀಡಲಿದ್ದ ಅಮೆರಿಕ ಅಧ್ಯಕ್ಷ ಕ್ಲಿಂಟನ್ ಅವರನ್ನು ತೃಪ್ತಿಪಡಿಸಲು ವಾಜಪೇಯಿ ಸರ್ಕಾರ ಆತ್ಮವಸರದಲ್ಲಿ ಒಪ್ಪಂದಕ್ಕೆ ಸಹಿ ಹಾಕಿತು. ಈ ಒಪ್ಪಂದದಿಂದಾಗಿ 714 ಉತ್ಪನ್ನಗಳ ಮುಕ್ತ ಆಮದಿಗೆ ಅಸ್ಪದವಾಗಿದ್ದು ದೇಶದ ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳು ಮಾರುಕಟ್ಟೆ ರಕ್ಷಣೆಯನ್ನು ಕಳೆದುಕೊಂಡಿವೆ. ವಿದೇಶದಿಂದ ಬರುವ ಸರಕುಗಳ ಮೇಲೆ ಗರಿಷ್ಟ ಪ್ರಮಾಣದಲ್ಲಿ ಆಮದು ಸುಂಕ ಹೇರಲು ಈ ಒಪ್ಪಂದದಲ್ಲೇ ಅವಕಾಶವಿದ್ದರೂ ವಿದೇಶಿ ಸರಕುಗಳಿಗೆ ಸುಂಕ ರಿಯಾಯಿತಿ ನೀಡುವ ಮೂಲಕ ಸರ್ಕಾರ ಅಗ್ಗದ ದರಗಳಲ್ಲಿ ಅವುಗಳು ಮಾರಾಟವಾಗುವಂತೆ ಸಹಾಯ ಮಾಡುತ್ತಿದೆ. ಆದರೆ ನಮ್ಮ ರೈತರು ಹಾಗೂ ಸಣ್ಣ ಉದ್ದಿಮೆದಾರರು ದಿವಾಳಿಯಾಗುವಂತೆ ಮಾಡುತ್ತಿದೆ.



ಭಾರತದ ಮಾರುಕಟ್ಟೆಗೆ ಪ್ರವಾಹೋಪಾದಿಯಲ್ಲಿ ನುಗ್ಗುತ್ತಿರುವ ವಿದೇಶಿ ಸರಕುಗಳಲ್ಲಿ ಸಿದ್ಧ ಉಡುಪುಗಳು ಸಹ ಸೇರಿವೆ. ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಮಲಯಾ, ದಕ್ಷಿಣ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಸ್ಥಾಪಿಸಿರುವ ಘಟಕಗಳಿಂದ ಸಿದ್ದಉಡುಪುಗಳು ಭಾರತಕ್ಕೆ ಬರುತ್ತಿವೆ. ಈ ಬಡರಾಷ್ಟ್ರಗಳಲ್ಲಿ ಉತ್ಪಾದನಾ ವೆಚ್ಚ ಬಹಳ ಕೆಳಮಟ್ಟದಲ್ಲಿ ಇರುವುದರಿಂದ ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಸಿದ್ಧ ಉಡುಪು ತಯಾರಿಸುವ ಕಾರ್ಖಾನೆಗಳನ್ನು ತೆರೆದಿವೆ. ಬಾಂಗ್ಲಾದೇಶದಲ್ಲಿ ಸಿದ್ಧ ಉಡುಪು ಕಾರ್ಖಾನೆಯಲ್ಲಿ ಕೆಲಸ ಮಾಡುವ ಒಬ್ಬ ಮಹಿಳೆಗೆ ತಿಂಗಳಿಗೆ ಕೇವಲ ರೂ. 500 ಸಂಬಳ ನೀಡಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ಸಿದ್ಧ ಉಡುಪುಗಳು ಭಾರತದ ಮಾರುಕಟ್ಟೆಗೆ ಬರುವಾಗ ಭಾರತ ಸರ್ಕಾರ ಅವುಗಳಿಗೆ ಆಮದು ಸುಂಕ ರಿಯಾಯ್ತಿ ನೀಡಿ ಸ್ವಾಗತಿಸುತ್ತದೆ. ನಮ್ಮ ದೇಶದ ಸಿದ್ಧ ಉಡುಪು ಪರದೇಶಗಳಿಗೆ ರಫ್ತು ಮಾಡುವ ಸಂದರ್ಭದಲ್ಲಿ ಅವುಗಳ ಮೇಲೆ ಅಧಿಕವಾದ ಅಬ್ಕಾರಿ ಸುಂಕವನ್ನು ಹೇರಿ ಅವುಗಳ ಉತ್ಪಾದನಾ ವೆಚ್ಚವನ್ನು ಹೆಚ್ಚಿಸುತ್ತದೆ. ವಾಜಪೇಯಿ ಸರ್ಕಾರದ ಸ್ವದೇಶಿ ಮುಖವಾಡದ ವಿದೇಶಿ ವ್ಯಾಮೋಹದಿಂದಾಗಿ ಭಾರತದಲ್ಲಿ ಟೈಲರಿಂಗ್ ಉದ್ದಿಮೆ ಮತ್ತು ಕೈಮಗ್ಗದ ಉದ್ದಿಮೆ ನೆಲಕಚ್ಚುತ್ತಿವೆ. ಸಣ್ಣ ಉದ್ದಿಮೆಗಳು ಬಾಗಿಲು ಮುಚ್ಚುತ್ತಿವೆ. ಸ್ವಯಂ ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ.

ವಾಜಪೇಯಿ ಸರ್ಕಾರ ಭಾರಿ ಅವಸರದಲ್ಲಿದೆ. ಜಾಗತೀಕರಣದ ಪ್ರಕ್ರಿಯೆಯನ್ನು ಆದಷ್ಟುಬೇಗ ಪೂರ್ಣಗೊಳಿಸಿ ಅಮೆರಿಕನ್ ದೊರೆಗಳ ಮೆಚ್ಚುಗೆ ಗಳಿಸಲು ಅದು ಓಡಾಡುತ್ತಿದೆ. ಅಮೆರಿಕದ ನಿರಂತರ ಬೆಂಬಲ ಸಿಕ್ಕರೆ ಭಾರತದಲ್ಲಿ ಬಹುಕಾಲ ಅಧಿಕಾರದಲ್ಲಿ ಮುಂದುವರೆಯಬಹುದು ಎಂದು ಅದು ಕನಸು ಕಾಣುತ್ತಿದೆ. ಆದ್ದರಿಂದಲೇ ಉದಾರೀಕೃತ ಆರ್ಥಿಕ ಸುಧಾರಣೆಗಳಿಂದ ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲವೆಂದೂ, ಎರಡನೇ ಸುತ್ತಿನ ಸುಧಾರಣೆಗಳಿಗೆ ಜನತೆ ಸಿದ್ಧವಾಗಬೇಕೆಂದು ನಿರ್ದಾಕ್ಷಿಣ್ಯವಾಗಿ ಘೋಷಿಸತೊಡಗಿದ್ದಾರೆ. ಇದರ ಹಿನ್ನೆಲೆಯಲ್ಲಿ ಸತ್ಯಂ ಸಮಿತಿ ಶಿಫಾರಸುಗಳನ್ನು ಆಧರಿಸಿದ ಹೊಸ ಜವಳಿ ನೀತಿಯೊಂದು ಸಿದ್ಧವಾಗತೊಡಗಿದೆ. ಕೈಮಗ್ಗದ ಉಳಿವಿಗೆ ಸರ್ಕಾರ ಜವಾಬ್ದಾರವಾಗಬೇಕಾಗಿಲ್ಲ ಎಂಬುದೇ ಸತ್ಯಂ ಸಮಿತಿಯ ವರದಿಯಲ್ಲಿ ಅಡಕವಾಗಿರುವ ಸತ್ಯ. ಸಬ್ಸಿಡಿ ಕೊಡುವುದನ್ನು ನಿಲ್ಲಿಸಿ; ರಿಬೇಟ್ ನೀಡುವುದನ್ನು ನಿಲ್ಲಿಸಿ; ಮಾರುಕಟ್ಟೆ ಅಭಿವೃದ್ಧಿ ನೆರವು ಅಗತ್ಯವಿಲ್ಲ; ಸರ್ಕಾರ ತನ್ನ ಇಲಾಖೆಗಳಿಗಾಗಿ ಕೈಮಗ್ಗದಿಂದಲೇ ಸಗಟು ಖರೀದಿ ಮಾಡಬೇಕಾಗಿಲ್ಲ, ಜಾಗತೀಕರಣವನ್ನು ಶ್ರದ್ಧೆಯಿಂದ ಅನುಷ್ಠಾನಕ್ಕೆತರುತ್ತಿರುವ ಸರ್ಕಾರಕ್ಕೆ ಉಂಟಾದ ಜ್ಞಾನೋದಯವಿದು!

ರೈತರನ್ನು ಆತ್ಮಹತ್ಯೆಗೆ ತಳ್ಳುತ್ತಿರುವ, ಕಾರ್ಮಿಕರನ್ನು ಬೀದಿಪಾಲು ಮಾಡುತ್ತಿರುವ, ನೇಕಾರರನ್ನು ಉಪವಾಸ ಬೀಳಿಸುತ್ತಿರುವ ಕೇಂದ್ರ ಸರ್ಕಾರದ ನೀತಿಗಳನ್ನು ಬದಲಾಯಿಸಲು ಬಲಿಷ್ಠವಾದ ಜನಾಂದೋಲನ ಒಂದೇ ದಾರಿ. 1991 ರಿಂದಲೇ ಆಂದೋಲನ ಆರಂಭವಾಗಿದೆ. ಆದರೆ ಅದು ಇನ್ನೂ ವ್ಯಾಪಕಗೊಳ್ಳಬೇಕಾಗಿದೆ, ಇನ್ನೂ ಬಲಿಷ್ಠವಾಗಬೇಕಾಗಿದೆ. ಕೈಮಗ್ಗದ ನೇಕಾರರು ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೆಲವೊಂದು ಕಡೆ ಕೈಮಗ್ಗದ ನೇಕಾರರು ಬಿಜೆಪಿಯನ್ನು ಅಥವಾ ಅದರ ಮಿತ್ರ ಪಕ್ಷಗಳನ್ನು ಕಣ್ಣುಮುಚ್ಚಿ ಬೆಂಬಲಿಸುವುದು ಕಾಣುತ್ತದೆ. ಯಾರಿಂದ, ಯಾವ ನೀತಿಗಳಿಂದ ತಮಗೆ ಈ ಅವನತಿ ಬರತೊಡಗಿದೆ ಎಂಬುದನ್ನು ಕೈಮಗ್ಗದ ನೇಕಾರರು ಅರ್ಥಮಾಡಿಕೊಳ್ಳಬೇಕಾಗಿದೆ. ಎಷ್ಟು ಬೇಗ ನೇಕಾರರು ಎಚ್ಚೆತ್ತುಕೊಳ್ಳುತ್ತಾರೋ ಅಷ್ಟು ಅವರಿಗೆ ಒಳ್ಳೆಯದು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಈ ನೀತಿಗಳನ್ನು ವಿರೋಧಿಸದಿದ್ದರೆ ಕೈಮಗ್ಗ ಉದ್ದಿಮೆ ಇಡಿಯಾಗಿ ಅಳಿದುಹೋಗುವ ಅಪಾಯವಿದೆ ಎಂದು ಕಾಮ್ರೇಡ್ ಮಜುಂದಾರ್ ಹೇಳಿದರು.

ಪುಟ 9ಕ್ಕೆ

ಮಲಪ್ರಭಾ ಅಚ್ಚುಕಟ್ಟು ಪ್ರದೇಶ-2

ಸಾಲದ ಶೂಲಕ್ಕೆ ರೈತರು

ಈ ಶ್ರೀಮಂತ ರೈತರು ಲೇವಾದೇವಿ ಮಾಡುವುದಲ್ಲದೆ, ದಲ್ಲಾಳಿ ವ್ಯಾಪಾರ, ಕೃಷಿ ಪರಿಕರಗಳ ವ್ಯಾಪಾರವನ್ನು ಮಾಡುತ್ತಾರೆ. ವ್ಯಾಪಾರದ ಎಲ್ಲಾ ಕುತಂತ್ರಗಳನ್ನು ಈ ಹೊಸ ವ್ಯಾಪಾರಿ ವರ್ಗ ಕರಗತ ಮಾಡಿಕೊಂಡಿತ್ತಲ್ಲದೆ, ರೈತರ ವ್ಯವಸ್ಥಿತ ಶೋಷಣೆಯಲ್ಲಿ ಹಳೆಯ ಲೇವಾದೇವಿಗಾರರನ್ನು ಇವರು ಮೀರಿಸುತ್ತಾರೆ. ಒಟ್ಟಾರೆ ಸಾವಕಾರಿ ಸಾಲ ಎರಡು ಅಲಗಿನ ಕತ್ತಿಯಂತೆ. ಎರಡೂ ಕಡೆಗೆ ಕೊಯ್ಯುತ್ತದೆ.



ಬಸು

'ಸಾಲಶೂಲ' ಎನ್ನುತ್ತಾರೆ ಅನುಭವಿಕರು. ಶೂಲದ ಏಕೈಕ ಧರ್ಮ ಇರಿಯುವದು ಮತ್ತು ಅವಸಾನಗೈಯುವದು. ಹಾಗೆಂದ ಮಾತ್ರಕ್ಕೆ ಸಾಲ ಮಾಡಿದವರೆಲ್ಲರೂ ಶೂಲಕ್ಕೆ ಒಳಗಾಗುತ್ತಾರೆ ಎಂದೇನು ಇಲ್ಲ. ಸಾಲ ಮಾಡುವುದು ಆಧುನಿಕ ಜೀವನದಲ್ಲಿ ತೀರ ಸಹಜ ಮತ್ತು ಅನಿವಾರ್ಯವೂ ಕೂಡ. ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮುಂತಾದ ವಲಯಗಳಲ್ಲಿ ಸಾಲ ಪಡೆಯುವುದು ಸಾಮಾನ್ಯ. ಅದರಂತೆ ಆಧುನಿಕ ಕೃಷಿಗೆ ಅಥವಾ ಕೃಷಿ ಆಧುನಿಕತೆಗೆ ಹೆಚ್ಚಿನ ಬಂಡವಾಳ ಅಗತ್ಯವಾಗಿರುವುದರಿಂದ ರೈತರು ಸಾಲ ಪಡೆಯುವುದು ಅವಶ್ಯವಾಗುತ್ತದೆ. ಆದರೆ ಹೀಗೆ ಪಡೆದುಕೊಂಡ ಯಾವುದೇ ಸಾಲ ಅನುತ್ಪಾದಕ ಮೂಲಗಳಿಗೆ ವ್ಯಯವಾದಲ್ಲಿ ಇಲ್ಲವೆ ಅಧಿಕ ಉತ್ಪಾದನೆ ತರದೆ ಹೋದಲ್ಲಿ ಸಾಲಗಾರ ತೊಂದರೆಗೆ ಸಿಲುಗುವುದು ನಿಜ. ಮೇಲಿನ ಎಲ್ಲ ಸಂಗತಿಗಳು ಮಲಪ್ರಭಾ ಅಚ್ಚುಕಟ್ಟು ಪ್ರದೇಶ ರೈತರ ಬದುಕಿನಲ್ಲಿ ಅಕ್ಷರಶಃ ನಿಜವಾಗಿದೆ.

ರೈತ ಸಾಲದ ಜಾಲಕ್ಕೆ ಸಿಲುಕಿದ್ದಾದರೂ ಹೇಗೆ? 60 ರ ದಶಕದಲ್ಲಿ ಮಲಪ್ರಭಾ ನೀರಾವರಿ ಯೋಜನೆಯ ಕಾರ್ಯಗಳು ಪ್ರಾರಂಭವಾದವು. ಮರಳಲ್ಲಿ ಪಯಣಿಸಿದಂತೆ ನಿಧಾನವಾಗಿಯೇ ನಡೆದವು. 70 ರ ದಶಕದ ಅರ್ಧದೊಷ್ಟತ್ತಿಗೆ ಭಾಗಶಃ ಪೂರ್ಣವೂ ಆಯಿತು. ಯೋಜನೆ ಪೂರ್ಣಗೊಳ್ಳುತ್ತಿದ್ದಂತೆ ರೈತರಿಗೆ ಭೂಮಿ ಮಟ್ಟ ಮಾಡಿಸಲು ತಿಳಿಸಲಾಯಿತು. ಭೂ ಅಡಮಾನ ಬ್ಯಾಂಕ್‌ಗಳು(ಪ್ರಾಥಮಿಕ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು) ಭೂಮಿ ಸಮ ಮಾಡಲು ರೈತರಿಗೆ ಸಾಲ ನೀಡಿದವು. ಕೃಷಿ ಇಲಾಖೆ, ಕಾಡಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ಮಾಡಿದವು. ರೈತರು ಈ ಹಿಂದೆ ಮಾಡಿದ ಬೆಳೆ ಸಾಲದ ಜೊತೆಗೆ ಹೊಸ ಸಾಲ ಸೇರಿಕೊಂಡು ದೊಡ್ಡ ಮೊತ್ತವಾಯಿತು.

> ಇಂದು ಗ್ರಾಮಾಂತರ ಪ್ರದೇಶದಲ್ಲಿ ಬಂಡವಾಳ ಮಾರುವುದೇ ಒಂದು ಪ್ರಮುಖ ದಂಧೆಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ತಲೆ ಎತ್ತಿರುವ ಅನೇಕ ಫೈನಾನ್ಸ್ ಕಂಪನಿಗಳೇ ಇದಕ್ಕೆ ಸಾಕ್ಷಿ.

ಭೂಮಿಗೆ ನೀರು ಹರಿಯಿತು. ನೀರಾವರಿ ಬೇಸಾಯಕ್ಕೆ ಬೇಕಾದ ಎಲ್ಲ ಪರಿಕರಗಳನ್ನು ಕೊಳ್ಳಲು ಮತ್ತೆ ಸಾಲ ಮಾಡಬೇಕಾಯಿತು. ಗ್ರಾಮೀಣ ವ್ಯವಸಾಯ ಸಹಕಾರಿ ಸಂಘಗಳು ಮೊದಲಿಗಿಂತ ಹೆಚ್ಚಿನ ಪ್ರಮಾಣದ ಬೆಳೆ ಸಾಲ ನೀಡಿದವು. ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸುವ ಉದ್ದೇಶದಿಂದಲೇ ವ್ಯವಸಾಯ ಸೇವಾ ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ರೈತರನ್ನು ಸಾವಕಾರಿ ಸಾಲದ ಕಬಂಧ ಬಾಹುಗಳಿಂದ ಬಿಡುಗಡೆ ಮಾಡುವುದೇ ಸಹಕಾರಿ ಚಳುವಳಿಯ ಮುಖ್ಯ ಗುರಿ. ವ್ಯಸಾಯ ಸೇವಾ ಸಹಕಾರಿ ಸಂಘಗಳಲ್ಲದೆ, ಗ್ರಾಮೀಣ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ರೈತರಿಗೆ ಬೆಳೆ ಸಾಲ, ಟ್ರಾಕ್ಟರ್, ಪಂಪ್‌ಸೆಟ್ಸ್ ಮುಂತಾದವುಗಳಿಗೆ ಸಾಲ ನೀಡಲು ಮುಂದಾದವು. ಎಲ್ಲ ವರ್ಗಗಳ ರೈತರು ಈ ಹಣಕಾಸು ಸಂಸ್ಥೆಗಳ ಪ್ರಯೋಜನ ಪಡೆದರು. ನೀರಾವರಿ ಪ್ರಾರಂಭವಾದ 4-5 ವರ್ಷ ಸಾಲ ಮರು ಪಾವತಿ ಮಾಡುವಲ್ಲಿ ರೈತರು ಹಿಂದ ಬೀಳಲಿಲ್ಲ; ಅಧಿಕ ಉತ್ಪಾದನೆ ಅವರಿಗೆ ಖುಷಿ ನೀಡಿತ್ತು. ನಂತರದ ದಿನಗಳಲ್ಲಿ ಎಲ್ಲವೂ ಎಡವಟ್ಟಾಗ ಹತ್ತಿತು. ಕೃಷಿ ಉತ್ಪಾದನೆಯಲ್ಲಿ ಇಳಿಮುಖ, ಉತ್ಪಾದನಾ ವೆಚ್ಚದಲ್ಲಿ ಗಣನೀಯ ಹೆಚ್ಚಳ, ಹುಟ್ಟುವಳಿಗಳಿಗೆ ಯೋಗ್ಯ ಧಾರಣೆ ಸಿಕ್ಕದಿರುವುದು, ರೈತರ ಹುಮ್ಮಸ್ಸನ್ನು ತಗ್ಗಿಸಿತು. ಅನುತ್ಪಾದಕ ವೆಚ್ಚಗಳಂತೂ ಅವನನ್ನು ಪೂರ್ಣಹಾದಿ ತಪ್ಪಿಸಿವೆ. ಸಾಲಮರು ಪಾವತಿ ಮಾಡದ ಸ್ಥಿತಿಗೆ ನೂಕಿದವು. ಆದರೆ ಸಾಲದ ಮೇಲಿನ ಬಡ್ಡಿ ಏರುತ್ತಾ ಹೋಯಿತು. ಸಾಂಪ್ರದಾಯಿಕ ಬೇಸಾಯಕ್ಕಿಂತ ನೀರಾವರಿಯಲ್ಲಿ ಕೃಷಿ ಉತ್ಪಾದನೆ ಹೆಚ್ಚಿದ್ದರೂ, ಸಾಲ ಮರುಪಾವತಿ ಮಾಡುವಷ್ಟಾಗದು. ಹೀಗಾಗಿ ರೈತ ಸಾಲದ ಸುಳಿಗೆ ಸಿಲುಕಿದ.

ಸಾವಕಾರಿ ಸಾಲದ ಕೂಪಕ್ಕೆ ರೈತರು ಮತ್ತೊಮ್ಮೆ ತಳ್ಳಲ್ಪಟ್ಟರು. ರೈತರು ಸಾಲ ಮರುಪಾವತಿ ಮಾಡದೆ ಕಟ್‌ಬಾಕಿದಾರರಾದರೆ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ಸಾಲ ನೀಡದಾದವು. ಸಾವಕಾರಿ ಸಾಲಕ್ಕೆ ಶರಣು ಹೋಗದೆ ಗತ್ಯಂತರವಿಲ್ಲ. ರೈತರಿಗೆ ಸಾಲು ಒದಗಿಸುವವರು ಯಾರು? ನಗರ, ಪಟ್ಟಗಳಲ್ಲಿರುವ ಸಾಂಪ್ರಾದಾಯಿಕ ಲೇವಾದೇವಿಗಾರರು ಮತ್ತು ದಳ್ಳಾಳಿ ವ್ಯಾಪಾರಸ್ಥರಲ್ಲದೆ, ರೈತ ಸಮುದಾಯದ ಮಧ್ಯದಿಂದಲೇ ಎದ್ದುಬಂದ ಹೊಸ ಧಣಿಗಳು ರೈತರಿಗೆ ಸಾಲ ನೀಡ ಹತ್ತಿದರು. **ಈ ಶ್ರೀಮಂತ ರೈತರು ಲೇವಾದೇವಿ ಮಾಡುವುದಲ್ಲದೆ, ದಲ್ಲಾಳಿ ವ್ಯಾಪಾರ, ಕೃಷಿ ಪರಿಕರಗಳ ವ್ಯಾಪಾರವನ್ನು ಮಾಡುತ್ತಾರೆ. ವ್ಯಾಪಾರದ ಎಲ್ಲಾ ಕುತಂತ್ರಗಳನ್ನು ಈ ಹೊಸ ವ್ಯಾಪಾರಿ ವರ್ಗ ಕರಗತ ಮಾಡಿಕೊಂಡಿತ್ತಲ್ಲದೆ, ರೈತರ ವ್ಯವಸ್ಥಿತ ಶೋಷಣೆಯಲ್ಲಿ ಹಳೆಯ ಲೇವಾದೇವಿಗಾರರನ್ನು ಇವರು ಮೀರಿಸುತ್ತಾರೆ. ಒಟ್ಟಾರೆ ಸಾವಕಾರಿ ಸಾಲ ಎರಡು ಅಲಗಿನ ಕತ್ತಿಯಂತೆ. ಎರಡೂ ಕಡೆಗೆ ಕೊಯ್ಯುತ್ತದೆ.** ಇದಕ್ಕೆ ಒಂದೆರಡು ಉದಾಹರಣೆಗಳನ್ನು ಸ್ಯಾಂಪಲ್ ಆಗಿ ನೀಡಬಹುದು.

ರೈತರಿಗೆ ಅಗತ್ಯವಾದ ಬೀಜ, ಕ್ರಿಮಿನಾಶಕ, ಗೊಬ್ಬರ ಮುಂತಾದ ಸಾಮಗ್ರಿಗಳನ್ನು ಈ ಲೇವಾದೇವಿಗಾರರೆ ಮಾರಾಟ ಮಾಡುತ್ತಾರೆ. ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಈ ಸಾಮಗ್ರಿಗಳನ್ನು ಸಾಲದ ರೂಪದಲ್ಲಿ ಕೊಡಲಾಗುವುದು. ಮತ್ತು ಸಾಮಗ್ರಿ ಪಡೆದ ದಿನದಿಂದಲೇ ಬಡ್ಡಿ ಆಕರಣೆ ಮಾಡಲಾಗುವದು. ರೈತರು ತಮ್ಮ ಹುಟ್ಟುವಳಿಗಳನ್ನು ಈ ವ್ಯಾಪಾರಸ್ಥರಿಗೆ/ ಲೇವಾದೇವಿಗಾರರಿಗೆ ಮಾರಲೇಬೇಕಾಗುತ್ತದೆ. ಆಗಲೂ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಯಲ್ಲಿ ಖರೀದಿಸಲಾಗುತ್ತದೆ. ಸಾಲಗಾರ ರೈತರಿಗೆ ವ್ಯಾಪಾರಸ್ಥರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೇ ಹರಣವಾಗುತ್ತದೆ. ಇದು ಅನ್ಯಾಯವೆಂದು ತಿಳಿದರೂ ರೈತರು ನಿಸ್ಸಾಹಾಯಕರು. ಸಾಲ ಮರುಪಾವತಿ ಮಾಡಲಾಗದ ಎಷ್ಟೋ ರೈತರು ತಮ್ಮ ಹೊಲ, ಮನೆ ಮತ್ತು ಚರಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಆತ್ಮಹತ್ಯೆ ಇಂತ ನಿಕೃಷ್ಟ ಬದುಕಿಗೆ ಅಂತಿಮ ಮಜಲು ಅಷ್ಟೆ.

ಮೇಲಿನ ಉದಾಹರಣೆಯಲ್ಲಿ ರೈತರು ಲೇವಾದೇವಿಗಾರರಿಂದ ಹೇಗೆ ಶೋಷಣೆಗೆ ಒಳಗಾಗುತ್ತಾರೆ ಎಂಬುದು ತಿಳಿಯುತ್ತದೆ. ಕೆಲವು ಸಲ ರೈತರು ಕೃಷಿ ಮತ್ತು ಇತರ ವೆಚ್ಚಗಳಿಗೆ ನಗದು ಹಣವನ್ನೇ ಸಾಲವಾಗಿ ಪಡೆಯುತ್ತಾರೆ. ಹಾಗೆ ನಗದು ಸಾಲ ಪಡೆದ ರೈತರು ತಮ್ಮ ಆಸ್ತಿಯ ಕೆಲವು ಭಾಗವನ್ನು ಕಳೆದುಕೊಳ್ಳದೆ ಗತ್ಯಂತರವಿಲ್ಲ ಎಂಬುದಕ್ಕೆ ಸಾಲದ ಮೇಲಿನ ಬಡ್ಡಿ ಆಚರಣೆಯ ವಿಧಾನವನ್ನು ನೋಡಿದರೆ ತಿಳಿಯುತ್ತದೆ. **ಸಾವಕಾರಿ ಸಾಲದ ಮೇಲಿನ ಬಡ್ಡಿ ಆಕರಣೆಯಾಗಲಿ, ಸಾಲದ ಶರತ್ತುಗಳಾಗಲಿ ಯಾವುದೇ ಕಾನೂನಿನ ಹಿಡಿತಕ್ಕೆ ಸಿಕ್ಕುವುದಿಲ್ಲ. ಅಲ್ಲಿ ಯಾವುದೇ ನೀತಿ, ನಿಯಮ, ಮಾನವೀಯತೆ ಇರುವುದಿಲ್ಲ. ನೂರು ರೂಪಾಯಿಗೆ ಒಂದು ತಿಂಗಳಿಗೆ 5 ರೂ ನಿಂದ 10 ರೂ.ವರೆಗೆ ಬಡ್ಡಿ ಆಕರಿಸಲಾಗುತ್ತದೆ** 100 ಕ್ಕೆ ಒಂದು ತಿಂಗಳಿಗೆ 5 ರಂತೆ ಒಂದು ವರ್ಷಕ್ಕೆ 60 ರೂ. ಆಗುತ್ತದೆ. ಅಂದರೆ ಶೇ 60 ರಷ್ಟು ಬಡ್ಡಿ. ಈ ಅಂಕಿಗಳನ್ನು ಸಾವಿರ, ಲಕ್ಷಗಳಿಗೆ ಪರಿವರ್ತಿಸಿ ಲೆಕ್ಕ ಹಾಕಿದರೆ ಎದೆಯೊಡೆಯುವ ಅಂಶಗಳು ಹೊರಬೀಳುತ್ತವೆ. ಇಂಥ ತಿರುಗಣಿ ಮಡುವಿಗೆ ಬಿದ್ದ ರೈತರು ಹೊರಬರುವುದಾದರೂ ಹೇಗೆ?



ಇದಕ್ಕೆ ಪರಿಹಾರವೇನು? ಸರಕಾರದ ರಾಜಕೀಯ ದೃಢಸಂಕಲ್ಪದಿಂದ ಮಾತ್ರ ರೈತರನ್ನು ಇಂಥ ಸಂಕಟ ಪರಿಸ್ಥಿತಿಯಿಂದ ಪಾರು ಮಾಡಲು ಸಾಧ್ಯ.

ರೈತರ ಹುಟ್ಟುವಳಿಗಳಿಗೆ ಯೋಗ್ಯ ಬೆಲೆ ದೊರಕುವುದು ಒಂದು ಕನಸಿನ ಮಾತೆ ಆಗಿಬಿಟ್ಟಿದೆ. ಪ್ರತಿವರ್ಷವೂ ಇದಕ್ಕಾಗಿ ರೈತರು ಪರಿತಪಿಸುವುದು ನಡೆದೇ ಇರುತ್ತದೆ. ಆಗಾಗ ಸರಕಾರ ಬೆಂಬಲ ಬೆಲೆ ಘೋಷಿಸುತ್ತದೆ. ಅದರ ಅನುಷ್ಠಾನದಲ್ಲಿ ಸೋಲುತ್ತದೆ. ಬೆಂಬಲ ಘೋಷಿಸಿದಾಕ್ಷಣ ಸರಕಾರದ ಜವಾಬುದಾರಿ ಮುಗಿಯಲಿಲ್ಲ. ಅದನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು ಮತ್ತು ರೈತರಿಗೆ ಅದರ ಪ್ರಯೋಜನ ಲಭಿಸುವುದು ಮುಖ್ಯ. ಆದರೆ ಇದಾವುದು ಆಗದ್ದರಿಂದ ರೈತರು ಸರಕಾರದ ಬೆಂಬಲ ಬೆಲೆ ಘೋಷಣೆಯನ್ನು ಲೇವಡಿ ಮಾಡುವಂತಾಗಿದೆ. ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ರೈತರಿಗೆ ಕ್ಯಾಶ್ ಕ್ರಾಪ್' ಇಲ್ಲದಂತಾಗಿದೆ. ಹತ್ತಿ ಇಡೀ ಪ್ರದೇಶದಲ್ಲಿ ಮಾಯವಾಗಿದೆ. ಮೆಕ್ಕೆ ಜೋಳ ಒಂದೆ ಈಗ ರೈತರಿಗೆ ಹಣದ ಬೆಳೆಯಾಗಿದೆ. ಆದರೆ ಹುಟ್ಟುವಳಿ ಮಾರುಕಟ್ಟೆಗೆ ಬಂದಾಗ ಅದಕ್ಕೆ ಯೋಗ್ಯ ಬೆಲೆ ಸಿಗದೆ ರೈತರು ಹಾನಿಯನ್ನು ಅನುಭವಿಸುವಂತಾಗಿದೆ.

ಒಂದೊಮ್ಮೆ ಸರಕಾರ ಘೋಷಿಸಿದ ಬೆಂಬಲ ಬೆಲೆಯನ್ನು ಅನುಷ್ಠಾನಕ್ಕೆ ತಂದರೂ ರೈತರು ಅದರ ಪ್ರಯೋಜನದಿಂದ ವಂಚಿತರಾಗುವುದು ಖಂಡಿತ - ಕಾರಣ ಸಾವಕಾರಿ ಸಾಲ, ರೈತರು ಬೆಳೆಯನ್ನು ಮಾರುಕಟ್ಟೆಗೆ ಕೊಂಡೊಯ್ಯುವ ಪೂರ್ವದಲ್ಲೇ ಲೇವಾದೇವಿಗಾರರು ತಮ್ಮ ಸಾಲ ಮರುಪಾವತಿಗೆ ಫಸಲನ್ನು ತಮಗಿಷ್ಟ ಬಂದ ದರದಲ್ಲಿ ಖರೀದಿಸಿ, ಸಾಲ ಮರುಪಾವತಿ ಮಾಡಿಕೊಳ್ಳುತ್ತಾರೆ. ಎರಡು-ಮೂರು ಸಾಹುಕಾರರಲ್ಲಿ ಸಾಲ ಮಾಡಿದ ರೈತರ ಸ್ಥಿತಿ ಕರುಣಾಜನಕ. ಆಸ್ತಿ ಕಳೆದುಕೊಳ್ಳುವುದರೊಂದಿಗೆ ಮರ್ಯಾದೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಏನೇ ಆಗಲಿ ಸರಕಾರ ಬೆಂಬಲ ಬೆಲೆ ನಿಗದಿ ಮಾಡುವುದಲ್ಲದೆ, ಮಾರ್ಕೆಟಿಂಗ್ ಫೆಡರೇಷನ್, ಎಫ್‌ಸಿಐ, ಸಿಸಿಐ ಮೂಲಕ ರೈತರ ಹುಟ್ಟುವಳಿಗಳನ್ನು ಖರೀದಿಸಲು ಮುಂಧಾಗಬೇಕು. ಮುಕ್ತ ಮಾರುಕಟ್ಟೆಯ ಈ ದಿನಗಳಲ್ಲಿ ಎಲ್ಲ ರಂಗಗಳಲ್ಲೂ ಸರಕಾರ ತನ್ನ ಜವಾಬುದಾರಿಯನ್ನು ಖಾಸಗಿಯುವರ ಹೆಗಲಿಗೆ ಏರಿಸುವ ಸಂದರ್ಭದಲ್ಲಿ ಹುಟ್ಟುವಳಿಗಳ ಖರೀದಿ ಸಾಧ್ಯವೇ?

ಕೃಷಿ ಲಾಭದಾಯಕ ಕ್ಷೇತ್ರವಲ್ಲ ಎಂಬ ತೀರ್ಮಾನಕ್ಕೆ ಬ್ಯಾಂಕುಗಳು ಬಂದಂತಿವೆ. ರೈತರಿಗೆ ಸಾಲ ನೀಡಿದರೆ ವಾಪಾಸು ಬರುವುದಿಲ್ಲವೆಂದೆ ಅವುಗಳ ಭಾವನೆ. ಆದ್ದರಿಂದ ಕೃಷಿಗೆ ಸೀಮಿತವಾದ ಬ್ಯಾಂಕುಗಳು ಸಹ ಇತ್ತತ್ತಲಾಗಿ ಕೃಷಿಯೇತರ ವಲಯಗಳಿಗೆ ಸಾಲ ನೀಡುವ ಧೋರಣೆ ತಾಳಿವೆ. ಹೀಗಾಗಿ ರೈತರಿಗೆ ಸಾಲದ ಸೌಲಭ್ಯಗಳು ಕಡಿಮೆಯಾಗುತ್ತಿವೆ. ಅಲ್ಲದೆ ಕಟ್ ಬಾಕಿದಾರನ ಪರಿಸ್ಥಿತಿಯಂತೂ ಇನ್ನೂ ಚಿಂತಾಜನಕ. ಇಂಥ ಸ್ಥಿತಿಯಲ್ಲಿ ಸರಕಾರ ಒಂದು ನಿರ್ಧಾರಕ್ಕೆ ಬರುವುದು ಸೂಕ್ತ. ರೈತರ ಹಿಂದಿನ ಸಾಲಕ್ಕೆ ಬಡ್ಡಿ, ಸುಸ್ತಿ ಬಡ್ಡಿ ಸೇರಿಸುವುದನ್ನು ತಕ್ಷಣ ನಿಲ್ಲಿಸಬೇಕು ಮತ್ತು ಇಂತಿಷ್ಟು ಕಂತುಗಳಲ್ಲಿ ಸಾಲ ಮರುಪಾವತಿಗೆ ಅವಕಾಶ ಕಲ್ಪಿಸಬೇಕು. ಯಥಾ ಪ್ರಕಾರ ರೈತರಿಗೆ ಹೊಸಸಾಲವನ್ನು ನೀಡುವ ವ್ಯವಸ್ಥೆ ಮಾಡಬೇಕು. ಇದೊಂದೆ ಉಳಿದಿರುವ ಮಾರ್ಗ.

ಈ ಅಚ್ಚುಕಟ್ಟು ಪ್ರದೇಶದಲ್ಲಿ ಜನರು ಅನೇಕ ದುಶ್ಚಟಗಳಿಗೆ ಕೂಡ ಅಂಟಿಕೊಂಡಿರುವುದು ಸಾಮಾನ್ಯಸಂಗತಿಯಾಗಿದೆ. ಮದ್ಯಪಾನ, ಟಿ.ಸಿ ಮತ್ತು ಜೂಜಾಟಗಳು ಸಹ ಜನರನ್ನು ಸಾಲದ ಬಲೆಗೆ ನೂಕಿವೆ. ಸಾಲದ ಭಾದೆ ತಾಳಲಾರದೆ ಮತ್ತೆ ಮುಂದೆ ಸಾಲ ಪಡೆಯಲು ಸಾಧ್ಯವಾಗದೆ ಜೀವನ ಶೂನ್ಯವೆನಿಸಿ, ಆತ್ಮಹತ್ಯೆಗೆ ಮೊರೆ ಹೋದ ಘಟನೆಗಳು ಸಾಕಷ್ಟಿದ್ದರೂ ಕಾನೂನಿನ ಕಣ್ಣಿಗೆ ಅವು ಕೇವಲ ಅಸ್ವಾಭಾವಿಕ ಸಾವುಗಳಾಗಿ, ಕಾಲಗರ್ಭಕ್ಕೆ ಸೇರಿ ಹೋಗಿವೆ.

ನಮ್ಮ ಶಾಸಕರೆಲ್ಲಿ? ಕಂಡಿದ್ದೀರಾ ನೀವು?

ಒಂದು ವರ್ಷದ ಹಿಂದೆ ಜಾತಿ, ಹಣ, ಹೆಂಡದ ಪ್ರಭಾವದಿಂದ ಆಯ್ಕೆಯಾದ ಶಾಸಕರು ಇಡೀ ಬಾಗೇಪಲ್ಲಿ ಕ್ಷೇತ್ರವನ್ನು ಕತ್ತಲೆಯತ್ತ ತಳ್ಳುವುದರಲ್ಲಿ ಕುಖ್ಯಾತಿ ಗಳಿಸಿದ್ದಾರೆ. ಕೇವಲ ಸ್ವಾರ್ಥ ಸಾಧನೆಗಾಗಿ ಪ್ರಜಾಪ್ರಭುತ್ವವನ್ನು ಧಿಕ್ಕರಿಸಿ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯನ್ನು ನಾಮಪತ್ರ ಹಾಕಲು ಬಿಡದೆ ತನ್ನ ಕುಡುಕ ಚೇಲಾಗಳಿಂದ ದೊಂಬಿ, ದಾಂಧಲೆ ನಡೆಸಿ ಇಬ್ಬರು ಅಮಾಯಕರನ್ನು ಬಲಿತೆಗೆದುಕೊಂಡ ಒಬ್ಬ ಅಪರಾಧಿಗೆ ನಾವು ಯಾವ ಮತ್ತಿನಲ್ಲಿ ಮತ ಹಾಕಿದೆವೋ ಎಂದು ಮರುಕ ಪಡುತ್ತಿರುವ ಪೈಕಿ ಶಾಸಕರನ್ನು ಬೆಂಬಲಿಸಿದವರೇ ಹೆಚ್ಚಾಗಿದ್ದಾರೆ. ಸಂಪಂಗಿಯವರ ಮೇಲೆ ಇಟ್ಟಿದ್ದ ನಿರೀಕ್ಷೆ ಸಂಪೂರ್ಣ ಸುಳ್ಳು ಎಂದು ಕ್ಷೇತ್ರದಾದ್ಯಂತ ಜನಜನಿತವಾಗಿದೆ.


ಶಾಸಕ ಸಂಪಂಗಿ

ಒಂದು ವರ್ಷದ ಸಾಧನೆ

ಒಂದು ವರ್ಷದ ಸಂಪಂಗಿಯವರ ಸಾಧನೆ ಏನು? ಎಂದು ಶಾಸಕರನ್ನೇ ಕೇಳಬೇಕು ಇಲ್ಲದಿದ್ದರೆ ಯಾರಿಗೂ ಅರ್ಥವಾಗುವುದಿಲ್ಲ. ಏಕೆಂದರೆ ಒಂದು ವರ್ಷದಲ್ಲಿ ಹೆಚ್ಚೆಂದರೆ ಕ್ಷೇತ್ರದಲ್ಲಿ 24 ದಿನ ಇದ್ದಿರಬಹುದು! ಅಂದರೆ ತಿಂಗಳಿಗೆ ಎರಡು ಬಾರಿ, ಅಂದರೆ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಎಷ್ಟು ಗಮನ ಹರಿಸಿರಬಹುದು. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ರಾಜ್ಯೋತ್ಸವಗಳು ಬರಲೇಬೇಕಾದಂತಹ ದಿನಗಳಾದ್ದರಿಂದ ಬಂದಿರಬಹುದು. ಗ್ರಾಮ ಪಂಚಾಯ್ತಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳ ಸಮಯದಲ್ಲಿ ಪ್ರಚಾರಕ್ಕಾಗಿ ಬಂದಿರಬಹುದು. ಅದು ಬಿಟ್ಟರೆ, ಅಭಿವೃದ್ಧಿ ಕಾರ್ಯಗಳ ವೀಕ್ಷಣೆಗಾಗಿ ಎಂದು ಯಾವತ್ತೂ ಬಂದಂತಹ ಸೂಚನೆಗಳಿಲ್ಲ. ಒಂದು ವೇಳೆ ಬಂದಿದ್ದರೆ, ಯಾವುದೋ ದೇವಸ್ಥಾನದ ಪೂಜೆಗೋ, ಕ್ರೀಡಾ ಕಾರ್ಯಕ್ರಮಗಳಲ್ಲಿ ದುಡ್ಡು ಕೊಟ್ಟು ಹೊಗಳಿಸಿಕೊಳ್ಳಲಿಕ್ಕೋ ಬಂದಿರಬಹುದು. ಹೌದು ರಾಜಕುಮಾರ್‌ರನ್ನು ಬಿಡಬೇಕೆಂದು ಗಡಿ ವೆಂಕಟರಮಣ ಸ್ವಾಮಿಗೆ 101 ತೆಂಗಿನಕಾಯಿ ಹೊಡೆಯಲು ಬಂದಿದ್ದರು.

ಅಂತೂ ತಿಂಗಳಿಗೆ ಒಂದು ಬಾರಿ ಬರ್ತಾರೆ, ಬಂದಾಗ ಅಧಿಕಾರಿಗಳನ್ನು ಮಾತನಾಡಿಸಿ ಹೋಗುತ್ತಾರೆ. ಒಂದು ವೇಳೆ ಅವರಿಗೆ ಪುರುಸೊತ್ತು ಇಲ್ಲದಿದ್ದರೆ ಅವರ ತಮ್ಮನಂತೂ ಬಂದೇ ಬರ್ತಾರೆ. ಬಂದು ಎಲ್ಲಾ ಇಲಾಖೆಗಳ ಯೋಗಕ್ಷೇಮ ವಿಚಾರಿಸಿ ಜೇಬು ತುಂಬಿಕೊಂಡು ಹೋಗ್ತಾರೆ. ಶಾಸಕರು ಬಂದಾಗ ಕೆಲವು ಪತ್ರಕರ್ತರನ್ನಂತೂ ಮರೆಯುವುದಿಲ್ಲ. ಒಳ್ಳೆಯ ಪ್ರಚಾರ ಪ್ರಿಯರು. ಬಂದಾಗಲೆಲ್ಲಾ ಪತ್ರಕರ್ತರನ್ನು ಮರೆಯುವುದಿಲ್ಲ. ಇತ್ತೀಚೆಗೆ ಮೇದಾವಿ ಪತ್ರಕರ್ತರೊಬ್ಬರು ಶಾಸಕರನ್ನು ಒಂದು ವರ್ಷದ ಉಡುಗೊರೆ ಕೇಳಿದರಂತೆ. ಅದಕ್ಕೆ ಶಾಸಕರು ಕೂಡಾ ಖಂಡಿತ ಆಶ್ಚರ್ಯಕರ ಉಡುಗೊರೆ ಕೊಡುತ್ತೇನೆಂದು ಭರವಸೆ ಕೊಟ್ಟರಂತೆ. ಯಾಕೆಂದರೆ ಈ ಬಾರಿ ಮಳೆ ಚೆನ್ನಾಗಿ ಬಂದು ಕೆರೆಗಳೆಲ್ಲಾ ತುಂಬಿದರೆ ತಿರುಪತಿ ತಿಮ್ಮಪ್ಪನಿಗೆ ಬಸ್ಸು ಹೊರಡಿಸುವೆ ಎಂದು ದೇವರಿಗೆ ಮೊರೆ ಇಟ್ಟಿರುವ ಸುದ್ದಿ ಪ್ರಚಾರ ಮಾಡುವುದಕ್ಕೋಸ್ಕರ.

ಕ್ಷೇತ್ರದ ಅಭಿವೃದ್ಧಿಗೋಸ್ಕರ ದೇವರಿಗೆ ಮೊರೆ ಇಡುವ ಶಾಸಕರು ಯಾರಿಗೆ ಸಿಗಬೇಕು ಹೇಳಿ? ಬಾಗೇಪಲ್ಲಿ ಕ್ಷೇತ್ರದ ಜನತೆಯ ಅದೃಷ್ಟವೆಂಬಂತೆ ಸಂಪಂಗಿಯವರು ಶಾಸಕರಾಗಿ ಬಂದ ಸುದ್ದಿ ದೇವರವರೆಗೂ ತಲುಪುತ್ತಿದೆ. ಈ ಮೊದಲು ಕಾಂಗ್ರೆಸ್ ಶಾಸಕರು ಕೇವಲ ಕ್ಷೇತ್ರದ ಜನತೆಗೆ ಮಾತ್ರ ತಿಳಿಯುವಂತೆ ಮಾಡಲಾಗಿದ್ದರು. ನಂತರ ಸಿಪಿಐ(ಎಂ) ಶಾಸಕರು ವಿಧಾನಸಭೆಯವರೆಗೂ ತಂದು ಇಡೀ ಕರ್ನಾಟಕಕ್ಕೆ ತಿಳಿಯುವಂತೆ ಮಾಡಿದ್ದರು. ನಂತರ ಬಂದಾಯ ಕಾಂಗ್ರೆಸ್ ಶಾಸಕ ಸಂಪಂಗಿಯವರು ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ವಿಧಾನಸಭೆಯ ಗಮನಕ್ಕೆ ತರುವ ಬದಲು ದೇವರ ಗಮನಕ್ಕೆ ತರಲು ಪ್ರಯತ್ನಿಸುತ್ತಿರುವುದು ಸಾಹಸವೇ ಸರಿ!

ಒಂದು ವರ್ಷದ ಹಿಂದೆ ಇಲ್ಲಸಲ್ಲದ ಆಶ್ವಾಸನೆ ಕೊಟ್ಟರು. ಈಡೇರಿಸಲಸಾಧ್ಯವಾದ ಭರವಸೆಗಳ ಆಸೆಗೆ ಮರುಳಾದ ಜನತೆ ನಂಬಿದರು. ಅದರ ಪ್ರತಿಫಲ ಇಂದು ಅನುಭವಿಸುತ್ತಿದ್ದೇವೆಂದು ಇಡೀ ಕ್ಷೇತ್ರದಾದ್ಯಂತ ಪಶ್ಚಾತಾಪದ ಮಾತುಗಳು.

ಚುನಾವಣೆಯ ನಂತರ ಬಾಗೇಪಲ್ಲಿಯಲ್ಲಿ ಮನೆ ಮಾಡುವೆ ಎಂದು ಹೇಳಿದರು. ಮನೆ ಮಾಡಿ ಜನರ ದಿನನಿತ್ಯ ಸಮಸ್ಯೆಗಳತ್ತ ಗಮನ ಹರಿಸುವೆ ಎಂದು ಹೇಳಿದರು. ಮನೆ ಅಲ್ಲ ಕನಿಷ್ಠ ವಾರಕ್ಕೊಮ್ಮೆಯಾದರೂ ಬರುತ್ತಿಲ್ಲ. ಜನರ ದಿನನಿತ್ಯದ ಸಮಸ್ಯೆಗಳಿಗೆ ಬೆಂಗಳೂರಿಗೆ ದೌಡಾಯಿಸಬೇಕು. ಇಲ್ಲವಾದರೆ, ಅವರ ಚೇಲಾಗಳಿಂದ ಫೋನಾಯಿಸಬೇಕು. ನೂರಾರು ರೂ.ಗಳ ಖರ್ಚು. ಬೆಂಗಳೂರಿನಲ್ಲಿ ಕೂಡಾ ಸರಿಯಾಗಿ ಸಿಗುವುದಿಲ್ಲ. ಒಂದು ವೇಳೆ ಇದ್ದರೂ ಮನೆಯಲ್ಲಿ ಇಲ್ಲ ಎಂದು ತಿಳಿಸುತ್ತಾರೆಂದು ಅವರ ಹತ್ತಿರದ ಸ್ನೇಹಿತರೇ ಕೆಲವರು ಹೇಳುತ್ತಾರೆ!

ಬಾಗೇಪಲ್ಲಿಗೆ 5000 ಯುವಜನರಿಗೆ ಕೆಲಸ ಒದಗಿಸುವ ಸರ್ಕಾರಿ ಸ್ವಾಮ್ಯದ ಉದ್ಯಮವೊಂದನ್ನು ಮಂಜೂರು ಮಾಡಿಸುವೆನೆಂದು ಭಾರೀ ಭರವಸೆ ಕೊಟ್ಟಿದ್ದರು. ಅದರ ಪ್ರಯತ್ನ ಏನಾಗಿದೆಯೋ ತಿಳಿಯುತ್ತಿಲ್ಲ. ಪಾಪ ಸಂಪಗಿಯವರಿಗೆ ಎಲ್.ಪಿ.ಜಿ. ಎಂದರೆ ಗೊತ್ತಿದೆಯೋ ಇಲ್ಲವೋ. ಉದಾರೀಕರಣ, ಖಾಸಗೀಕರಣ, ಜಾಗತೀಕರಣ(Liberlisation, Privatisation, Globalisation) ದ ಪರಿಣಾಮವಾಗಿ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನೇ ಖಾಸಗಿಯವರಿಗೆ ಮಾರುತ್ತಿದ್ದಾರೆ. ಇರುವ ಸಣ್ಣಪುಟ್ಟ ಸಾವಿರಾರು ಕಾರ್ಖಾನೆಗಳು ಮುಚ್ಚುತ್ತಿದ್ದಾರೆಂದು ತಿಳಿಯದೇ ಕೇವಲ ಓಟಿಗೋಸ್ಕರ ಒಂದು ಭರವಸೆ ಆ ಕಡೆ ಬಿಸಾಕಿದರು. ಅದನ್ನೇ ಜನ ನಂಬಿದರು.

ಇಂದು ಇಡೀ ಕ್ಷೇತ್ರದಾದ್ಯಂತ ಸಾಕಷ್ಟು ಮಳೆ ಇಲ್ಲ. ಕುಚ್ಚಿ ಬೆಳೆಗೆ ಆಗುವಷ್ಟು ಮಾತ್ರ ಮಳೆ ಆಗುತ್ತದೆ. ಅದಕ್ಕು ನೆಲೆಗಡಲೆಗೆ ಕೆಲವು ಕಡೆ ಕಂಬಳಿ ಹುಳು ಹಿಡಿದು ಬೆಳೆ ಪೂರ್ತಿ ಬರಲು ಸಾಧ್ಯ ಇಲ್ಲ. 3 ವರ್ಷದಿಂದ ಮಳೆ ಸರಿಯಾಗಿಲ್ಲದೆ, 500 ಅಡಿ ಕೊಳವೆಬಾವಿ ಕೊರೆದರೂ ನೀರು ಸಿಗುತ್ತಿಲ್ಲ. ನೀರಿಲ್ಲದೆ, ಮಧ್ಯಮ ರೈತರು ಪರದಾಡುವಂತಾಗಿದೆ. ಒಂದೆರಡು ಎಕರೆ ಇಟ್ಟುಕೊಂಡು ಸಾವಿರಾರು ರೂ.ಗಳ ಕೊಳವೆ ಬಾವಿ ತೋಡಿಸಿ ಸಾವಿರಾರು ರೂ. ಖರ್ಚು ಮಾಡಿ ವಿದ್ಯುತ್ ಸಂಪರ್ಕ ಪಡೆದು. ಕಡೆಗೆ ನೀರಿಲ್ಲದೆ, ಇಟ್ಟ ಬೆಳೆ ಒಣಗುತ್ತಿದ್ದರೆ, ಜೀವವೇ ಹೋದಂತೆ ರೈತರು ಕಣ್ಣು ಬಿಡುತ್ತಿದ್ದಾರೆ.

ಕೊಳವೆ ಬಾರಿ ಕೊರೆದಾಗ ನೀರು ಬಂದು ಒಂದು ವರ್ಷದ ನಂತರ ಬತ್ತಿಹೋಗುತ್ತಿರುವ ಬಾವಿಗಳಿಂದ ರೈತರು ಜೀವಂತ ಶವಗಳಾಗುತ್ತಿದ್ದಾರೆ. ಇದರ ಜೊತೆಗೆ ವಿದ್ಯುತ್ ಇಲಾಖೆಯವರು ವಿದ್ಯುತ್ ಬಿಲ್ ಸಲ್ಲಿಸಬೇಕೆಂದು ಹಳೆಬಾಕಿ, ಹೊಸ ಬಾಕಿ ಎಂದು ಎಲ್ಲವನ್ನು ಸೇರಿಸಿ ರೈತರನ್ನು ವಂಚಿಸುತ್ತಿದ್ದಾರೆ. ವಿದ್ಯುತ್ ಬಿಲ್ಲಿನಲ್ಲಿ ನಿರ್ದಿಷ್ಟವಾಗಿ ಹಳೆ ಬಾಕಿ ಯಾವ ದಿನದಿಂದ ಯಾವ ದಿನದವರೆಗೆ ಎನ್ನುವುದಾಗಲೀ, ಆಗ ಇದ್ದಂತಹ ದರ ಎಷ್ಟು ಎನ್ನುವುದಾಗಲೀ ಮತ್ತು ಇತರ ವಿವರಗಳಾಗಲೀ ಇಲ್ಲ. ಅವರು ಎಷ್ಟು ಹಾಕಿದರೆ ಅಷ್ಟು ಕೊಡುವುದು ರೈತರ ಕೆಲಸ. ಕೊಳವೆಬಾವಿಯಲ್ಲಿ ನೀರಿರಲಿ ಇಲ್ಲದಿರಲಿ, ಬತ್ತಿಹೋಗಿರಲಿ ವಿದ್ಯುತ್ ಧರ ಮಾತ್ರ ಕಟ್ಟಲೇಬೇಕು. ರೈತರ ವಿರುದ್ಧ ನಡೆಯುತ್ತಿರುವ ಈ ಶೋಷಣೆಯನ್ನು ವಿಧಾನಸೌಧದವರೆಗೂ ತೆಗೆದುಕೊಂಡು ಹೋಗುವ ಶಾಸಕರಿಲ್ಲವಾಯಿತಲ್ಲ ಎಂದು ಜನ ವಿಷಾಧಿಸುವ ಪರಿಸ್ಥಿತಿ ಬಂದಿದೆ.

ವಿದ್ಯಾರ್ಥಿಗಳು, ಯುವಜನರು ಬಂದರೆ, ಕ್ರೀಡೆಗಾಗಿಯೋ ಅಥವಾ ಇನ್ನಾವುದೋ ಖರ್ಚಿಗಾಗಿಯೋ ಹಣ ಕೊಡುವ ಶಾಸಕರು ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕದ ವಿಚಾರ ಕೋರ್ಟಿನಲ್ಲಿ ತಡೆ ಬಂದಾಗ ಇಡೀ ರಾಜ್ಯದಾದ್ಯಂತ ವಿದ್ಯಾರ್ಥಿಗಳ ಹೋರಾಟ ಪ್ರಾರಂಭವಾಯಿತು. ವಿದ್ಯಾರ್ಥಿ ಯುವಜನರ ಬಗ್ಗೆ ಕಾಳಜಿ ಇರುವ ಶಾಸಕರು ಅವರ ಬಗ್ಗೆ ಒಂದು ದಿನವೂ ಚಕಾರವೆತ್ತಲಿಲ್ಲ. ಶಾಲಾವೇಳೆ ಬದಲಾವಣೆ ಆದಾಗ ಇಡೀ ಕರ್ನಾಟಕದ ವಿದ್ಯಾರ್ಥಿ ಯುವಜನ, ಪೋಷಕರು ಹೋರಾಟ ಮಾಡಿದರೂ ಸೌಜನ್ಯಕ್ಕಾಗಿಯಾದರೂ ಅವರ ಪರ ಮಾತನಾಡಲಿಲ್ಲ.

ರಾಜ್ಯಮಟ್ಟದ ಸಮಸ್ಯೆಗಳು ಒತ್ತಟ್ಟಿಗಿರಲಿ, ಈ ಕ್ಷೇತ್ರದ ಸಮಸ್ಯೆಗಳೇ ಇನ್ನೂ ಹೆಚ್ಚಾಗಿವೆ. ಪಾಪ ಅದರ ಕಡೆ ಗಮನ ಹರಿಸುವ ಗೋಜಿಗೆ ಹೋಗುತ್ತಿಲ್ಲ. ಇನ್ನೆಲ್ಲಿ ರಾಜ್ಯಮಟ್ಟದ ಸಮಸ್ಯೆಗಳು.

ಚಿತ್ರಾವತಿ ಯೋಜನೆ ಕೈಗೊಳ್ಳಬಾರದು ಎಂದು ಆಂಧ್ರ ಸರ್ಕಾರ, ರಾಜಕೀಯ ಪಕ್ಷಗಳು ಬೊಬ್ಬೆ ಇಡುತ್ತಿದ್ದರೂ ಅದರ ಬಗ್ಗೆ ಬಾಯಿ ತೆರೆಯಲು ತಿಂಗಳುಗಳೇ ಕಳೆದವು. ಜನರೇ ಎದ್ದು ಸಿಪಿಐ(ಎಂ)

ಭಾಸ್ಕರ ರೆಡ್ಡಿ

ನೇತೃತ್ವದಲ್ಲಿ ಹೋರಾಟ ಮಾಡಿದ ನಂತರವೇ ಬಾಯಿ ತೆರೆದು ಹೋರಾಟ ಅನಗತ್ಯ ಎಂದು ಹೇಳಿದರು. ಆದರೂ ಕೆಲಸ ಪ್ರಾರಂಭವಾಗುವ ಸೂಚನೆಗಳೇ ಕಂಡುಬರುತ್ತಿಲ್ಲ.

ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳ ಮುಖ್ಯ ರಸ್ತೆಗಳ ಒತ್ತುವರಿ ಜಾಸ್ತಿ ಆಗಿ ರಸ್ತೆ ಇಕ್ಕಟ್ಟಾಗಿದೆ. 30 ವರ್ಷಗಳ ಹಿಂದಿನ ಜನಸಂದಣಿಗೆ ತಕ್ಕಂತೆ ರಸ್ತೆಗಳೇ ಇಂದಿಗೂ ಇರುವುದರಿಂದ, ಅದರ ಜೊತೆಗೆ ಖಾಸಗಿ ಕಟ್ಟಡಗಳನ್ನು, ವಾಣಿಜ್ಯ ಮಳಿಗೆಗಳನ್ನು ರಸ್ತೆಗೆ ಒತ್ತರಿಸಿ ಕಟ್ಟಿದ್ದಾರೆ. ಅದರಿಂದ ಇಂದು ವಾಹನ ಸಂಚಾರ ಹೆಚ್ಚಿ, ಮಕ್ಕಳು, ವಯಸ್ಸಾದವರು, ರೋಗಿಗಳು ರಸ್ತೆ ಧಾಟಲಾರದೆ ಪ್ರತಿನಿತ್ಯವೂ ಯಾವುದೇ ಕಡೆಯಲ್ಲಿ ಅಪಘಾತಗಳು ಆಗುತ್ತಲೇ ಇವೆ. ಪ್ರತಿದಿನವೂ ರಸ್ತೆ ಬಳಸುವ ಸಾವಿರಾರು ಪಾದಚಾರಿಗಳು ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡು ನಡೆಯಬೇಕಾಗಿದೆ. ರಸ್ತೆ ಅಗಲಗೊಳಿಸುವ ಪ್ರಯತ್ನ ಮಾಡುವ ಬದಲು ಅದನ್ನು ಹಾಗೇ ಉಳಿಸಬೇಕೆಂದು ಅರ್ಥವಿಲ್ಲದ ಬೈಪಾಸ್ ರಸ್ತೆ ನಿರ್ಮಿಸಬೇಕೆಂದು ಶಾಸಕರು ಹೇಳಿಕೆಗಳು ನೀಡುತ್ತಿರುವುದು ಹಾಸ್ಯಾಸ್ಪದವಾಗಿದೆ.

ವಂಡಮಾನ್ ಯೋಜನೆ ಬಾಗೇಪಲ್ಲಿಗೆ ಪ್ರಯೋಜನವಿಲ್ಲವೆಂದು ಶಾಸಕರು ಹೇಳಿಕೆ ನೀಡಿ ಅಪಹಾಸ್ಯಕ್ಕೀಡಾದರು. ಯೋಜನೆ ಇಂದು ಪೂರ್ತಿಯಾಗುತ್ತಿದೆ. ಯೋಜನೆ ನೋಡಿದರೆ, ಇಡೀ ಜಿಲ್ಲೆಯಲ್ಲೇ ಅಂತಹಯೋಜನೆ 40 ವರ್ಷಗಳ ಈಚೆಗೆ ಆಗಿಲ್ಲ. ಸುಮಾರು 3000 ಎಕರೆವರೆಗೂ ನೀರು ಸರಬರಾಜಾಗುವುದು. ಕೆರೆಯ ಸುತ್ತಲೂ ಸುಮಾರು 8 ಕಿ.ಮಿ. ವರೆಗೂ ಅಂತರ್ಜಲಮಟ್ಟ ಏರುವ ಸಾಧ್ಯತೆ ಇದೆ. ಆ ಭಾಗದ ಅಂತರ್ಜಲ ಮಟ್ಟ ಏರುವುದರಿಂದ ಕುಡಿಯುವ ನೀರಿನಲ್ಲಿನ ಹಾನಿಕಾರಕ ಫ್ಲೋರೈಡ್ ಸಮಸ್ಯೆ ನೀಗುವ ಸಾಧ್ಯತೆ ಇದೆ. ಅಂತಹ ಯೋಜನೆ ತಾಲೂಕಿಗೆ ಪ್ರಯೋಜನ ಇಲ್ಲ ಎಂದು ಹೇಳಿ ಅದರಲ್ಲಿ ದುರಪಯೋಗ ಆಗಿದೆ ಎಂದು ಹೇಳಿಕೆ ನೀಡಿ ಜನರಿಂದ ಹಾಸ್ಯಕ್ಕೊಳಗಾಗಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಇಡೀ ಕ್ಷೇತ್ರದಾದ್ಯಂತ ತಾರಕಕ್ಕೇರಿದೆ. ಅದನ್ನು ಹೇಳಿಕೊಳ್ಳಲಿಕ್ಕಾದರೂ ಶಾಸಕರು ಸಿಗುತ್ತಿಲ್ಲವೆಂದು ಜನರು ಬೊಬ್ಬೆ ಹಾಕುತ್ತಿದ್ದಾರೆ. ಅಂತರ್ಜಲ ಮಟ್ಟ ಕುಸಿಯುವುದರೊಂದಿಗೆ ಎಲ್ಲಾ ಕಡೆ ಕೊಳವೆ ಬಾವಿಗಳು ಬತ್ತಿ ಹೋಗುತ್ತಿವೆ. ಅದನ್ನು ಹೇಳಿಕೊಳ್ಳಲಿಕ್ಕೆ ಅಧಿಕಾರಿಗಳೂ ಸಹ ಸಮಯಕ್ಕೆ ಸಿಗುತ್ತಿಲ್ಲ. ಅವರನ್ನು ಕೇಳುವವರೇ ಇಲ್ಲ. ಉಸ್ತುವಾರಿ ಸಚಿವರು ಮಾತ್ರ ಕುಡಿಯುವ ನೀರಿಗೆ, ಹಣದ ಕೊರತೆ ಇಲ್ಲ ಎಂದು ಹೇಳಿಕೆ ಕೊಡುತ್ತಿದ್ದರೂ ಸಮಸ್ಯೆ ಮಾತ್ರ ನೀಗಲಿಲ್ಲ.

ಹೀಗೆ ಹಲವಾರು ಸಮಸ್ಯೆಗಳು ಇಡೀ ಕ್ಷೇತ್ರವನ್ನು ಸುತ್ತಿಕೊಂಡು ನರಳಿಸುತ್ತಿವೆ. ಸಂಪಂಗಿಯವರ ಜೊತೆಯಲ್ಲಿದ್ದ ಅವರ ಅನುಯಾಯಿಗಳು ಹಲವರು ಇಂದು ಅವರಿಂದ ದೂರವಾಗಿದ್ದಾರೆ. ಪಕ್ಷದೊಳಗೆ ಸೇರಿಸಿಕೊಳ್ಳುವರೆಂದು ನಂಬಿದ್ದ ಅವರ ಹಲವಾರು ಅನುಯಾಯಿಗಳಿಗೆ ನಿರಾಶೆಯಾಯಿತು. ಪಕ್ಷಕ್ಕೆ ದ್ರೋಹ ಬಗೆದವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ವರಿಷ್ಠರು ಖಡಾಖಂಡಿತವಾಗಿ ತಿಳಿಸಿದ್ದರಿಂದ ಕುಪಿತರಾದ ಹಲವರು ಕಾಂಗ್ರೆಸ್ಸಿಗೆ ಮರಳಿದರು. ಅದರ ಜೊತೆಗೆ ಶಾಸಕರ ಅಸಮರ್ಥತೆ ಎಲ್ಲರಿಗೂ ಅರಿವಾಯಿತು.

ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ನಾಮಕರಣ ಸದಸ್ಯರನ್ನು ಒಂದೇ ಒಂದು ಸಂಘಕ್ಕೆ ತರಲಿಕ್ಕೆ ಸಾಧ್ಯವಾಗಲಿಲ್ಲವೆಂದು ಬೆಂಬಲಿಗರು ದೂರುತ್ತಾರೆ. ಎಲ್ಲಾ ಸಂಘಗಳಿಗೂ ಕಾಂಗ್ರೆಸ್‌ನವರೇ ತಂದಿದ್ದಾರೆ. ಸರ್ಕಾರದಲ್ಲಿ ಅವರ ಮಾತು ಎಷ್ಟು ನಡೆಯುತ್ತಿದೆ ಎಂದು ಅರ್ಥವಾಗುತ್ತದೆ.

ವಿಧಾನಸಭಾ ಚುನಾವಣೆ ನಂತರ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಅವರ ವರ್ಚಸ್ಸು ಕಡಿಮೆಯಾಗುತ್ತಾ ಬಂತು. ನಂತರದ ಜೂನ್‌ನಲ್ಲಿ ನಡೆದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಸಂಪೂರ್ಣ ನೆಲ ಕಚ್ಚಿದರು. ಕೇವಲ ಒಂದೇ ಒಂದು ತಾಲ್ಲೂಕು ಪಂಚಾಯ್ತಿ ಕೇವಲ 30 ಮತಗಳ ಅಂತರದಲ್ಲಿ ಗಿಟ್ಟಿಸಿಕೊಂಡರು. ಅದು ಇಡೀ ಕ್ಷೇತ್ರಕ್ಕೆ ಒಂದೇ ಸ್ಥಾನ. ಜಿಲ್ಲಾ ಪಂಚಾಯ್ತಿ ಒಂದು ಸ್ಥಾನ ಗುಡಿಬಂಡೆಯಲ್ಲಿ ಬಂತು. ಆದರೆ, ಅದು ಸಂಪಂಗಿಯವರ ವರ್ಚಸ್ಸಿನಿಂದಲ್ಲ. ಕಾಂಗ್ರೆಸ್ ಪ್ರಮುಖ ಮುಂದಾಳುವಾಗಿದ್ದ ವೈ.ವಿಜಯರಾಘವರೆಡ್ಡಿಯವರು ಆಗ ತಾನೆ ನಿಧನರಾಗಿದ್ದರು. ಅವರ ಹೆಂಡತಿಯವರಿಗೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದಿದ್ದರಿಂದ ಶಾಸಕರ ಗುಂಪಿನಲ್ಲಿ ನಿಂತಿದ್ದರು. ಅದರ ಸಹಾನುಭೂತಿಯ ಮತಗಳು ಅವರ ಪರವಾಗಿದ್ದಕ್ಕೆ ಕೇವಲ 130 ಮತಗಳ ಅಂತರದಲ್ಲಿ [illegible] ಪುಟ 9ಕ್ಕೆ

ಬಡತನ ಮತ್ತು ಮಹಿಳೆಯರ ಮೇಲಿನ ಹಿಂಸೆಯನ್ನು ವಿರೋಧಿಸಿ

ರಾಜ್‌ಭವನ ಚಲೋ

ಉದ್ಯಾನನಗರಿ, ಎಂದೇ ಪ್ರಸಿದ್ಧಿಯಾಗಿರುವ, ಸಿಲಿಕಾನ್ ಸಿಟಿಯಾಗಲು ಹೊರಟಿರುವ ಅನೇಕ ವಿರೋಧಗಳ ನಡುವೆಯೂ ವಿಶ್ವಸುಂದರಿ ಸ್ಪರ್ಧೆ ನಡೆಸಿದ, ಸಿಂಗಾಪುರ್ ಆಗಲು ಸಜ್ಜಾಗಿ ನಿಂತಿರುವ ರಾಜಧಾನಿ ಬೆಂಗಳೂರು ಎಲ್ಲಾ ಒಳಿತು ಕೆಡುಕುಗಳ ಸಮುದ್ರ. ಒಂದುಕಡೆ ಕಡು ಬಡತನ, ದಟ್ಟದಾರಿದ್ರ್ಯ, ಕೊಳೆತು ನಾರುವ ಸ್ಲಂ, ಮತ್ತೊಂದು ಕಡೆ ಜನ್ಮ ಜನ್ಮ ಕುಳಿತು ತಿಂದು ತೇಗಿದರೂ ಕರಗದ ಅಷ್ಟ ಐಶ್ವರ್ಯ. ಇವೆರಡನ್ನೂ ಸಮೀಕರಿಸಲು ಹೊರಟುನಿಂತ ಧೀರ ನಾರಿಮಣಿಯರ ಸೈನ್ಯ.

ಬಡತನವನ್ನೇ ಉಸಿರಾಗಿಸಿಕೊಂಡು ಬದುಕುವ ಕೊಟ್ಯಾಂತರ ಜನರ ಬವಣೆ ನಡುವೆ ಬಂದಿದೆ ಅಕ್ಟೋಬರ್ 17 - ವಿಶ್ವ ಬಡತನ ವಿರೋಧಿ ದಿನ. ವಿಶ್ವ ಸಂಸ್ಥೆಯೇ ಅಕ್ಟೋಬರ್ 17 ನ್ನು ವಿಶ್ವ ಬಡತನ ವಿರೋಧಿ ದಿನವನ್ನಾಗಿ ಘೋಷಿಸಿದೆ.

ವಿಶ್ವಾದ್ಯಂತ ಜಾಗತೀಕರಣ, ಖಾಸಗೀಕರಣ, ಉದಾರೀಕರಣಕ್ಕೆ ಜನ ಬಲಿಯಾಗುತ್ತಿದ್ದಾರೆ. ಆರ್ಥಿಕ ಸುಧಾರಣಾ ಪ್ರಕ್ರಿಯೆಯ ಫಲವಾಗಿ ಹೆಚ್ಚುತ್ತಿರುವ ಬಡತನ ಮತ್ತು ಹಿಂಸೆಗೆ ಮಹಿಳೆಯರು ಬಲಿಯಾಗುತ್ತಿದ್ದಾರೆ. ಸಾಮ್ರಾಜ್ಯಶಾಹಿ ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿ ಶೀಲ ರಾಷ್ಟ್ರಗಳ ಮೇಲೆ ಹೇರುತ್ತಿರುವ ಆರ್ಥಿಕ ಒತ್ತಡದ ಪರಿಣಾಮವಾಗಿ ದೇಶಗಳು ದಿವಾಳಿಯಾಗುವ ಸ್ಥಿತಿಗೆ ಬಂದು ನಿಂತಿದೆ. ಇದನ್ನು ಒಕ್ಕೊರಲಿನಿಂದ ಪ್ರತಿಭಟಿಸಲು ವಿಶ್ವ ಮಹಿಳಾ ಚಳುವಳಿ ಕರೆ ನೀಡಿತ್ತು. ಇದರ ಅಂಗವಾಗಿ



ಮಾರ್ಚ್ 8, 2000 ದಿಂದ ಪ್ರಾರಂಭಿಸಿ ಅಕ್ಟೋಬರ್ 17, 2000 ರವರೆಗೆ ವಿಶ್ವದಾದ್ಯಂತ ಕಾರ್ಯಕ್ರಮಗಳು ಜರುಗಿದೆ. ಈ ಕರೆಯ ಮೇರೆಗೆ ಕರ್ನಾಟಕದ ರಾಜಧಾನಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಸಂಯುಕ್ತ ಮಹಿಳಾ ವೇದಿಕೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ವಿದ್ಯಾರ್ಥಿನಿಯರ ಉಪಸಮಿತಿ, ಸ್ತ್ರೀಜಾಗೃತಿ ಮುಂತಾದ ಮಹಿಳಾ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಒಂದು ಬೃಹತ್ ರ‍್ಯಾಲಿಯನ್ನು ಏರ್ಪಡಿಸಲಾಗಿತ್ತು. ಕರ್ನಾಟಕದ 15 ಜಿಲ್ಲೆಗಳ 34 ತಾಲೂಕುಗಳಿಂದ 2 ಸಾವಿರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು.

ವರ್ಣರಂಜಿತ ರ‍್ಯಾಲಿ ಚಿಕ್ಕಲಾಲ್‌ಬಾಗ್‌ನಿಂದ 'ಬಡತನ ಹಿಂಸೆ ತೊಲಗಲಿ, ಬದುಕುವ ಹಕ್ಕು ಸಿಗಲೇಬೇಕು'' "ಏರಿರುವ ಬೆಲೆಗಳನ್ನು ಇಳಿಸಲೇಬೇಕು" "ವಿಶ್ವ ಮಹಿಳೆಯರೇ ಒಂದಾಗಿ, ಹೋರಾಟಕ್ಕೆ ಮುಂದಾಗಿ" "ವಿಶ್ವ ಜಾಗತಿಕ ನಡೆ ಯಶಸ್ವಿಯಾಗಲಿ" ಎಂಬ ಧೀರೋದ್ಧಾತ ಘೋಷಣೆಯೊಂದಿಗೆ ರಾಜಭವನದ ಬಳಿ ಹೊರಟಿತು. ಆದರೆ ರಾಜಭವನದಲ್ಲಿರುವ ಮಹಿಳೆ ರಮಾದೇವಿಯವರನ್ನು ನೋಡಲು ಸಾವಿರಾರು ಸಂಖ್ಯೆಯಲ್ಲಿ ಮಳೆ, ಬಿಸಿಲು ಏನನ್ನೂ ಲಕ್ಷಿಸದೆ ಊಟ, ನೀರು ಇಲ್ಲದ ಮಹಿಳೆಯರಿಗೆ ಅವಕಾಶ ಕೊಡದ ಪೋಲೀಸರು ರಾಜಭವನಕ್ಕೆ ಹೋಗುವ ಮಾರ್ಗದಲ್ಲೇ ತಡೆದರು. ಮಹಿಳೆಯರು ದಾರಿಯಲ್ಲೇ ಕುಳಿತರು. ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದ ಅ.ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ವಿಮಲಾ ಕೆ.ಎಸ್. ಸ್ವಾಗತ ಕೋರಿದರು. ಪ್ರಧಾನ ಕಾರ್ಯದರ್ಶಿ ಕೆ.ನೀಲಾ ಮಾತನಾಡಿ, ಬಡತನ, ಹಿಂಸೆಯನ್ನು ವಿರುದ್ಧ ನಮ್ಮ ವಿರೋಧವಿದೆ. ಇಂದು ಬಹುತೇಕ ಹಳ್ಳಿಗಳಲ್ಲಿ ಶೌಚಾಲಯವಿಲ್ಲ, ಕುಡಿಯುವ ನೀರಿಲ್ಲ. ಸಾಮ್ರಾಜ್ಯಶಾಹಿ ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಉದಾರೀಕರಣ, ಜಾಗತೀಕರಣದ ಹೆಸರಿನಲ್ಲಿ ಹೆಚ್ಚುತ್ತಿರುವ ಆರ್ಥಿಕ ಒತ್ತಡ ನಿರುದ್ಯೋಗವನ್ನು ಹೆಚ್ಚಿಸುತ್ತಿದೆ. ಮಹಿಳೆಯರ ಮೇಲಿನ ಹಿಂಸೆಯನ್ನು ಹೆಚ್ಚಿಸುತ್ತಿದೆ. ಕರ್ನಾಟಕದ ಜನತೆ ಇತರರಿಗೆ ಓಟು ಕೊಡದೆ ಕಾಂಗ್ರೆಸ್‌ಗೆ ಓಟು ನೀಡಿದುದು ಅವರು ಇತರರಿಗಿಂತ ಉತ್ತಮ ಅಂತಲ್ಲ, ಜನರ ಆಶೋತ್ತರಗಳನ್ನು ಈಡೇರಿಸಬಹುದು ಎಂದು ಬಯಸಿದ್ದರು. ಆದರೆ ಬಂದ ಕೆಲವೇ ದಿನಗಳಲ್ಲಿ ಎಲ್ಲಾ ವಸ್ತುಗಳನ್ನು ಏರಿಸಿದರು. ಜನರ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ಸರ್ಕಾರ ಸೋತಿದೆ. ಸರ್ಕಾರ ಇದರ ಬಗ್ಗೆ ಗಮನ ಹರಿಸದೆ ಹೋದರೆ ನಾವು ಇನ್ನು ಮುಂದೆ ರಾಜಧಾನಿಗೆ ಬರುವುದಿಲ್ಲ, ಹಳ್ಳಿ ಹಳ್ಳಿಗಳಲ್ಲಿ ಜನತಾ ಚಳುವಳಿ ಕಟ್ಟುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಮಹಿಳೆಯರ ಮೇಲಿನ ದೌರ್ಜನ್ಯ, ಹಿಂಸೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಮಹಿಳೆಯರು ಬಲಿಯಾಗುತ್ತಿದ್ದಾರೆ. ಮಹಿಳೆಯರ ಮೇಲಿನ ಹಿಂಸೆ ಕಡಿಮೆಯಾಗಬೇಕು ಎಂದು ಸಂಯುಕ್ತ ಮಹಿಳಾ ವೇದಿಕೆಯ ಕೃಷ್ಣಕುಮಾರಿ ಹೇಳಿದರು.

ಜೀವವಿಮಾ ನೌಕರರ ಸಂಘದ ರುಕ್ಮಿಣಿ ಮಾತನಾಡಿ ಜೀವಕ್ಕೆ ರಕ್ಷಣೆಕೊಡುವ ಜೀವ ವಿಮೆಯನ್ನು ಖಾಸಗೀಕರಣ ಮಾಡಲು ಸರ್ಕಾರ ಹೊರಟಿದೆ. ಇದನ್ನು ಕಾರ್ಮಿಕರು ವಿರೋಧಿಸುತ್ತಿದ್ದಾರೆ. ಖಾಸಗೀಕರಣದಿಂದ ನಿರುದ್ಯೋಗ, ಬಡತನ ಹೆಚ್ಚುತ್ತಿದೆ ಎಂದರು.

ವಿದ್ಯಾರ್ಥಿನಿಯರ ಉಪಸಮಿತಿ ನಾಯಕಿ ಯಮುನಾ ಗಾಂವ್ಕರ್ ಮಾತನಾಡಿ ಕೋಟಿ ಉದ್ಯೋಗವನ್ನು ಕೊಡುತ್ತೇವೆ, ಮಹಿಳಾ ಮೀಸಲಾತಿಯನ್ನು ಜಾರಿಗೆ ತರುತ್ತೇವೆ ಎಂದು ಅಧಿಕಾರಕ್ಕೆ ಬರುವ ಮೊದಲೇ ಆಶ್ವಾಸನೆ ಕೊಟ್ಟಿದ್ದ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಯಾವುದೇ ಆಶ್ವಾಸನೆಗಳನ್ನು ಈಡೇರಿಸಲಿಲ್ಲ. ಬದಲಿಗೆ ಶಿಕ್ಷಣದಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಂಚಿತರಾಗುತ್ತಿದ್ದಾರೆ ಎಂದರು.

ಜೆ.ಎಂ.ಎಸ್. ನ ಪ್ರಭಾವತಿ ಮಾತನಾಡಿ ಅ.16 ರಂದು 'ವಿಶ್ವ ಆರೋಗ್ಯ ದಿನ', ಅ. 17 ರಂದು ವಿಶ್ವ ಬಡತನ ವಿರೋಧಿ ದಿನ. ವರ್ಷದಲ್ಲಿ ಎರಡು ದಿನಗಳಲ್ಲಿ ಒಂದು ಆರೋಗ್ಯ ದಿನ, ಇನ್ನೊಂದು ಬಡತನ ದಿನ. ಉಳಿದ 363 ದಿನಗಳು ಉಪವಾಸದ ದಿನಗಳಾಗಿವೆ. ಸರ್ಕಾರದ ಹೊಸ ಆರ್ಥಿಕ ನೀತಿಗಳಿಂದ ಜನ ತತ್ತರಿಸಿದ್ದಾರೆ. ಒಂದು ಕಡೆ ಬಡತನ, ಮಹಿಳೆಯರ ಮೇಲಿನ ಹಿಂಸೆ ಹೆಚ್ಚಾಗುತ್ತಿದೆ. ಇನ್ನೊಂದು ಕಡೆ ಇಂತಹ ದಿನಾಚರಣೆಗಳ ಬ್ಯಾನರ್ ಎಲ್ಲೆಲ್ಲೂ ರಾರಾಜಿಸುತ್ತಿದೆ. ಸರ್ಕಾರಗಳಿಗೆ ನಿಜವಾಗಲೂ ಬಡತನವನ್ನು ಹೋಗಲಾಡಿಸಬೇಕು ಎಂಬ ಆಸೆ ಇದ್ದಿದ್ದರೆ ಬೀಡಿ ಕಟ್ಟುವ, ಅಗರಬತ್ತಿ ಹೊಸೆಯುವ, ಕೃಷಿಕೂಲಿಕಾರರಿಗೆ ಕನಿಷ್ಟ ಕೂಲಿ ಕೊಡಲಿ ನಂತರ ವಿಶ್ವ ಬಡತನದ ಬ್ಯಾನರ್ ಎಲ್ಲಾ ಕಡೆಗೂ ಕಟ್ಟಲಿ. ಪಡಿತರ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿದ್ದಾರೆ. ಕೇರಳದಲ್ಲಿ 14 ಜೀವನಾವಶ್ಯಕ ವಸ್ತುಗಳನ್ನು ಪಡಿತರ ವ್ಯವಸ್ಥೆಗೆ ಅಲ್ಲಿನ ಮುಖ್ಯಮಂತ್ರಿ ಈ.ಕೆ.ನಾಯನಾರ್ ಅವರಿಗೆ ಕೊಡಲು ಸಾಧ್ಯವಾದರೆ ಎಸ್.ಎಂ.ಕೃಷ್ಣ ಅವರಿಗೆ ಯಾಕೆ ಸಾಧ್ಯ ಆಗುವುದಿಲ್ಲ ಎಂದು ಪ್ರಶ್ನಿಸಿದರು.

ಡಿವೈಎಫ್‌ಐ ನ ಎಸ್.ವೈ.ಗುರುಶಾಂತ್ ಮಾತನಾಡಿ ಶ್ರೀಮಂತ ದೇಶವಾದ ಅಮೆರಿಕಾದ ಮಹಿಳೆಯರು ಬಹಳ ಆರಾಮವಾಗಿದ್ದಾರೆ ಎಂದು ಭಾವಿಸಿಕೊಂಡಿದ್ದೇವೆ ನಾವು. ಆದರೆ ಯಾವುದೇ ಮಹಿಳೆ ಸಂತೋಷವಾಗಿಲ್ಲ. ಅವರ ಅಂತರಂಗದ ನೋವನ್ನು ನಾವು ಅರಿತಾಗ ನಮಗೆ ಅರ್ಥವಾಗುತ್ತದೆ. ಮಹಿಳೆ ಹುಟ್ಟಿನಿಂದ ಸಾಯುವವರೆಗೆ ಆಶ್ರಯದಲ್ಲಿದ್ದು, ಜೀವನ ಸಾಗಿಸುತ್ತಾರೆ. ಇಂದು ವಿಜ್ಞಾನ ಎಷ್ಟೊಂದು ಬೆಳೆದಿದೆ ಆದರೆ ಮಹಿಳೆಯರ ಸ್ಥಿತಿಗತಿಗಳಲ್ಲಿ ಮಾತ್ರ ಬದಲಾವಣೆ ಎಂಬುದು ಇಲ್ಲ. ಲಕ್ಷಗಟ್ಟಲೆ ಗರ್ಭಿಣಿ ಸ್ತ್ರೀಯರು ಸರಿಯಾದ ಪೌಷ್ಟಿಕ ಆಹಾರವಿಲ್ಲದೆ ಇಂದಿಗೂ ಸಾಯುತ್ತಿದ್ದಾರೆ. ನಮ್ಮ ನ್ಯಾಯಾಲಯಗಳು, ನ್ಯಾಯಾಧೀಶರು ಬಡವರ ಪರವಾಗಿಲ್ಲ ಎಂಬುದಕ್ಕೆ ರಾಜಸ್ತಾನದ ದಲಿತ ಮಹಿಳೆಯ ಮೇಲೆ ಆದ ಅತ್ಯಾಚಾರವೇ ಜ್ವಲಂತ ನಿದರ್ಶನ. ಈ ಎಲ್ಲದರ ವಿರುದ್ಧದ ಹೋರಾಟದಲ್ಲಿ ನಿಮ್ಮ ಜೊತೆಯಲ್ಲಿ ಧ್ವನಿಯಾಗಿ ಡಿವೈಎಫ್‌ಐ ನಿಲ್ಲುತ್ತದೆ ಎಂದರು.

ಸಿಐಟಿಯುವಿನ ರಾಜ್ಯ ಮುಖಂಡರಾದ ಕಾಂ. ಎಸ್.ಸೂರ್ಯನಾರಾಯಣ ರಾವ್ ಮಾತನಾಡಿ 100 ಕ್ಕೆ 90 ಜನ ದುಡಿಯುವ ವರ್ಗದ ಜನ, ಇವತ್ತಿನ ಈ ಬಡತನದ ವಿರುದ್ಧ ಹೋರಾಟ ಎಂದರೆ ದುಡಿಯುವ ವರ್ಗದ ಜನರ ಹೋರಾಟ ಎಂದರ್ಥ. ಬೆಳಗಿನಿಂದ ಸಂಜೇ ತನಕ ಬೆವರು ಸುರಿಸಿ ದುಡಿದು ಮನೆಗೆ ಹೋದ್ರೆ ತಿನ್ನಲು ಅನ್ನ ಸಿಗೋಲ್ಲ. ಇವರಿಗೆ ವಿದ್ಯೆ ಇಲ್ಲ. ಜಾತಿ ಇಲ್ಲ, ಅಂತ ಹೇಳಿ ಜಾತಿ ಹೆಸರಿನಲ್ಲಿ ಓಟುಪಡೆದುಕೊಂಡು ಅಧಿಕಾರ ಏರಿ ಜಾತಿ ರಾಜಕಾರಣ ಮಾಡಿಕೊಂಡೇ ಬದುಕುತ್ತಾರೆ. ದಲಿತರಿಗೆ ಭೂಮಿ ಅಂತ ಹೇಳ್ತಾರೆ ಆದರೆ ಅವರ ಹೆಸರಿನಲ್ಲಿ ತಾವೇ ನುಂಗಿ ಹಾಕಿರುತ್ತಾರೆ.

ಇಂದು ನೀವು ಪ್ರತಿಜ್ಞೆ ಮಾಡಬೇಕಾಗಿದೆ. ದುಡಿಯುವ ವರ್ಗವೆಲ್ಲಾ ಒಂದು, ದುಡಿಯುವ ವರ್ಗ ಒಂದಾಗಿ ಹೋರಾಟ ನಡೆಸಿ ಹೋರಾಟಕ್ಕೆ ಸಿಐಟಿಯು ಕಂಕಣಬದ್ಧವಾಗಿ ನಿಮ್ಮೊಂದಿಗೆ ನಿಲ್ಲುತ್ತದೆ ಎಂದು ಹೇಳಿದರು.

ರಾಜಭವನಕ್ಕೆ ಐದು ಜನರ ನಿಯೋಗ ಹೋಗಿ ರಾಜ್ಯಪಾಲರು ದೆಹಲಿಗೆ ಹೋಗಿದ್ದುದರಿಂದ ಅವರ ಆಪ್ತ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಲಾಯಿತು.

ವರದಿ: **ಕೆ.ಎಸ್.ಶಾರದ**

ಪುಟ 8 ರಿಂದ

ನಮ್ಮ ಶಾಸಕರೆಲ್ಲಿ?

ಸಿಪಿಐ(ಎಂ)ನ ವಿರುದ್ಧ ಗೆಲುವು ಪಡೆದರು. ಇಲ್ಲದಿದ್ದಲ್ಲಿ, ಅದು ಕೂಡಾ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಏನೇ ಆಗಲಿ ಅವರ ಅಸಮರ್ಥತೆ ಜಗಜ್ಜಾಹೀರಾಗಿದೆ. ಕ್ಷೇತ್ರದಲ್ಲಿ ಕೂಡಾ ಅಧಿಕಾರಿಗಳು ಅವರ ಮಾತನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಎಲ್ಲಾ ಕಛೇರಿಗಳಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟುತ್ತಿದೆ. ಬಹುಶಃ ಅದಕ್ಕೆ ಅವರದೇ ಕುಮ್ಮಕ್ಕು ಇರಬಹುದು. ಕಾಮಗಾರಿಯೇ ಮಾಡದೇ ಹಣ ಡ್ರಾ ಮಾಡಿಕೊಳ್ಳುವುದು, ಅತ್ಯಲ್ಪ ಕೆಲಸ ಮಾಡಿ ಅಂದಾಜು ಮೊತ್ತದ ಎಲ್ಲಾ ಹಣವನ್ನು ಡ್ರಾ ಮಾಡಿಕೊಂಡಿರುವುದು ಹಲವಾರು ಉದಾಹರಣೆಗಳಿವೆ.

ಇರಲಿ, ಶಾಸಕರ ಒಂದು ವರ್ಷದ ಸಾಧನೆ ಏನು ಎಂದು ಬರೆಯಲಿಲ್ಲವಲ್ಲಾ? ಹೌದು ಏನೆಂದು ಬರೆಯುವುದು? ಪ್ರತ್ಯೇಕವಾದ ಸಾಧನೆ ಏನು ಎಂದು ಬರೆಯುವುದಕ್ಕೆ ಆಗುವುದಿಲ್ಲ. ಏಪ್ರಿಲ್, ಮೇ, ಜೂನ್‌ನಲ್ಲಿ ಕ್ಷಾಮದಿಂದ ತತ್ತರಿಸಿದ ಜನ ಕೆಲಸವಿಲ್ಲದೆ ವಲಸೆ ಪ್ರಾರಂಭವಾಯಿತು. ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರ ಗೋಕುಂಟೆಗಳನ್ನು ತೆಗೆಯಲು ಪ್ರಾರಂಭಿಸಿದರು. ಆಗ ಪ್ರತಿ ಕೆರೆಯಲ್ಲಿ ಗೋಕುಂಟೆಗಳನ್ನು ತೆಗೆಯಲು ಸರ್ಕಾರ ಆದೇಶಿಸಿ ಆ ಪಕ್ಷದ ಹಳ್ಳಿಗಳ ಜನರಿಗೆ ಕೆಲಸ ಒದಗಿಸಿ ಗೋಕುಂಟೆಗಳಲ್ಲಿ ನೀರು ಬಂದರೆ ಜಾನುವಾರಗಳಿಗೆ ಪ್ರಯೋಜನ ಆಗುತ್ತದೆಂದು ಸರ್ಕಾರದ ಯೋಚನೆ. ಆದರೆ, ಬಾಗೇಪಲ್ಲಿ ಕ್ಷೇತ್ರದಲ್ಲಿ ಸಂಪಂಗಿ ತನ್ನ ಅನುಯಾಯಿಗಳಿಗೆ ಗುತ್ತಿಗೆ ಕೊಡಿಸಿದರು. ಅವರ ಅನುಯಾಯಿಗಳು ಕೆರೆಯಲ್ಲಿ ಈಗಾಗಲೇ ಎಲ್ಲಿ ಹಳ್ಳವಿರುತ್ತೋ ಅದನ್ನೇ ಆಯ್ಕೆ ಮಾಡಿಕೊಂಡರು. ಆ ಹಳ್ಳವನ್ನು ಗೋಕುಂಟೆ ಆಕಾರದಲ್ಲಿ ಸಿದ್ದಪಡಿಸಿ ಅದನ್ನೇ ಅಳತೆ ಮಾಡಿಸಿ 35,000 ರೂ. ಬಿಲ್ಲುಗಳನ್ನು ಲಪಟಾಯಿಸಿದರು. ಅದಕ್ಕೆಲ್ಲಾ 5-6 ಸಾವಿರ ರೂ.ಗಳನ್ನು ಖರ್ಚು ಮಾಡಿ ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲದೇ ಮಾಡಿ ತಮ್ಮ ಜೇಬುಗಳನ್ನು ತುಂಬಿಸಿಕೊಂಡರು. ಇದಕ್ಕಿಂತ ಹಗಲು ದರೋಡೆ ಯಾವುದಿದೆ ಹೇಳಿ?

ಏನೇ ಆಗಲಿ ಜನರ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲದ ಶಾಸಕರನ್ನು ಈಗ ಬಾಗೇಪಲ್ಲಿ ಕಂಡಿದೆ. ಅವರಿಂದ ಕ್ಷೇತ್ರಕ್ಕೆ ಮುಕ್ತಿ ಬೇಕಾಗಿದೆ ಎಂದು ಜನರ ಅಭಿಪ್ರಾಯವಾಗಿರುವುದು ಕ್ಷೇತ್ರದಾದ್ಯಂತ ಕಂಡುಬರುತ್ತಿದೆ. ಅವರಂತೆಯೇ ಸರ್ಕಾರ ಕೂಡಾ ನಿಷ್ಕ್ರಿಯವಾಗಿ ಎಲ್ಲಾ ರಂಗಗಳಲ್ಲಿ ವಿಫಲವಾಗಿರುವುದು ಜನರ ಆಕ್ರೋಶ ಮುಗಿಲು ಮುಟ್ಟುವ ಕಾಲವಂತೂ ದೂರವಿಲ್ಲವೆಂದು ಹೇಳಬಹುದು.

ಸತ್ಯಂ ಸಮಿತಿ ವರದಿ.......... ಮರಣ ಶಾಸನ

ಪುಟ 6 ರಿಂದ

ಸತ್ಯಂ ಸಮಿತಿ ವರದಿಯ ವಿರುದ್ಧ ಹೋರಾಡಲು ನಿರ್ಧಾರ:

ಅಖಿಲ ಭಾರತ ಜವಳಿ ಕಾರ್ಮಿಕರ ಸಮನ್ವಯ ಸಮಿತಿಯ ಸಂಚಾಲಕರೂ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಪಿ.ಕೆ.ಗಂಗೂಲಿ ಅವರು ಸಮಾವೇಶದ ಪ್ರತಿನಿಧಿಗಳ ಚರ್ಚೆಗಾಗಿ ಕರಡು ವರದಿಯೊಂದನ್ನು ಮಂಡಿಸಿದರು. ಕೈಮಗ್ಗ ಕ್ಷೇತ್ರವು ಎದುರಿಸುತ್ತಾ ಬಂದಿರುವ ಬಿಕ್ಕಟ್ಟು ಈಗ ಸರ್ಕಾರದ ಜಾಗತೀಕರಣದ ನೀತಿಗಳ ಫಲವಾಗಿ ಹೇಗೆ ಅದು ಕೈಮಗ್ಗ ಕ್ಷೇತ್ರದ ವಿನಾಶಕ್ಕೆ ಕಾರಣವಾಗುತ್ತಿದೆ ಎಂಬುದನ್ನು ವಿವರವಾಗಿ ಈ ವರದಿಯಲ್ಲಿ ಚಿತ್ರಿಸಲಾಗಿದೆ.

1985 ರ ಜವಳಿ ನೀತಿಯು ಅಪ್ರಸ್ತುತವಾಗಿದೆ ಎಂಬ ನೆಪದಲ್ಲಿ ಕೇಂದ್ರ ಜವಳಿ ಮಂತ್ರಿ ಕಾಶಿರಾಮ ರಾಣಾ 1998 ರಲ್ಲಿ ಸಂಸತ್ತಿನಲ್ಲಿ ಹೇಳಿಕೆಯೊಂದನ್ನು ನೀಡುತ್ತಾ ಹೊಸ ಜವಳಿ ನೀತಿಯೊಂದನ್ನು ರೂಪಿಸಲಾಗುವುದು ಎಂದು ಪ್ರಕಟಿಸಿದ್ದರು. ಆನಂತರ ಸರ್ಕಾರವು ಬಹಳ ಅವಸರದಲ್ಲಿ ಎಸ್.ಆರ್.ಸತ್ಯಂ ಅವರ ಅಧ್ಯಕ್ಷತೆಯಲ್ಲಿ 12 ಜನ ಸದಸ್ಯರುಳ್ಳ 'ತಜ್ಞರ' ಸಮಿತಿಯೊಂದನ್ನು ರಚಿಸಿತು. ಯಾರಿವರು ಸತ್ಯಂ? ಇವರು ಜವಳಿ ಮಂತ್ರಾಲಯದ ಮಾಜಿ ಕಾರ್ಯದರ್ಶಿಗಳು; ರಾಷ್ಟ್ರೀಯ ಜವಳಿ ನಿಗಮ(ಎನ್‌ಟಿಸಿ)ದ ಮಿಲ್ಲುಗಳನ್ನು ಪುನಃಶ್ಚೇತನಗೊಳಿಸುವ ಸರ್ವಾನುಮತದ ಒಪ್ಪಂದವನ್ನು ತಡೆದು ವಿಫಲಗೊಳಿಸಿದ ಖ್ಯಾತಿಯುಳ್ಳವರು! ತಜ್ಞರ ಸಮಿತಿಯಲ್ಲಿ ಖಾಸಗಿ ಮಿಲ್ ಮಾಲೀಕರು, ಐಡಿಬಿಐ ಅಧ್ಯಕ್ಷರು, ಯೋಜನಾ ಆಯೋಗದ ಒಬ್ಬ ಸದಸ್ಯರು, ಬಂಡವಾಳಶಾಹಿ ಆರ್ಥಿಕ ತಜ್ಞರು ಮತ್ತು ಉದಾರೀಕರಣ ನೀತಿಯ ಪ್ರತಿಪಾದಕರು ಮಾತ್ರ ಸದಸ್ಯರಾಗಿದ್ದರು. ಕಾರ್ಮಿಕರ ಮತ್ತು ನೇಕಾರರ ಒಬ್ಬ ಪ್ರತಿನಿಧಿಯೂ ಸಮಿತಿಯಲ್ಲಿ ಇರಲಿಲ್ಲ. ಹೊಸ ಜವಳಿ ನೀತಿಯನ್ನು ರೂಪಿಸುವಲ್ಲಿ ಸರ್ಕಾರಕ್ಕೆ ಶಿಫಾರಸುಗಳನ್ನು ನೀಡುವುದು ಸಮಿತಿಗೆ ವಹಿಸಿದ ಜವಾಬ್ದಾರಿಯಾಗಿತ್ತು.

ಸತ್ಯಂ ಸಮಿತಿಯು ಆಗಸ್ಟ್ 3, 1999 ರಂದೇ ಜವಳಿ ಮಂತ್ರಾಲಯಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಆದರೆ ಸರ್ಕಾರ ಅದನ್ನು ಇಲ್ಲಿಯವರೆಗೆ ಮುಚ್ಚಿಟ್ಟಿದೆ. ಜವಳಿ ಮಂತ್ರಾಲಯವು ಇನ್ನೂ ವರದಿಯ ಬಗ್ಗೆ ತನ್ನ ಅಭಿಪ್ರಾಯಗಳನ್ನು ಅಂತಿಮಗೊಳಿಸಿಲ್ಲ ಎಂದು ಜವಳಿ ಮಂತ್ರಿ ರಾಣಾ ಅವರು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ಮಾಧ್ಯಮಗಳಲ್ಲಿ ಬರಲಿರುವ ಹೊಸ ಜವಳಿ ನೀತಿಯ ಬಗ್ಗೆ ಟಿಪ್ಪಣಿಗಳು ಪ್ರಕಟವಾಗಿವೆ. ಸ್ವತಃ ಜವಳಿ ಮಂತ್ರಿಗಳು ಅನೇಕ ಪತ್ರಿಕಾಗೋಷ್ಠಿಗಳಲ್ಲಿ ಹೊಸ ನೀತಿಯ ಬಗ್ಗೆ ಮಾತನಾಡಿದ್ದಾರೆ. ಲಭ್ಯವಾಗಿರುವ ಮಾಹಿತಿಗಳ ಆಧಾರದಲ್ಲಿ ಹೇಳುವುದಾದರೆ ಸತ್ಯಂ ಸಮಿತಿ ಶಿಫಾರಸುಗಳ ಆಧಾರದಲ್ಲಿ ಬರಲಿರುವ ಹೊಸ ಜವಳಿ ನೀತಿಯು ಜವಳಿ ಕಾರ್ಮಿಕರ ಮತ್ತು ನೇಕಾರರ ಪಾಲಿಗೆ ಇನ್ನೂ ಹೆಚ್ಚು ಆಕ್ರಮಣಕಾರಿಯಾಗಲಿದೆ.

ಬಿಜೆಪಿ ನೇತೃತ್ವದ ಕೇಂದ್ರಸರ್ಕಾರವು ಸತ್ಯಂ ಸಮಿತಿಯ ಶಿಫಾರಸುಗಳನ್ನೇನಾದರೂ ಜಾರಿಗೆ ತಂದರೆ ಕೈಮಗ್ಗ ಕ್ಷೇತ್ರಕ್ಕೆ ಅತಿ ಹೆಚ್ಚು ಧಕ್ಕೆಯಾಗಲಿದೆ. ಸತ್ಯಂ ಸಮಿತಿ ವರದಿಯು ಕೈಮಗ್ಗ ಕ್ಷೇತ್ರಕ್ಕೆ ನೀಡಲಾಗುತ್ತಿದ್ದ ಎಲ್ಲಾ ಪ್ರೋತ್ಸಾಹ ಹಾಗೂರಕ್ಷಣಾ ಯೋಜನೆಗಳನ್ನು ಒಂದೇ ಹೊಡೆತಕ್ಕೆ ಹಿಂತೆಗೆದುಕೊಂಡಿದೆ. ಉದಾರೀಕರಣದ ಪ್ರಕ್ರಿಯೆ ಆರಂಭವಾದ 1991 ರಿಂದಲೇ ಕೈಮಗ್ಗ ಕ್ಷೇತ್ರವನ್ನು ಜಾಗತೀಕರಣಕ್ಕೆ ತೆರೆಯುವ ಪ್ರಯತ್ನ ಆರಂಭವಾಗಿತ್ತು. 1996 ರಲ್ಲಿ ಕೈಮಗ್ಗ ಕ್ಷೇತ್ರದ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ಸಲಹೆ ನೀಡಲು ಮೀರಾಸೇತ್ ಸಮಿತಿಯನ್ನು ನೇಮಿಸಲಾಗಿತ್ತು. ಮೀರಾಸೇತ್ ಸಮಿತಿಯು ಕೈಮಗ್ಗ ಕ್ಷೇತ್ರಕ್ಕೆ ಹಿಂದಿನಿಂದ ಕೊಡುತ್ತಾ ಬಂದಿದ್ದ ಎಲ್ಲಾ ಪ್ರೋತ್ಸಾಹ ಮತ್ತು ರಕ್ಷಣೆಯ ಯೋಜನೆಗಳನ್ನು ಮುಂದುವರೆಸಬೇಕೆಂದು ಶಿಫಾರಸು ಮಾಡಿತು. ಸರ್ಕಾರ ಅಬಿದ್ ಹುಸೇನ್ ಸಮಿತಿ ಎಂಬ ಇನ್ನೊಂದು ಸಮಿತಿಯನ್ನು ನೇಮಿಸಿತು. ಅಬಿದ್ ಹುಸೇನ್ ಸಮಿತಿಯು ಕೈಮಗ್ಗಕ್ಕೆ 22 ಬಗೆಯ ಬಟ್ಟೆಗಳನ್ನು ಮೀಸಲಿಟ್ಟು 1985 ರ ಕಾಯ್ದೆಯನ್ನು ರದ್ದುಗೊಳಿಸಬೇಕೆಂದು ಶಿಫಾರಸು ನೀಡಿತು. ಆದರೆ ಸರ್ವೋಚ್ಚ ನ್ಯಾಯಾಲಯವು 1985 ರ ಕೈಮಗ್ಗ ಮೀಸಲಾತಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತು. ಈಗ ಸತ್ಯಂ ಸಮಿತಿ ವರದಿಯು ಅಬಿದ್ ಹುಸೇನ್ ಸಮಿತಿಯ ಶಿಫಾರಸುಗಳಿಗಿಂತ ಹೆಚ್ಚು ಪ್ರತಿಗಾಮಿ ದಾರಿಯನ್ನು ತುಳಿದಿದೆ.

22 ಬಗೆಯ ಬಟ್ಟೆಗಳನ್ನು ಕೈಮಗ್ಗಕ್ಕೆ ಮೀಸಲಿಡುವ ಮೂಲಕ ಕೈಮಗ್ಗ ಕ್ಷೇತ್ರಕ್ಕೆ ಕೊಡಲಾಗುತ್ತಿರುವ ಬೆಂಬಲ 'ಕೃತಕ'ವಾದುದು ಎಂದೂ ಉದಾರೀಕರಣದ ಈ ಯುಗದಲ್ಲಿ ಅಂತಹ ಕೃತಕ ಬೆಂಬಲ ಅರ್ಥಹೀನವಾಗಿದೆ ಎಂದು ಸತ್ಯಂ ಸಮಿತಿಯ ಅಭಿಪ್ರಾಯವಾಗಿದೆ. ಕೈಮಗ್ಗದ ನೇಕಾರರು ತಮ್ಮ ಸ್ವಂತ ಕಾಲುಗಳ ಮೇಲೆ ನಿಲ್ಲಬೇಕು. ಸರ್ಕಾರದ ಯಾವುದೇ ನೆರವನ್ನು ಅವಲಂಬಿಸಬಾರದು. ಹೆಚ್ಚೆಂದರೆ ಸರ್ಕಾರ ತನ್ನ ರಕ್ಷಣಾ, ರೈಲ್ವೆ, ಪೋಲೀಸ್, ಆಸ್ಪತ್ರೆ ಮೊದಲಾದ ಇಲಾಖೆಗಳಿಗೆ ಬೇಕಾಗುವ ಬಟ್ಟೆಯನ್ನು ಕೈಮಗ್ಗ ಕ್ಷೇತ್ರದಿಂದ ಖರೀದಿ ಮಾಡಿ ಪ್ರೋತ್ಸಾಹಿಸಬಹುದು ಎಂದು ಸಮಿತಿಯ ಅಭಿಪ್ರಾಯವಾಗಿದೆ. ಆದರೆ ಸರ್ಕಾರಿ ಆಸ್ಪತ್ರೆಗಳು ಬ್ಯಾಂಡೇಜ್ ಬಟ್ಟೆಯನ್ನು ಬಿಟ್ಟು ಉಳಿದ ಯಾವ ಸರ್ಕಾರಿ ಇಲಾಖೆಯೂ ಕೈಮಗ್ಗದ ಬಟ್ಟೆಯನ್ನು ಖರೀದಿ ಮಾಡುವುದಿಲ್ಲ. ಇಲಾಖೆಗಳ ಅವಶ್ಯಕತೆಗಳಿಗಾಗಿ ಅವರೆಲ್ಲರೂ ವಿದ್ಯುತ್ ಮಗ್ಗಗಳ ಅಥವಾ ಮಿಲ್ ಬಟ್ಟೆಯನ್ನೇ ಬಯಸುತ್ತಾರೆ. (ಕರ್ನಾಟಕದಲ್ಲಿ ಶಾಲಾ ಮಕ್ಕಳಿಗೆ ನೀಡುವ ಸಮವಸ್ತ್ರದ ಬಟ್ಟೆಯನ್ನು ಕೈಮಗ್ಗ ಕ್ಷೇತ್ರದಿಂದ ಪಡೆಯುವ ಬದಲು ವಿದ್ಯುತ್ ಮಗ್ಗಗಳಿಂದ ಪಡೆಯಲು ರಾಜ್ಯ ಶಿಕ್ಷಣ ಇಲಾಖೆ ಬಯಸುವಂತೆ)

ಕೈಮಗ್ಗ ಕ್ಷೇತ್ರಕ್ಕೆ ಕಚ್ಚಾ ನೂಲು ಅಡೆತಡೆ ಇಲ್ಲದೆ ಪೂರೈಕೆಯಾಗುವುದನ್ನು ಖಚಿತಪಡಿಸಲು ನೂಲು ತಯಾರಿಸುವ ಗಿರಣಿಗಳು ತಮ್ಮ ಒಟ್ಟು ಉತ್ಪಾದನೆಯ ಶೇಕಡಾ 50 ರಷ್ಟು ನೂಲನ್ನು ಲಡಿ ರೂಪದಲ್ಲಿ ಉತ್ಪಾದಿಸಬೇಕೆಂಬ ಷರತ್ತು ಜಾರಿಯಲ್ಲಿತ್ತು. ಸತ್ಯಂ ಸಮಿತಿಯು ನೂಲಿನ ಗಿರಣಿಗಳ ಮೇಲೆ ಹಾಕಲಾದ ಷರತ್ತನ್ನು ತೆಗೆದು ಹಾಕಬೇಕೆಂದು ಶಿಫಾರಸು ಮಾಡಿದೆ.

ಇದಕ್ಕಿಂತಲೂ ಅಪಾಯಕಾರಿ ಶಿಫಾರಸು ಇನ್ನೊಂದಿದೆ. ರಫ್ತಿಗಾಗಿ ಜವಳಿ ಉತ್ಪಾದನೆ! ಬಳಕೆಗಾಗಿ ಅಲ್ಲ!! ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಜಾಗತಿಕ ಗುಣಮಟ್ಟದ ಬಟ್ಟೆಯನ್ನು ಉತ್ಪಾದಿಸಲು ಮಾತ್ರ ಪ್ರೋತ್ಸಾಹ ನೀಡಿದರೆ ಸಾಕು. ಆದ್ದರಿಂದ ನೇಕಾರರನ್ನು 3 ವರ್ಗಗಳಾಗಿ ವಿಂಗಡಿಸುವುದು. 80 ರಿಂದ 100 ಕೌಂಟ್ಸ್ ನೂಲನ್ನು ಬಳಸಿ ಅತ್ಯುತ್ತಮ ಗುಣಮಟ್ಟದ ಬಟ್ಟೆಯನ್ನು ನೇಯುವ ಕೈಮಗ್ಗದ ನೇಕಾರರನ್ನು ಪ್ರಥಮ ವರ್ಗದ ನೇಕಾರರೆಂದು ಪರಿಗಣಿಸಿ ಅವರಿಗೆ ಪ್ರೋತ್ಸಾಹ ಕೊಡುವುದು. 40 ರಿಂದ 80 ಕೌಂಟ್ಸ್ ನೂಲನ್ನು ಬಳಸಿ ಮಧ್ಯಮ ಗುಣ ಮಟ್ಟದ ಬಟ್ಟೆಯನ್ನು ನೇಯುವ ನೇಕಾರರನ್ನು ಮಧ್ಯಮ ವರ್ಗದ ನೇಕಾರರು ಎಂದು ಪರಿಗಣಿಸಿ ಅವರಿಗೆ ತರಬೇತಿ ನೀಡಿ ಅವರನ್ನು ಪ್ರಥಮ ವರ್ಗಕ್ಕೆ ಬಡ್ತಿನೀಡುವುದು ಇಲ್ಲವೆ ಅವರನ್ನು ವಿದ್ಯುತ್ ಮಗ್ಗಗಳ ಕ್ಷೇತ್ರಕ್ಕೆ ವರ್ಗಾಯಿಸುವುದು. 40 ಕ್ಕಿಂತಲೂ ಕಡಿಮೆ ಕೌಂಟ್ಸ್ ನೂಲನ್ನು ಬಳಸಿ ಸಾಮಾನ್ಯ ತರಗತಿಯ ಬಟ್ಟೆಯನ್ನು ನೇಯುವ ಕೈಮಗ್ಗದ ನೇಕಾರ ಪ್ರಯೋಜನಕ್ಕೆ ಬರಲಾರರು. ಅವರು ಬದಲಿ ಉದ್ಯೋಗವನ್ನು ಹುಡುಕಿಕೊಳ್ಳುವುದು.

ನೇಕಾರರ ಈ ವರ್ಗೀಕರಣದಲ್ಲಿ ಪ್ರಥಮ ವರ್ಗದಲ್ಲಿ ಬರುವವರು ಶೇಕಡಾ 20. ಇನ್ನೊಂದು ಶೇಕಡಾ 20 ರಷ್ಟು ನೇಕಾರರು ಮಧ್ಯಮ ವರ್ಗಕ್ಕೆ ಸೇರ್ಪಡೆಯಾಗುತ್ತಾರೆ. ಇನ್ನುಳಿದ ಶೇಕಡಾ 60 ರಷ್ಟು ಸಾಮಾನ್ಯ ನೇಕಾರರನ್ನು ನಿರ್ದಾಕ್ಷಿಣ್ಯವಾಗಿ ಬೀದಿಗೆ ತಳ್ಳುವ ಸಂಚು ಈ ಸತ್ಯಂ ಸಮಿತಿ ವರದಿ.

ಬಹುಸಂಖ್ಯಾತ ನೇಕಾರರ ಪಾಲಿಗೆ ಮರಣಶಾಸನದಂತಿರುವ ಈ ಸತ್ಯಂ ಸಮಿತಿ ವರದಿ ವಿರುದ್ಧ ದೇಶಾದ್ಯಂತ ಹೋರಾಟ ನಡೆಸಲು ಕಲ್ಕತ್ತಾ ಸಮಾವೇಶ ಕರೆ ನೀಡಿದೆ. ವಿವಿಧ ಹಂತಗಳ ಹೋರಾಟದ ಭಾಗವಾಗಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೈಮಗ್ಗದ ನೇಕಾರರು ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸುವುದು, ಸಮಾವೇಶಗಳನ್ನು ನಡೆಸಿ ಬೇಡಿಕೆಗಳಿಗೆ ಪ್ರಚಾರ ದೊರಕಿಸುವುದು, 'ರಾಜ್‌ಭವನ ಚಲೋ' ಕಾರ್ಯಕ್ರಮವನ್ನು ರೂಪಿಸಿ ರಾಜ್ಯಪಾಲರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವುದು. ಒಂದು ದಿನದ ಅಖಿಲ ಭಾರತ ಮುಷ್ಕರ ನಡೆಸುವುದು. ಕರ್ನಾಟಕ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯಸಮಿತಿಯು ಹೋರಾಟದ ಕಾರ್ಯಕ್ರಮಗಳನ್ನು ಒಂದೊಂದಾಗಿ ಜಾರಿಗೊಳಿಸಲು ಆರಂಭಿಸಿದೆ.

ಜನಾರೋಗ್ಯದ ಸುಳ್ಳುಗಳು

ಪುಟ 4 ರಿಂದ

ಆಯುರ್ವೇದ, ಸಿದ್ಧಯುನಾನಿ, ಯೋಗ, ಪ್ರಾಚೀನ ಚಿಕಿತ್ಸೆಗಳಾಗಿವೆ. ಈ ಚಿಕಿತ್ಸೆಗಳು ಜನರ ಅನುಭವ ಪ್ರಯತ್ನ, ಆಧಾರಿತ ಚಿಕಿತ್ಸೆಗಳು. ಸಾವಿರಾರು ವರ್ಷಗಳಿಂದ ಈ ಚಿಕಿತ್ಸೆಗಳು ಉಪಯೋಗದಲ್ಲಿವೆ. ಹಾಗೂ ಪರಿಣಾಮಕಾರಿಯೂ ಆಗಿವೆ.

ಚಿಕಿತ್ಸೆ ಲಭ್ಯವಿರುವ ಸಸ್ಯಗಳ ಮೇಲೆ ಅವಲಂಬಿಸಿದೆ. ಹೀಗಾಗಿ ಪ್ರತಿ ಸ್ಥಳದಲ್ಲೂ ಚಿಕಿತ್ಸೆ ಬದಲಾಗಲು ಸಾಧ್ಯ. ಉಪಯೋಗಿಸುವ ಪ್ರಮಾಣವೂ ಬದಲಾಗುತ್ತದೆ. ಹಾಗೂ ಈ ಪದ್ಧತಿಯನ್ನು ವೈಜ್ಞಾನಿಕವಾಗಿ ಪರೀಕ್ಷಿಸಲಾಗಿಲ್ಲ. ಆದ್ದರಿಂದ ಈ ಚಿಕಿತ್ಸೆಗಳನ್ನು ಅವೈಜ್ಞಾನಿಕ ಚಿಕಿತ್ಸೆಗಳೆಂದು ಮೌಢ್ಯಭರಿತ ಚಿಕಿತ್ಸೆಗಳೆಂದು ಕರೆಯಲಾಗುತ್ತಿದೆ. ಈ ಔಷಧಿಗಳು ಸಾವಿರಾರು ವರ್ಷಗಳಿಂದ ಉಪಯೋಗಿಸಲ್ಪಡುತ್ತ ಬಂದಿವೆ, ಪರಿಣಾಮಕಾರಿಯಾಗಿವೆ. ಸುಲಭವಾಗಿ ದೊರಕುತ್ತವೆ ಹಾಗೂ ಯಾವ ಅಡ್ಡಪರಿಣಾಮಗಳೂ ಇಲ್ಲ. ಈ ಚಿಕಿತ್ಸಾ ವಿಧಾನಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿಲ್ಲವೆಂಬುದು ಈ ಚಿಕಿತ್ಸೆಯಲ್ಲಿನ ಕೊರತೆ. ಆಧುನಿಕ ಔಷಧಿಗಳು ಎಲ್ಲೆಡೆ ದೊರಕದಿರುವಾಗ ದುಬಾರಿ ಹಾಗೂ ಅಡ್ಡ ಪರಿಣಾಮಗಳಿರುವುದರಿಂದ, ತಜ್ಞ ವೈದ್ಯರೇ ಉಪಯೋಗಿಸಬೇಕಾಗಿರುವುದರಿಂದ, ಕೆಲವೇ ರೋಗ ಗುಣಪಡಿಸಲು ಸಾಧ್ಯವಾಗುವುದರಿಂದ, ಗಿಡಮೂಲಿಕೆ ಔಷಧಿ ಉಪಯೋಗ ವೈಜ್ಞಾನಿಕವೆಂದೇ ಹೇಳಬಹುದು. ಕೆಲವು ಬಾರಿ ಈ ಪ್ರಾಚೀನ ಚಿಕಿತ್ಸೆಗಳ ಉಪಯೋಗದಲ್ಲಿ ಮೌಢ್ಯವನ್ನು ಕಾಣಬಹುದು. ಉದಾ: "ಈ ಗಿಡಮೂಲಿಕೆ ಉಪಯೋಗಿಸಿ, ಸಕ್ಕರೆ ಕಾಯಿಲೆ ಸಂಪೂರ್ಣ ಗುಣ ಹೊಂದುತ್ತದೆ" ಇತ್ಯಾದಿ.ಇಂತಹ ಹೇಳಿಕೆಗಳು ಚಿಕಿತ್ಸಕನ ಅಜ್ಞಾನವನ್ನು ತೋರಿಸುತ್ತದೆ ಹೊರತು ಚಿಕಿತ್ಸೆಯ ಮೌಢ್ಯವನ್ನಲ್ಲ. ಇಂದು ರೂಢಿಗತ ಚಿಕಿತ್ಸೆಯನ್ನು ಹೆಚ್ಚು ಹೆಚ್ಚು ಜನರು ಪ್ರಯೋಗಿಸುತ್ತಿದ್ದು, ಚಿಕಿತ್ಸಾ ವಿಧಾನದಲ್ಲಿ ಮೌಢ್ಯವನ್ನು ತುಂಬಿ, ಜನರನ್ನು ಮೋಸ ಗೊಳಿಸುತ್ತಿದ್ದಾರೆ. ಈ ಚಿಕಿತ್ಸೆಗಳಿಗೆ ಕೆಲವು ಇತಿಮಿತಿಗಳಿವೆ. ಆದರೆ ಸಾಮಾನ್ಯ ದಿನನಿತ್ಯ ರೋಗಗಳಿಗೆ ಈ ಚಿಕಿತ್ಸೆಗಳು ಪರಿಣಾಮಕಾರಿ. ಈ ಚಿಕಿತ್ಸೆಗಳು ಪ್ರಾಚೀನ ಚಿಕಿತ್ಸೆಗಳಾದರೂ, ಮೌಢ್ಯಾಧಾರಿತ ಚಿಕಿತ್ಸೆಗಳಲ್ಲ.

ಮಿಥ್ಯ: ಖಾಸಗೀ ಕ್ಷೇತ್ರ ಮಾತ್ರ ಜನಾರೋಗ್ಯ ಸುಧಾರಿಸಲು ಸಾಧ್ಯ

ಸತ್ಯ: ಇಂದು ಖಾಸಗೀಕರಣ ನೀತಿ ಜಾರಿಯಲ್ಲಿದೆ. ಈ ನೀತಿಯಿಂದ ಭಾರತದ ಆರೋಗ್ಯ ಪರಿಸ್ಥಿತಿ ಸುಧಾರಿಸುತ್ತದೆ ಎಂಬ ಭ್ರಮೆ ಹುಟ್ಟಿಸಲಾಗುತ್ತಿದೆ.

ಜನಾರೋಗ್ಯ ಸುಧಾರಿಸಲು ಜನರ ಅಗತ್ಯತೆಗಳನ್ನು ಪೂರೈಸಬೇಕು - ಕುಡಿಯುವ ನೀರು, ಪೌಷ್ಟಿಕ ಆಹಾರ, ಉದ್ಯೋಗ, ವಸತಿ ನೈರ್ಮಲ್ಯದ ವಾತಾವರಣ, ವೈದ್ಯಕೀಯ ಸೌಲಭ್ಯ, ಔಷಧಿಗಳು. ಆದರೆ ಇಂದು ಸಮಾಜದ ಬಗ್ಗೆ ಕಾಳಜಿ ಇರಬೇಕಾದ ಸರಕಾರವೂ ಈ ಸೌಲಭ್ಯಗಳನ್ನು ಪೂರೈಸಲು ಪ್ರಯತ್ನ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಲಾಭವೇ ಮುಖ್ಯ ಉದ್ದೇಶವಾಗಿ ಇಟ್ಟುಕೊಂಡಿರುವ ಖಾಸಗಿ ಕ್ಷೇತ್ರ ಹೇಗೆ ಜನಾರೋಗ್ಯ ಸುಧಾರಿಸುತ್ತದೆ ಎಂಬುದು ಪ್ರಶ್ನಾರ್ಹ.

ಖಾಸಗೀಕರಣ ನೀತಿ ಜಾರಿಗೆ ಬರಲು ವಿಶ್ವಬ್ಯಾಂಕ್, ಐಎಂಎಫ್ ಕಾರಣ. ಈ ಸಂಸ್ಥೆಗಳು ಖಾಸಗಿ ಕ್ಷೇತ್ರವನ್ನು ದಕ್ಷ ಎಂದು ನಂಬುತ್ತವೆ. ಖಾಸಗೀಕರಣ ಎಂದರೆ ಸರ್ಕಾರಿ ವೆಚ್ಚ ಕಡಿಮೆ ಮಾಡಿ, ಖಾಸಗಿ ಕ್ಷೇತ್ರ ಸರ್ಕಾರದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು. ಖಾಸಗಿ ಕ್ಷೇತ್ರ ಸರ್ಕಾರದ ಹಿಡಿತವನ್ನು ಕಡಿಮೆ ಮಡಿ ಹೆಚ್ಚುಲಾಭಗಳಿಸಲು ಪ್ರಯತ್ನ ಮಾಡುವ ಹೊಸ ತಂತ್ರ ಇದು.

ಅಮೆರಿಕ ಒಂದನ್ನು ಬಿಟ್ಟರೆ ಇತರೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಾಗೂ ಯುರೋಪಿನಲ್ಲಿ ಆರೋಗ್ಯ ಸುಧಾರಣೆಗೆ, ಖಾಸಗಿ ಕ್ಷೇತ್ರದ ಬದಲು ಸಾರ್ವಜನಿಕ ಕ್ಷೇತ್ರವನ್ನು ಅವಲಂಬಿಸಿದೆ. ಆದರೆ ಭಾರತದಲ್ಲಿ ಈಗಾಗಲೇ ಖಾಸಗೀ ಕ್ಷೇತ್ರ ಅಮೆರಿಕೆಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲೂ ವಿಶ್ವ ಬ್ಯಾಂಕ್ ನಮ್ಮ ದೇಶದಲ್ಲೇಕೆ ಖಾಸಗೀಕರಣಕ್ಕೆ ಒತ್ತಾಯಿಸುತ್ತಿದೆ? ಖಾಸಗೀಕರಣದ ಪೈಪೋಟಿ ಉಂಟಾಗುತ್ತದೆ ಹಾಗೂ ಆದರ ಪರಿಣಾಮ ಚಿಕಿತ್ಸಾ ಸೌಲಭ್ಯಗಳು ಉತ್ತಮಗೊಳ್ಳುತ್ತವೆ ಎಂದು ಹೇಳಲಾಗುತ್ತದೆ. ಆದರೆ ಇದು ತಪ್ಪು ನಂಬಿಕೆಯೆಂದೇ ಹೇಳಬಹುದಾಗಿದೆ. ಕೆಲವೇ ಕಂಪನಿಗಳ ಲಾಭಕೋರ ನೀತಿಗೆ ಪ್ರೋತ್ಸಾಹ ದೊರಕಿದಂತಾಗುತ್ತದೆ ಹಾಗೂ ಸ್ಥಳೀಯ ಉದ್ದಿಮೆಗೆ ಪೆಟ್ಟು ಬೀಳುವ ಸಾಧ್ಯತೆ ಇದೆ. ಇದರ ಪರಿಣಾಮವಾಗಿ ಸಾರ್ವಜನಿಕ ಕ್ಷೇತ್ರದ ಔಷಧಿ ಉದ್ದಿಮೆಗೆ ಪೆಟ್ಟು ಬೀಳುತ್ತಿರುವುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ.

ಖಾಸಗೀಕರಣ ನೀತಿಯಿಂದ ಉದ್ಯಮಗಳು ಕರ ರಿಯಾಯಿತಿ ಪಡೆಯಲು ಸಾಧ್ಯ. ಆದರೆ ಸಾರ್ವಜನಿಕ ಒಳಿತಿಗೆ ಈ ಉದ್ದಿಮೆಗಳು ಬದ್ಧರಾಗುತ್ತಾರೆಂದು ನಂಬುವುದು ಅರ್ಥಹೀನ.

ಖಾಸಗಿ ವೈದ್ಯಕೀಯ ವ್ಯವಸ್ಥೆಯಲ್ಲಿ ಪೈಪೋಟಿಯಿಂದ ಅನಗತ್ಯ ಪರೀಕ್ಷೆಗಳು, ಚಿಕಿತ್ಸೆಗಳು, ಶಸ್ತ್ರಚಿಕಿತ್ಸೆಗಳು ಹೆಚ್ಚುತ್ತಿರುವುದನ್ನು ಕಾಣಬಹುದು. ಈ ಚಿಕಿತ್ಸೆ ಹಾಗೂ ಪರೀಕ್ಷೆಗಳಿಂದ ಹೆಚ್ಚು ಲಾಭಗಳಿಸುವ ಪ್ರಯತ್ನ ಮುಂದುವರೆದಿದೆ.

ಖಾಸಗಿ ಆಸ್ಪತ್ರೆ ಹಾಗೂ ಸರಕಾರಿ ಆಸ್ಪತ್ರೆ ಸೇವೆಗಳನ್ನು ಹೋಲಿಸಿದಲ್ಲಿ ಮೇಲ್ನೋಟಕ್ಕೆ ಕಾಣುವ ವಿಷಯವೆಂದರೆ ಖಾಸಗಿ ಆಸ್ಪತ್ರೆಗಳು ಸ್ವಚ್ಛವಾಗಿವೆ. ಈ ಆಸ್ಪತ್ರೆಗಳಲ್ಲಿ ಎಲ್ಲವನ್ನು ಕೂಲಂಕುಷವಾಗಿ ಪರೀಕ್ಷಿಸುತ್ತಾರೆ. ಚಿಕಿತ್ಸೆ ಪರಿಣಾಮಕಾರಿಯಾಗುತ್ತದೆ ಹಾಗೂ ಈ ಆಸ್ಪತ್ರೆಗೆ ಹೋದರೆ ಕೂಡಲೆ ಚಿಕಿತ್ಸೆ ಪಡೆಯಲು ಸಾಧ್ಯ ಇತ್ಯಾದಿ ಇತ್ಯಾದಿ. ಆದರೆ ಸತ್ಯವೇನೆಂದರೆ ಈ ಆಸ್ಪತ್ರೆಗಳಲ್ಲಿ ಎಲ್ಲಾ ಸೇವೆಗಳಿಗೂ ಹಣವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಎಲ್ಲರಿಗೂ ಹಣಕೊಡುವ ಸಾಧ್ಯತೆ ಇಲ್ಲದ್ದರಿಂದ, ಈ ಸೇವೆಗಳಿಂದ ಜನಾರೋಗ್ಯ ಸುಧಾರಣೆಯಾಗುತ್ತದೆಂಬುದು ಒಂದು ಭ್ರಮೆಯಷ್ಟೆ.

ಖಾಸಗೀಕರಣ ನೀತಿ ಸಾರ್ವಜನಿಕ ಕ್ಷೇತ್ರವನ್ನು ಕಡೆಗಣಿಸುತ್ತದೆ ಹಾಗೂ ಜನಾರೋಗ್ಯ ನೀತಿಗೆ ಪೆಟ್ಟು ಬೀಳುತ್ತದೆ.

ಆರೋಗ್ಯ ಕ್ಷೇತ್ರದ ಬೆಳವಣಿಗೆ ಎಲ್ಲ ಸರಕಾರಗಳ ಜವಾಬ್ದಾರಿಯಾಗಬೇಕು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಆರೋಗ್ಯಸುಧಾರಣೆ ಮಾಡಲು ಜನಪರ ನಿಲುವನ್ನು ಸೂಚಿಸಲು ಸಾಧ್ಯವಾಗುತ್ತದೆ. ಅದಲ್ಲದೇ ಅಂತರ್‌ರಾಷ್ಟ್ರೀಯವಾಗಿ ವಿಶ್ವ ಆರೋಗ್ಯ ಸಂಸ್ಥೆ ಜನಾರೋಗ್ಯ ಸುಧಾರಣೆಗೆ ಸಲಹೆ ಹಾಗೂ ಸಹಾಯ ಮಾಡುತ್ತಿದೆ.

ಆದರೆ ಇಂದು ಆರೋಗ್ಯದ ಹಿನ್ನೆಲೆ ಇರದೇ ಇರುವ ವಿಶ್ವಬ್ಯಾಂಕ್ ಹಾಗೂ ಐಎಂಎಫ್‌ಗಳು ಆರೋಗ್ಯದ ಬಗ್ಗೆ ಆದೇಶ ಕೊಡಲು ಪ್ರಾರಂಭಿಸಿವೆ. ಕೆಲವು ಸರ್ಕಾರಗಳು ಇದನ್ನು ಪಾಲಿಸುವುದು ಅನಿವಾರ್ಯವಾಗಿದೆ. ಹಾಗೂ ಈ ಆದೇಶಗಳನ್ನು ಪಾಲಿಸದಿದ್ದಲ್ಲಿ ಜನಾರೋಗ್ಯ ಕಾರ್ಯಕ್ರಮನಾಶ ಹೊಂದುವ ಸಾಧ್ಯತೆ ಇದೆ.

ಬಾಂಬ್‌ಗಳಿಂದ ಆಗದ್ದು ಡಾಲರ್‌ಗಳಿಂದ, ಗೂಂಡಾಗಿರಿಯಿಂದ ಆಯಿತೇ?

ಅಮೆರಿಕ ಮತ್ತು ನಾಟೋ ಮಿಲಿಟರಿ ಕೂಟ ಮೂರು ತಿಂಗಳ ಬಾಂಬ್ ದಾಳಿಯಲ್ಲಿ ಅಧ್ಯಕ್ಷ ಮಿಲೋಸೆವಿಕ್, ಸರ್ಕಾರ ಮತ್ತು ಯುಗೋಸ್ಲಾವಿಯಾದ ಜನತೆಯನ್ನು ಮಣಿಸಲಾಗಲಿಲ್ಲ. ಆಮೇಲೆ ಕೈಹಿಸುಕಿಕೊಂಡ ಅವರು, ಯುಗೋಸ್ಲಾವಿಯದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಲು ಡಾಲರುಗಳ ಲಂಚದ ಹೊಳೆ ಹರಿಸಿದ್ದಾರೆ. ಆ ದೇಶದ ಕೆಲವು ವಿರೋಧ ಪಕ್ಷಗಳನ್ನು ವ್ಯಕ್ತಿಗಳನ್ನು ಬಳಸಿ ಅದು ಯುಗೋಸ್ಲಾವಿಯದಲ್ಲಿ ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮುರಿದು ನೇರ ಹಸ್ತಕ್ಷೇಪ ಮಾಡಿದೆ.

ಚುನಾವಣೆ ಮೊದಲು ಸಾಮ್ರಾಜ್ಯಶಾಹಿ ಪ್ರಚಾರಮಾಧ್ಯಮಗಳು ಚುನಾವಣೆ ಕಾನೂನುಬದ್ಧ ಕ್ರಮಬದ್ಧವಾಗಿ ನಡೆದಿಲ್ಲ ಎಂದು ಭಾರಿ ಅಪಪ್ರಚಾರ ನಡೆಸಿದವು. ಅಂತರ್ರಾಷ್ಟ್ರೀಯ ವೀಕ್ಷಕರ ತಂಡ ಚುನಾವಣೆಗಳು ಕ್ರಮ-ಬದ್ಧ, ಕಾನೂನು-ಬದ್ಧವಾಗಿ ಶಾಂತಿಯುತವಾಗಿ ನಡೆದಿದೆ ಎಂದು ಹೇಳಿದರೂ ಈ ಅಪಪ್ರಚಾರ ಮುಂದುವರೆಯಿತು. ಇದಲ್ಲದೆ ಚುನಾವಣಾಪೂರ್ವ ಪ್ರಚಾರ ಸಮಯದಲ್ಲಿ ನಾಟೋ ಮತ್ತು ಅಮೆರಿಕದ ನಾಯಕರು ಯುಗೋಸ್ಲಾವಿಯದ ಮತದಾರರಿಗೆ ಲಂಚ-ಆಮಿಷ-ಬೆದರಿಕೆಗಳ ಮಿಶ್ರಣವನ್ನು ಉಣಬಡಿಸಿದರು. ಮಿಲೊಸೆವಿಕ್ ಪುನಃ ಆಯ್ಕೆ ಆದರೆ ನಾಟೋ ಬಾಂಬ್ ದಾಳಿ ಪುನಃ ಆರಂಭಿಸುವುದಾಗಿ ಬೆದರಿಸಲಾಯಿತು. ಅಮೆರಿಕದ ಕೈಗೊಂಬೆ ಅಧ್ಯಕ್ಷ ಅಭ್ಯರ್ಥಿ ಕೋಸ್ಟುನಿಕಾ ಗೆದ್ದರೆ ಆ ದೇಶದ ಮೇಲಿರುವ ಆರ್ಥಿಕ ದಿಗ್ಬಂಧನವನ್ನು ರದ್ದು ಮಾಡುವುದು ಮಾತ್ರವಲ್ಲ, ದೇಶದ ಬೆಳವಣಿಗೆಗೆ ಭಾರಿ ನೆರವು ನೀಡಲಾಗುವುದು ಎಂದೆಲ್ಲಾ ರಾಜರೋಷವಾಗಿ ಹೇಳಲಾಯಿತು.


ಇವೆಲ್ಲದರ ಪರಿಣಾಮವಾಗಿ ಮೊದಲ ಸುತ್ತಿನ ಚುನಾವಣಾ ಫಲಿತಾಂಶ ಕೊಸ್ಟುನಿಕಾ ಮಿಲೋಸೆವಿಕ್‌ಗಿಂತ ಹೆಚು ಮತ ಗಳಿಸಿದ ಸುದ್ದಿ ಬರುತ್ತಿದ್ದಂತೆ ಸಾಮ್ರಾಜ್ಯಶಾಹಿಗಳು ರಾತ್ರೋರಾತ್ರಿ ಬಣ್ಣ ಬದಲಾಯಿಸಿದರು. ಚುನಾವಣೆ ಕ್ರಮಬದ್ಧವಾಗಿ, ಕಾನೂನು-ಬದ್ಧವಾಗಿ ನಡೆದಿಲ್ಲ ಎಂಬ ಪ್ರಚಾರ ಬಿಟ್ಟುಕೊಟ್ಟರು. ಕೊಸ್ಟುನಿಕಾ ಆಯ್ಕೆಯಾಗಿದ್ದಾರೆ. ಮಿಲೋಸೆವಿಕ್ ತಕ್ಷಣ ಅಧಿಕಾರ ಬಿಟ್ಟುಕೊಡಬೇಕು ಎಂಬ ಕೂಗು ಆರಂಭವಾಯಿತು. ಮೊದಲಲ ಸುತ್ತಿನಲ್ಲಿ ಮಿಲೋಸೆವಿಕ್ ಶೇಕಡಾ 40 ಮತಗಳಿಸಿದರೆ, ಅಮೆರಿಕದ ಕೈಗೊಂಬೆ ಅಭ್ಯರ್ಥಿ ಕೊಸ್ಟುನಿಕಾ ಶೇಕಡಾ 48 ಮತಗಳಿಸಿದ್ದರು. ಯುಗೋಸ್ಲಾವಿಯಾದ ಚುನಾವಣಾ ಕಾನೂನು ಪ್ರಕಾರ ಯಾವುದೇ ಅಭ್ಯರ್ಥಿಗೆ ಶೇಕಡಾ 50 ಕ್ಕಿಂತ ಹೆಚ್ಚು ಮತ ಗಳಿಸದಿದ್ದರೆ ಎರಡನೇ ಸುತ್ತಿನ ಚುನಾವಣೆ ನಡೆಯಬೇಕು. ಆದರೆ ಸಾಮ್ರಾಜ್ಯಶಾಹಿ ಕೊಸ್ಟುನಿಕಾ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅದನ್ನು ಆ ದೇಶದ ಚುನಾವಣಾ ಕಮಿಷನ್ ಘೋಷಿಸಬೇಕು ಎಂದು ಒತ್ತಾಯದ ಪ್ರಚಾರ ಆರಂಭಿಸಿತು. ಇದಕ್ಕೆ ಕಮಿಷನ್ ಮಣಿಯದಾಗ, ಅಮೆರಿಕನ್ ಬೆಂಬಲಿತ ಗುಂಪುಗಳು ಹಿಂಸಾಚಾರ ಆರಂಭಿಸಿದವು. ಪಾರ್ಲಿಮೆಂಟಿನೊಳಗೆ ನುಗ್ಗಿ, ಸರ್ಕಾರಿ ಕಚೇರಿಗಳಿಗೆ ನುಗ್ಗಿ ಈ ಗುಂಪುಗಳು ಗೂಂಡಾಗಿರಿ ನಡೆಸಿದವು. ದೇಶಾದ್ಯಂತ ಅಮೆರಿಕನ್ ಡಾಲರುಗಳಿಂದ ಕೊಬ್ಬಿದ ಗೂಂಡಾ ಪಡೆಗಳು ದಾಂಧಲೆ ಎಬ್ಬಿಸಿದವು. ಅಧ್ಯಕ್ಷ ಮಿಲೊಸೆವಿಕ್ ಸಾಮ್ರಾಜ್ಯಶಾಹಿ - ಕುಮ್ಮಕ್ಕಿನ ಭಾರಿ ಹಿಂಸಾಚಾರ ಆಂತರಿಕ ಯುದ್ಧಕ್ಕೆ ಎಡೆಕೊಡಬಹುದು ಎಂಬ ಆತಂಕದಿಂದ ರಾಜೀನಾಮೆ ಕೊಟ್ಟಿದ್ದಾರೆ.

ಹೀಗೆ ಅಮೆರಿಕ ಮತ್ತು ಸಾಮ್ರಾಜ್ಯಶಾಹಿ ಕೂಟ ತಿಂಗಳುಗಟ್ಟಲೆ ಬಾಂಬ್ ದಾಳಿಯಿಂದ ಸಾಧಿಸದ್ದನ್ನು ಲಂಚ-ಆಮಿಷ-ಗೂಂಡಾಗಳಿಂದ ಸಾಧಿಸಿದೆ. ಯುಗೋಸ್ಲಾವಿಯದಲ್ಲಿ ಎಲ್ಲಾ ಅಂತರ್ರಾಷ್ಟ್ರೀಯ ಕಾನೂನು, ಆ ದೇಶದ ಕಾನೂನುಗಳನ್ನೆಲ್ಲ ಮುರಿದು ಅಧಿಕಾರ ಕಿತ್ತುಕೊಂಡ ಕೊಸ್ಟುನಿಕಾ ಯಾವುದೇ ನಿಜವಾದ ಅಧಿಕಾರವಿಲ್ಲದ ಅಧ್ಯಕ್ಷರಾಗಿದ್ದಾರೆ. ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ. ಪಾರ್ಲಿಮೆಂಟು, ಸೈನ್ಯ, ಪೋಲೀಸು, ಒಕ್ಕೂಟದ ಗಣರಾಜ್ಯಗಳ ಅಧ್ಯಕ್ಷರುಗಳು ಅವರನ್ನು ಮನಬಂದಂತೆ ಮಾಡಲು ಬಿಡುತ್ತಿಲ್ಲ. ಆಗಲೇ ಕೊಸ್ಟುನಿಕಾ ಗ್ಯಾಂಗ್‌ನ ಗೂಂಡಾರಾಜ್ಯದಿಂದ ಜನ ಬೇಸತ್ತಿದ್ದಾರೆ.

ಯುಗೋಸ್ಲಾವಿಯಾದಲ್ಲಿ ಅಮೆರಿಕದ ಕೈಗೊಂಬೆ ಅಧ್ಯಕ್ಷ

ಯುಗೋಸ್ಲಾವಿಯಾದಲ್ಲಿ ತೆರೆದುಕೊಳ್ಳುತ್ತಿರುವ ವಿದೇಶಿ ಸಾಮ್ರಾಜ್ಯಶಾಹಿಗಳ ಕುಮ್ಮಕ್ಕಿನಿಂದ ಪ್ರಜಾಪ್ರಭುತ್ವದ ಮೇಲೆ ನಡೆದ ಅತ್ಯಾಚಾರದ ಒಂದು ಚಿತ್ರ.

ಕೊಸ್ಟುನಿಕಾ ಯುಗೋಸ್ಲಾವಿಯಾದ ಹೊಸ ಅಧ್ಯಕ್ಷ. ಈತ ಹೊಸ ರೀತಿಯ ಅಧ್ಯಕ್ಷ. ಈತ



ಅಮೆರಿಕ ಬೆಂಬಲಿತ ಕೊಸ್ಟುನಿಕಾನ ಗೂಂಡಾಗಳಿಂದ ಸರ್ಕಾರಿ ಕಚೇರಿಗಳ ಮೇಲೆ ಬಾಂಬ್ ದಾಳಿ.

ಕಾನೂನುಬದ್ಧವಾಗಿ ಚುನಾವಣೆ ಗೆದ್ದಿಲ್ಲ. ಆದರೂ ಮಾಧ್ಯಮಗಳಿಗೆ ಇಂಟರ್‌ವ್ಯೂ ಕೊಡುತ್ತಾನೆ. ವಿದೇಶಿ ಗಣ್ಯರನ್ನು ಭೇಟಿ ಮಾಡುತ್ತಾನೆ. ಆತನದ್ದೇ ರಾಜಕೀಯ ಪಕ್ಷವಿಲ್ಲ. ಆತನಿಗೆ ರಾಜಕೀಯ ನೆಲೆಯೂ ಇಲ್ಲ. ಆತನಿಗೆ ಸೈನ್ಯದ ಮೇಲೆ, ಪೋಲಿಸಿನ ಮೇಲೆ ಅಧಿಕಾರವಿಲ್ಲ. ನಿಜವಾದ ಅಧಿಕಾರ ಇರುವುದು ಫೆಡರಲ್ ಪಾರ್ಲಿಮೆಂಟಿನ ಬಳಿ. ಪ್ರತಿ ಗಣರಾಜ್ಯದ ಪಾರ್ಲಿಮೆಂಟಿನ ಬಳಿ, ಪ್ರತಿ ಗಣರಾಜ್ಯದ ಬಳಿ, ಸೈನ್ಯ-ಪೋಲಿಸಿನ ಬಳಿ. ಯುಗೋಸ್ಲಾವಿಯಾದ ಸೈನ್ಯದ ಸುಪ್ರೀಂ ಕಮಾಂಡರ್ ಒಬ್ಬ ಮನುಷ್ಯ ಅಲ್ಲ. ಒಂದು ಸಮಿತಿ, ಸರ್ಬಿಯ ಗಣರಾಜ್ಯದ ಅಧ್ಯಕ್ಷ, ಮೊಂಟೆನಿಗ್ರೋ ಗಣರಾಜ್ಯದ ಅಧ್ಯಕ್ಷ, ಯುಗೋಸ್ಲಾವಿಯ ಒಕ್ಕೂಟದ ರಕ್ಷಣಮಂತ್ರಿ, ಸೈನ್ಯಾಧ್ಯಕ್ಷರ ಜತೆ ಐವರಲ್ಲಿ ಒಬ್ಬ ಸದಸ್ಯ ಅಷ್ಟೆ. ಈ ಸಮಿತಿಯದ್ದು. ಫೆಡರಲ್ ಪಾರ್ಲಿಮೆಂಟಿನಲ್ಲಿ ಮಿಲೋಸೆವಿಕ್‌ರ ಸೋಶಲಿಸ್ಟ್ ಪಕ್ಷದ್ದೆ ಬಹುಮತ. ಹಾಗಾದರೆ ಯಾಕೆ ಯುಗೋಸ್ಲಾವಿಯದ ಅಧ್ಯಕ್ಷರಾಗಿ ತಮ್ಮ ಕೈಗೊಂಬೆ ಕೂರಿಸಲು ಸಾಮ್ರಾಜ್ಯಶಾಹಿಗಳಿಗೆ ಆತುರ. ಯಾಕೆಂದರೆ ಸಾಮ್ರಾಜ್ಯಶಾಹಿಗಳಿಗೆ ಸೆಡ್ಡು ಹೊಡೆದ ಮಿಲೋಸೆವಿಕ್ ಈ ಪದವಿಯಲ್ಲಿದ್ದಾರೆ.

ಅಮೆರಿಕ ಯುಗೋಸ್ಲಾವಿಯದ ಚುನಾವಣೆಗಳಿಗೆ ಸುಮಾರು 2500 ಕೋಟಿ ರೂ. ಖರ್ಚು (550 ಮಿಲಿಯನ್ ಡಾಲರು) ಮಾಡಿದೆ. ಇದು ಅಮೆರಿಕದ ಪಾರ್ಲಿಮೆಂಟು ಯುಗೋಸ್ಲಾವಿಯದ 'ಪ್ರಜಾಸತ್ತಾತ್ಮಕ' ವಿರೋಧ ಪಕ್ಷಗಳಿಗೆ, ಅತೃಪ್ತ ಗುಂಪುಗಳಿಗೆ ಸಹಾಯಧನವಾಗಿ ಅಧಿಕೃತವಾಗಿ ಮಂಜೂರು ಮಾಡಿದ ಹಣ. ಇನ್ನು ಸಿಐಎ, ನಾಟೋ ಖರ್ಚು ಮಾಡಿದ್ದೆಷ್ಟೋ. ಚುನಾವಣೆ ಫಲಿತಾಂಶ ಬಂದ ನಂತರದ ದೇಶಾದ್ಯಂತ ಗೂಂಡಾಗಿರಿ ಅಲ್ಲದೆ ಅಮೆರಿಕನ್ ಬೆಂಬಲಿತ ಗುಂಪುಗಳು ಕೊಸ್ಟುನಿಕಾ ಅಧ್ಯಕ್ಷರಾದ ಮೇಲೂ ದಾಂಧಲೆ ಎಬ್ಬಿಸಿವೆ. ನಿಜವಾದ ಯಾವುದೇ ಅಧಿಕಾರ ಸಿಕ್ಕದ್ದರಿಂದ ಹತಾಶರಾದ ಕೋಸ್ಟುನಿಕಾ ಬೆಂಬಲಿಗ ಸಶಸ್ತ್ರ ಗೂಂಡಾ ಪಡೆಗಳು ಕಾರ್ಖಾನೆಗಳು, ಕಲ್ಲಿದ್ದಲು ಗಣಿಗಳು, ಬ್ಯಾಂಕುಗಳು, ವಿಶ್ವವಿದ್ಯಾಲಯಗಳು-ಇವುಗಳಿಗೆಲ್ಲಾ ನುಗ್ಗಿ ಅವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಗೂಂಡಾ ಪಡೆಗಳು ಹೋದಲೆಲ್ಲಾ ಅಲ್ಲಿನ ಅಧಿಕಾರಿಗಳನ್ನು ರಾಜೀನಾಮೆ ಕೊಡಲು ಬೆದರಿಸುತ್ತಿದ್ದಾರೆ. ಕೊಸ್ಟುನಿಕಾ ತನಗೆ ನಿಜವಾದ ಅಧಿಕಾರವಿಲ್ಲವೆಂದು ಮನಗಂಡು, ಎಲ್ಲಾ ಹಂತದ ಚುನಾಯಿತ, ಕಾನೂನು ಬದ್ಧ ಸಮಿತಿಗಳನ್ನು, ಅಧಿಕಾರಿಗಳನ್ನು ಬದಲಾಯಿಸಿ ತನ್ನ ಬಾಲಬಡುಕರನ್ನು ನೇಮಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಬಹಳ ಕಡೆ ಸಫಲವಾಗಿಲ್ಲ. ದೇಶದ ಸೈನ್ಯಾಧ್ಯಕ್ಷರನ್ನೇ ಬದಲಾಯಿಸುತೇನೆ ಎಂದು ಹೇಳಿಕೆ ನೀಡಿ ಮರುದಿನ ಸೈನ್ಯದ ಮುಖ್ಯಕಛೇರಿಗೆ ಹೋಗಿ ಸೈನ್ಯಾಧ್ಯಕ್ಷರನ್ನು ಭೇಟಿ ಮಾಡಿ ತನ್ನ ಹೇಳಿಕೆಯನ್ನೇ ನಿರಾಕರಿಸಬೇಕಾಯಿತು. ಎಲ್ಲಾ ಕಡೆ 'ಬಿಕ್ಕಟ್ಟು ಸಮಿತಿ'ಗಳೇ ನಿಜವಾದ ಅಧಿಕಾರವನ್ನು ಚುನಾಯಿತ ಸಮಿತಿಗಳಿಂದ . ವಹಿಸಿಕೊಳ್ಳುವಂತೆ ಪ್ರಯತ್ನಿಸುತ್ತಿದ್ದಾನೆ. ಆದರೆ ಎಲ್ಲಾ ಕಡೆ ಅದಕ್ಕೆ ತೀವ್ರ ಪ್ರತಿರೋಧ ಕಂಡು ಬಂದಿದೆ. ಮೊಂಟೆನಿಗ್ರೋ ಪಾರ್ಲಿಮೆಂಟಿಗೆ ಮಧ್ಯಂತರ ಚುನಾವಣೆ ನಡೆಸುವಂತೆ ಒತ್ತಾಯ ತರುವ ಹಾಗೂ ದೇಶದ ಪ್ರಧಾನಮಂತ್ರಿಯನ್ನು ಬದಲಾಯಿಸುವ ಪ್ರಯತ್ನವೂ ವಿಫಲವಾಗಿದೆ. ಕೋಸ್ಟುನಿಕಾ ಜೋಕರ್‌ನಂತೆ ದೇಶವೆಲ್ಲಾ ಅಲೆಯುತ್ತಿದ್ದಾನೆ - ಯಾವುದೇ ನಿಜವಾದ ಅಧಿಕಾರವಿಲ್ಲದೆ. ಈಗಿನ ವ್ಯವಸ್ಥೆಯೊಳಗೆ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುವ ಮನಸ್ಸಿಲ್ಲದೆ.

ಯುಗೋಸ್ಲಾವಿಯದಲ್ಲಿ ನಡೆದಿರುವುದು ಸಾರ್ವಭೌಮ ದೇಶವೊಂದರ ಆಂತರಿಕ ವ್ಯವಹಾರಗಳಲ್ಲಿ ನೇರ ವಿದೇಶಿ ಹಸ್ತಕ್ಷೇಪ. ಕಾನೂನುಬದ್ಧ ಸರ್ಕಾರವನ್ನು ಅಂತರ್ರಾಷ್ಟ್ರೀಯ ಭಯೋತ್ಪಾದಕತನ, ಹಣಬಲ, ಆಮಿಷ, ಬೆದರಿಕೆಗಳಿಂದ ಇಳಿಸಲು ಪ್ರಯತ್ನ ನಡೆದಿರುವುದು ಅಧ್ಯಕ್ಷೀಯ ಚುನಾವಣೆಗಳಲ್ಲಿ ಕೈಗೊಂಬೆ ವ್ಯಕ್ತಿ ಅಧಿಕಾರಕ್ಕೆ ಬಂದರೂ, ಇಡೀ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನಕ್ಕೆ ತೀವ್ರ ಪ್ರತಿರೋಧವಿದೆ. 'ಬರ್ಲಿನ್ ಗೋಡೆ ಬಿದ್ದಿದೆ' 'ಜನತೆ ಅಧಿಕಾರ ಕಸಿದುಕೊಂಡಿದೆ' ಮುಂತಾದ ರೋಚಕ ಘೋಷಣೆಗಳಾಗಲಿ, ಜೆಕೊಸ್ಲಾವಿಯಾ, ಪೋಲೆಂಡ್‌ಗಳಂತೆ ಹವೆಲ್ ಅಥವಾ ಲೆಕ್ ವಲೇನಾದಂತಹ ನಾಯಕರನ್ನು ಮುಂದೆ ತರಲಾಗದೆ ಸಾಮ್ರಾಜ್ಯಶಾಹಿಗಳು ಒದ್ದಾಡುತ್ತಿದ್ದಾರೆ. ಪುನಃ ಯುಗೋಸ್ಲಾವಿಯದಲ್ಲಿ ಅಮೆರಿಕ ಮತ್ತು ನಾಟೋ ಆಟ ಸಾಗುವಂತೆ ಕಾಣುತ್ತಿಲ್ಲ.

ರಶಿಯಾ ಅಧ್ಯಕ್ಷ ಪುಟಿನ್ ಭಾರತ ಭೇಟಿ

ಸದ್ದುಗದ್ದಲವಿಲ್ಲದೆ ರಶಿಯಾ ಅಧ್ಯಕ್ಷ ಪುಟಿನ್ ಅವರ ಭಾರತ ಭೇಟಿ ಮುಗಿದುಹೋಯ್ತು. ಆದರೆ ಮಾರ್ಚ್ ತಿಂಗಳಲ್ಲಿ ಅಮೆರಿಕಾದ ಅಧ್ಯಕ್ಷ ತನ್ನ ಪುತ್ರಿಯೊಂದಿಗೆ ಭೇಟಿ ನೀಡಿದಾಗ ದೇಶದ ಸಿರಿವಂತ ವರ್ಗ ಮತ್ತು ಅವರಿಗೆ ಸೇರಿದ ಮಾಧ್ಯಮಗಳು ವಿಜೃಂಭಣೆಯನ್ನೇ ಮೆರೆದವು. ಅಮೆರಿಕ ಅಧ್ಯಕ್ಷರ ಪುತ್ರಿ ಜೈಪುರದ ಅರಮನೆಯಲ್ಲಿ ಹೋಳಿ ಹಬ್ಬದ ಚೆಲ್ಲಾಟವಾಡಿದರೆ, ಕ್ಲಿಂಟನ್ ತಾಜ್ ಮಹಲಿಗೆ ಭೇಟಿ ನೀಡಿದಾಗ ಆಗ್ರಾದ ಜನತೆ ಪೋಲೀಸರಿಗೆ ಹೆದರಿ ಮನೆ ಸೇರಬೇಕಾಯಿತು. ಜಗತ್ತಿನ ಪೋಲಿಸ್ ಎಂದೇ ಹೆಸರಾಗಿರುವ ಅಮೆರಿಕದ ಅಧ್ಯಕ್ಷರಿಗೆ ಕಾವಲಾದರು.

ಇದಕ್ಕೆ ವ್ಯತಿರಿಕ್ತವಾದ ಸ್ವಾಗತ ಪುಟಿನ್ ಅವರಿಗೆ ದೊರಕಿತು. ಸುದ್ದಿ ಮಾಧ್ಯಮಗಳೂ ಕ್ಲಿಂಟನ್‌ಗೆ ನೀಡಿದ ಗೌರವವನ್ನು ನೀಡಲಿಲ್ಲ. ಆದರೂ ಭಾರತದ ಆರ್ಥಿಕತೆಗೆ ಅನುಕೂಲವಾಗುವ ಹಲವಾರು ಒಪ್ಪಂದಗಳಿಗೆ ಸಹಿ ಹಾಕಲ್ಪಟ್ಟಿವೆ. ಸೋವಿಯತ್ ಯೂನಿಯನ್ನಿನ ಪತನದ ನಂತರ ಭಾರತ ರಶಿಯ ವಾಣಿಜ್ಯ ವಹಿವಾಟು ತೀರಾ ಕೆಳಮಟ್ಟಕ್ಕೆ ಹೋಗಿದ್ದು ಅಧ್ಯಕ್ಷ ಪುಟಿನ್ ಅವರ ಭೇಟಿಯ ನಂತರ ಹೆಚ್ಚುವ ನಿರೀಕ್ಷೆ ಇದೆ. ಸೋವಿಯತ್ ಯೂನಿಯನ್ ಪತನದ ಮೊದಲು ಸಾಧಾರಣ 8000 ಕೋಟಿ ರೂ. ಬೆಲೆ ಬಾಳುವ ಸಾಮಾನುಗಳು ಬಾರತದಿಂದ ಒಕ್ಕೂಟ ದೇಶಕ್ಕೆ ರಫ್ತ ಮಾಡಲಾಗುತ್ತಿತ್ತು. ಆದರೆ ಭಾರತದ ಒಟ್ಟು ರಫ್ತಿನ ಶೇ 16 ಭಾಗ ಸೋವಿಯತ್ ಒಕ್ಕೂಟಕ್ಕೆ ಹೋಗುತ್ತಿತ್ತು. ಆದರೆ 1993-94 ರಲ್ಲಿ ಅದು ಶೇ 2.92 ಕ್ಕೆ ಇಳಿದಿದ್ದು 1999-2000 ದಲ್ಲಿ ಶೇ 2.53 ಮಾತ್ರ ಆಗಿತ್ತು. 1990-91 ರ ಮೊದಲು ಸಾಧಾರಣ ಶೇ 6 ರಷ್ಟು ಆಮದು ರಶಿಯಾದೇಶದಿಂದ ಆಗುತ್ತಿದ್ದರೆ ಈಗ ಅದು ಶೇ 1.31ಕ್ಕೆ ಇಳಿದಿದೆ.

ಭಾರತ-ರಶಿಯಾ ಒಪ್ಪಂದಗಳ ನಂತರ ವರದಿಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ರಶಿಯಾದ ಅಧ್ಯಕ್ಷರು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂಬುದನ್ನು ಸಾರಿ ಹೇಳಿದರು. ಇದು ಶ್ರೀ ಪುಟಿನ್ ಅವರ ನಿಲುವು ಮಾತ್ರ ಆಗಿರಲಿಲ್ಲ. ಅಂದಿನ ಸೋವಿತ್ ಯೂನಿಯನ್ ಸಹ ಯಾವಾಗಲೂ ಭಾರತದ ಪರವಾಗಿಯೇ ಇತ್ತು. ಬಿಜೆಪಿ ನೇತೃತ್ವದ ಸರಕಾರ ಅಮೆರಿಕಾ ಪರವಾಲುತ್ತಿದ್ದರೂ ಕ್ಲಿಂಟನ್ ಆಗಲೀ, ಅಮೆರಿಕಾದ ಇತರೆ ಪ್ರಮುಖರಾಗಲಿ ಕಾಶ್ಮೀರವು ಭಾರತದ ಅಂಗ ಎಂದು ಹೇಳಿಕೆ ನೀಡಿಲ್ಲ. ಬದಲಾಗಿ ಕಾಶ್ಮೀರ ವಿವಾದವನ್ನು ಬಗೆಹರಿಸಲು ತಾವು ಮಧ್ಯಸ್ಥಿಕೆ ವಹಿಸಬೇಕೆಂಬ ಕಾತರದಲ್ಲಿದೆ.

ಹಿಂದೆ ಬಾಂಗ್ಲಾದೇಶ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಸರ್ವಾಧಿಕಾರಿ ಪಾಕಿಸ್ತಾನದ ಸಹಾಯಕ್ಕೆ ಬಂದ ಅಮೆರಿಕಾ ಯುದ್ಧ ನೌಕೆಯನ್ನು ಕಳಿಸಿತ್ತು. ಮತ್ತು ಆ ಯುದ್ಧ ನೌಕೆ ಭಾರತಕ್ಕೆ ಇದಿರಾಗಿ ಹೊರಟಿತ್ತು. ಆದರೆ ಅಂದಿನ ಸೋವಿಯತ್ ಯೂನಿಯನ್ ಭಾರತದ ಸಹಾಯಕ್ಕೆ ನಿಂತಾಗ ಮಾತ್ರ ಅಮೆರಿಕ ಹಿಂದೇಟು ಹಾಕಿತ್ತು.

ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ನಡೆಸಿದ ಪರಮಾಣು ಪರೀಕ್ಷೆಯನ್ನು ರಶಿಯ ವಿರೋಧಿಸಿದ್ದರೂ, ಅಮೆರಿಕಾವು ಹೇರಿದಂತೆ ನಿರ್ಬಂಧಗಳನ್ನು ವಿಧಿಸಿಲ್ಲ, ಅಮೆರಿಕಾವು ಹೇರಿದ ಹಲವಾರು ನಿರ್ಬಂಧಗಳನ್ನು ಇನ್ನೂ ಹಿಂತೆಗೆದುಕೊಂಡಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಸೋವಿಯತ್ ಪತನದ ನಂತರದಲ್ಲಿ ಸ್ಥಾಪನೆಗೊಂಡ ರಶಿಯನ್ ಫೆಡರೇಷನ್ ಆರಂಭದಲ್ಲಿ ಅಮೆರಿಕಾದ ತೆಕ್ಕೆಗೆ ಬಿದ್ದರೂ ನಂತರದ ದಿನಗಳಲ್ಲಿ ಅಸ್ತಿತ್ವ ಕಳೆದುಕೊಂಡ ಅನುಭವವಾಗಿ ಸ್ವತಂತ್ರ ನಿಲುಮೆಯನ್ನು ತಾಳುತ್ತಿದೆ. ಹಿಂದೆ ಯುಗೋಸ್ಲಾವಿಯಾದಲ್ಲಿ ನ್ಯಾಟೋ ದೇಶಗಳ ಮಧ್ಯ ಪ್ರವೇಶ, ಸರ್ಬಿಯಾ ಚುನಾವಣೆ ಇನ್ನೂ ಹಲವಾರು ಅಂತರ್ರಾಷ್ಟ್ರೀಯ ವಿಷಯಗಳಲ್ಲಿ ರಶಿಯಾ ಅಮೆರಿಕಾದಿಂದ ದೂರ ಉಳಿದಿದೆ. ಆದ್ದರಿಂದಲೇ ಭಾರತದಜನತೆಗೆ ರಶಿಯಾ ಹತ್ತಿರವಾಗುತ್ತಿದೆ.

ಸಾಮ್ರಾಜ್ಯಶಾಹಿ ಜಗತ್ತಿನ ನೇತಾರನಾಗಿ ಏಕಧ್ರುವೀಕರಣ ಹೊಂದುತ್ತಿರುವ ಅಮೆರಿಕಾವು ಅಭಿವೃದ್ಧಿಶೀಲ ರಾಷ್ಟ್ರಗಳು ಮೂರನೇ ಜಗತ್ತಿನ ದೇಶಗಳ ಸಾರ್ವಭೌಮತೆಯ ಮೇಲೆ ಸಂಚಕಾರ ಏರುತ್ತಿದೆ. ಈ ಸಂದರ್ಭದಲ್ಲಿ ಜಗತ್ತಿನ ರಾಷ್ಟ್ರಗಳು ಬಹುಧ್ರುವೀಕರಣದತ್ತ ಸಾಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಪುಟಿನ್ ಅವರ ಭಾರತ ಭೇಟಿ ಹಾಗೂ ಈ ಸಂದರ್ಭದಲ್ಲಿ ಸಹಿ ಮಾಡಿದ ಒಪ್ಪಂದಗಳು ಹೊಸ ಅಧ್ಯಾಯವನ್ನು ತೆರೆಯಲಿದೆಯೆಂದು ಆಶಿಸಲಾಗಿದೆ.



ಹಳದಿ ಕಾರ್ಡ್ ಮತ್ತು ಬಿಪಿಎಲ್ ಸರ್ವೆ

ನವೆಂಬರ್ 1ರಿಂದ ರಾಜ್ಯದ ಎಲ್ಲಾ ಬಡವರಿಗೆ ಹಳದಿ ಕಾರ್ಡ್(ಬಡತನ ರೇಖೆಯ ಕೆಳಗಿರುವವರಿಗೆ ಕೊಡುವ ಪಡಿತರ ಚೀಟಿ) ವಿತರಣೆ ಮಾಡಲು ಸರ್ಕಾರ ಆದೇಶಿಸಿದೆ. ಈ ಕಾರ್ಡ್ ಹೊಂದಿರುವವರು ಬಡತನ ರೇಖೆಯ ಕೆಳಗಿರುವವರು. ಹಾಗಾಗಿ ಅವರಿಗೆ ಕಡಿಮೆ ದರದಲ್ಲಿ ಅಕ್ಕಿ, ಗೋಧಿ ಕೊಡುವುದಾಗಿ ಪ್ರಚಾರ ಕೂಡ ಮಾಡಿದೆ. ಯಥಾಪ್ರಕಾರ ಇದೊಂದು ಸರ್ಕಾರದ ಪ್ರಚಾರದ ಸಂಗತಿಯಾಗಿದೆಯೇ ಹೊರತಾಗಿ ನಿಜವಾದ ಬಡವರಿಗೆ ಪ್ರಯೋಜನವಾಗುತ್ತದೆಂದು ನಂಬಿದರೆ ಅದಕ್ಕಿಂತ ದೊಡ್ಡ ಮೂರ್ಖತನವಿಲ್ಲ. ಕಡಿಮೆ ದರದಲ್ಲಿ ಪಡಿತರ ಧಾನ್ಯ ಕೊಡುವುದು ಸ್ವಾಗತಾರ್ಹವಾದ ವಿಚಾರವಾದರೂ ನಿಜವಾದ ಬಡ ಕುಟುಂಬಗಳಿಗೆ ಸಹಾಯ ಮಾಡಬೇಕೆಂಬ ಉದ್ದೇಶ ಇದರೊಳಗೆ ಕೇವಲ ಪ್ರಚಾರದ ತಂತ್ರ ಮಾತ್ರ ಎನ್ನುವುದು ಕಾರ್ಡನ್ನು ವಿತರಣೆಗೆ ಅವರು ಅನುಸರಿಸಿದ ಮಾನದಂಡಗಳಿಂದ ತಿಳಿಯುತ್ತದೆ. ಇಡೀ ಯೋಜನೆ ಒಂದೇ ವರ್ಷದಲ್ಲಿ ವಿಫಲವಾಗಲು ಬೇಕಾದ ಎಲ್ಲಾ ಅಂಶಗಳು ಹಳದಿಕಾರ್ಡಿನ ಜಾರಿಯಲ್ಲಿದೆ.

ವಿಠ್ಠಲ ಭಂಡಾರಿ

'ಹಳದಿ ಕಾರ್ಡ್' ವಿತರಣೆಗೆ ಅನುಸರಿಸಿದ ಮಾನದಂಡ ಬಿ.ಪಿ.ಎಲ್. ಸರ್ವೆ (ಬಿಪಿಎಲ್ ಕಂಪನಿಗೂ ಇದಕ್ಕೂ ಸಂಬಂಧವಿಲ್ಲ) 1996-97 ರಲ್ಲಿ ನಡೆಸಿದ ಸರ್ವೆಯ ಆಧಾರದಲ್ಲಿ ಇಂದು ಪಡಿತರ ಕಾರ್ಡ ವಿತರಿಸಲು ತೊಡಗಿದ್ದಾರೆ. ಸಮಾಜದಲ್ಲಿ ನಿಜವಾದ ಬಡವರನ್ನ (ಬಡತನದ ರೇಖೆಯ ಕೆಳಗಿರುವವರನ್ನು) ಗುರುತಿಸಲು ಈ ಸರ್ವೆ ನಡೆದಿದ್ದರೂ ನಿಜವಾದ ಬಡವರನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಯಾಕೆಂದರೆ ಅಧಿಕಾರಶಾಹಿತ್ವದ ನಿರ್ಲಕ್ಷ್ಯ ಧೋರಣೆಯಿಂದಾಗಿ.

ಬಿಪಿಎಲ್ ಸರ್ವೆಯನ್ನು ಪ್ರತಿ ಗ್ರಾಮ ಪಂಚಾಯತ್ ನಡೆಸಬೇಕಾಗಿತ್ತು. ಆದರೆ ಅದನ್ನು ಏಕಾಏಕಿ ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸಿಕೊಟ್ಟರು. ಕೊಡುವಾಗಲೂ ಬಿಪಿಎಲ್ ಸರ್ವೆಯ ಉದ್ದೇಶ, ಮಾಡುವ ಕ್ರಮಗಳ ಬಗ್ಗೆ ಯಾವುದೇ ಸರಿಯಾದ ತರಬೇತಿ ಕೊಟ್ಟಿಲ್ಲ. ಕೆಲವು ಪಂಚಾಯತ್ ಅಧ್ಯಕ್ಷರು, ಸದಸ್ಯರು ಒತ್ತಾಯ ಪೂರ್ವಕವಾಗಿ, ಬೆದರಿಕೆ ಹಾಕಿ ತಮ್ಮ ಹೆಸರು, ಸಂಬಂಧಿಕರ ಹೆಸರುಗಳನ್ನು ಸೇರಿಸಿಕೊಂಡಿದ್ದು, ಸರ್ವೆ ನಡೆಯುತ್ತಿರುವ ಸಂದರ್ಭದಲ್ಲಿ ಸುದ್ದಿಯಾಗಿತ್ತು.

ಅಂಗನವಾಡಿ ಪಂಚಾಯತ್ ಒದಗಿಸಿದಷ್ಟು ಅರ್ಜಿಫಾರಂನಲ್ಲಿ ಲಭ್ಯವಿದ್ದಷ್ಟು ಮಾಹಿತಿ ತುಂಬಿ ಕಳುಹಿಸಿದ್ದಾರೆ. ನಂತರ ಕೆಲವು ಕಡೆ ಪಂಚಾಯತ್‌ನಲ್ಲಿ ಕಾರ್ಯದರ್ಶಿ, ಅಧ್ಯಕ್ಷರು ಇತರರು ಸೇರಿ ಸಂಕಲನ ವ್ಯವಕಲನ ಮಾಡಿ ಸಂಬಂಧಪಟ್ಟವರಿಗೆ ಕಳುಹಿಸಿದ್ದಾರೆ. ಇದರಿಂದ ಅಗಿರುವ ವ್ಯವಸ್ಥೆಯ ಜವಾಬ್ದಾರಿಯನ್ನು ಅಂಗನವಾಡಿ ನೌಕರರ ಮೇಲೆ ಜಾರಿಸುವ ಕೆಲಸ ಇಂಥಹ ಅಧಿಕಾರಿಗಳಿಂದ ನಡೆಯುತ್ತಿದೆ. ಕೆಲವು ಕಡೆ ಜನರು ಸತ್ಯಾಸತ್ಯತೆ ತಿಳಿಯದೆಯೇ ಅಂಗನವಾಡಿ ಕಾರ್ಯಕರ್ತೆಯರ ಮೇಲೆ ದಾಳಿ ನಡೆಸಿದ್ದಾರೆ. ಅವರ ಇಲಾಖೆ ಕೂಡ ಅಂಗನವಾಡಿ ಕಾರ್ಯಕರ್ತೆಯರನ್ನು ರಕ್ಷಣೆ ಮಾಡಲು ಮುಂದಾಗದಿದ್ದುದು ಆಶ್ಚರ್ಯ.

ಹೀಗೆ ತಯಾರಿಸಿ ಕಳುಹಿಸಿದ ಯಾದಿಯಿಂದ ಮತ್ತೆ ಶೇ 20 ಹೆಸರುಗಳು ಕಡಿತ ಮಾಡಿದ್ದರಿಂದ ಇನ್ನಷ್ಟು ಜನರ ಹೆಸರು ತಪ್ಪು ಕಾರಣ ಆಯಿತು.

ಹಳದಿ ಕಾರ್ಡು ಪಡೆದವರು ಹೆಚ್ಚು ಬಡವರೆ ಅಥವಾ ಹಸಿರು ಕಾರ್ಡ್ ಹೊಂದಿದವರು ಹೆಚ್ಚು ಬಡವರೆ? ಎನ್ನುವ ಪ್ರಶ್ನೆ ಜನಗಳದ್ದು. ಹಾಗೆ ನೋಡಿದರೆ ಹಸಿರು ಕಾರ್ಡ್ ಹೊಂದಿರುವವರು ಕಡು ಬಡವರು. ಕುಟುಂಬದ ವಾರ್ಷಿಕ ಆದಾಯ 11,000 ಮೀರದಿದ್ದವರಿಗೆ ಹಸಿರು ಕಾರ್ಡ್ ವಿತರಿಸಲಾಗಿತ್ತು. ಈಗ ಹಳದಿ ಕಾರ್ಡ್ ಪಡೆಯುವವರ ವಾರ್ಷಿಕ ಆದಾಯ ಮಿತಿ 21,000. ಆದರೆ ಹಸಿರುಕಾರ್ಡ್ ಹೊಂದಿರುವವರ ಪಡಿತರ ಸಾಮಗ್ರಿಯ ಬೆಲೆ ಹೆಚ್ಚು. ಹಳದಿ ಕಾರ್ಡ್ ಪಡೆಯುಪವರ ಪಡಿತರ ಸಾಮಗ್ರಿಯ ಬೆಲೆ ಕಡಿಮೆ. ಸಾಲ ಸೌಲಭ್ಯಗಳಲ್ಲಿ ಹಳದಿ ಕಾರ್ಡಿನವರಿಗೆ ಪ್ರಥಮ ಆದ್ಯತೆ. ಹೇಗಿದೆ ಈ ನ್ಯಾಯ?


ಹಳದಿ ಕಾರ್ಡ್ ಹಂಚುವ ಮೊದಲು ಸರ್ಕಾರ ಮೊದಲು ಕೊಟ್ಟ ಹಸಿರು ಕಾರ್ಡನ್ನು ಹಿಂತೆಗೆದುಕೊಳ್ಳಲಿಲ್ಲ. ಹಾಗಾಗಿ ಈಗ ಹಳದಿ ಕಾರ್ಡ್, ಹಸಿರು ಕಾರ್ಡು ಮತ್ತು ಕೇಸರಿ ಕಾರ್ಡ್ ಎನ್ನುವ ಮೂರು ವರ್ಗದ್ದಾಯಿತು. ಇನ್ನು ಬಿಳಿಯ ಕಾರ್ಡ್‌ಕೂಡ ಜಾರಿಗೆ ಬರುವುದಿದೆ ಎಂದು ಸುದ್ದಿ ಇದೆ. ಕಾದು ನೋಡಬೇಕು.

ಇಡೀ ರಾಜ್ಯದಲ್ಲಿ ಹಸಿರು ಕಾರ್ಡ್‌ಗಳನ್ನು ಹೊಂದಿದ ಕುಟುಂಬಗಳನ್ನು 1/3ಕ್ಕೆ ಇಳಿಸಿ ಹಳದಿ ಕಾರ್ಡ್ ಕೊಟ್ಟಿರುವುದಾಗಿ ಸರ್ಕಾರ ತಿಳಿಸಿದೆ. ಬಹುಶಃ ಇದು ರಾಜ್ಯದಲ್ಲಿ ಬಡತನ ಪ್ರಮಾಣ ಕಡಿಮೆ ಎಂದು ತೋರಿಸಿ, ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ ತಂತ್ರ ಇರಬಹುದು. ಆದರೆ ಕೆಲವು ಕೊಟ್ಟ ಕಾರ್ಡನ್ನು ತೆಗೆದು ಹಾಕಿದರೂ ಈಗಿರುವ ಹಸಿರು ಕಾರ್ಡ್‌ನ 1/3 ಕ್ಕಿಂತ ಹೆಚ್ಚು ಬಡ ಕುಟುಂಬಗಳು ಕರ್ನಾಟಕದಲ್ಲಿ ಇವೆ. ಈಗ ಪ್ರತಿ ತಾಲೂಕಿನಲ್ಲಿ ನೂರಾರು ಅರ್ಹ ಕುಟುಂಬಗಳಿಗೆ ಕಾರ್ಡ್ ಸಿಕ್ಕಲಿಲ್ಲ. ವಿಧವೆಯರಿಗೆ, ಕೂಲಿಯವರಿಗೆ ಒಂದು ಕುಂಟೆ ಕೂಡ ಜಾಗ ಇಲ್ಲದವರಿಗೆ, ತೀರಾ ಹಿಂದುಳಿದ ಬುಡಕಟ್ಟು ಜನಾಂಗದವರಿಗೆ ಇದರಿಂದ ವಂಚನೆ ಆಗಿದೆ. ಅನೇಕ ಅನರ್ಹರಿಗೆ ಹಳದಿ ಕಾರ್ಡ್ ಲಭ್ಯ ಆಗಿದೆ. ಇದಲ್ಲಿ ಆರ್.ಸಿ.ಸಿ. ಮನೆ ಇದ್ದವರು, ಸ್ವಂತ ಜಮೀನು ಹೊಂದಿದವರು, ಮನೆಯಲ್ಲಿ ನೌಕರಿ ಇದ್ದವರು ಮತ್ತು ಒಂದೇ ಕುಟುಂಬದಲ್ಲಿ 2-3 ಜನ ಅಣ್ಣತಮ್ಮಂದಿರು ಹೀಗೆ ಹಲವು ಬಗೆಯ ಅನರ್ಹರು ಸೇರಿದ್ದಾರೆ. ಇವರಲ್ಲಿ ಯಾವುದೇ ಮಾನದಂಡ ಉಪಯೋಗಿಸಿದರೂ ಬಡತನ ರೇಖೆಯ ಮೇಲಿದ್ದವರೇ ಆಗಿದ್ದಾರೆ. ಆದರೆ ನಿಜವಾದ ಬಡವರು ಮಾತ್ರ ಇದನ್ನು ಪ್ರತಿಭಟಿಸಲಾರದೆ ಕುಳಿತಿದಿದ್ದಾರೆ.

ಅರ್ಹರ ಸೇರ್ಪಡೆಯ ಬಗ್ಗೆ ಕೂಡ ಸಂಬಂಧಪಟ್ಟವರು ಖಚಿತ ಉತ್ತರ ಹೇಳುವುದಿಲ್ಲ. 'ಪ್ರತಿ ಗ್ರಾಮ ಸಭೆಯಲ್ಲಿ ಹೆಸರು ನೊಂದಾಯಿಸಿ, ಅವನ್ನು ಅಧಿಕಾರಿಗಳು ತನಿಖೆ ನಡೆಸಿ, ಅವರಿಗೆ ಅರ್ಹರೆನಿಸಿದವರ ಹೆಸರನ್ನು ಅಸಿಸ್ಟೆಂಟ್ ಕಮಿಷನರ್ ಅವರ ಸಹಿಯೊಂದಿಗೆ ಸರ್ಕಾರಕ್ಕೆ ಕಳುಹಿಸಿ, ಅಲ್ಲಿಂದ ನಿಮ್ಮ ಹೆಸರು ಸೇರ್ಪಡೆ ಆಗಿ ಬಂದರೆ ನಿಮಗೆ ಹಳದಿ ಕಾರ್ಡ್ ಕೊಡುತ್ತೇವೆ" ಎನ್ನುತ್ತಾರೆ. ಇಷ್ಟೆಲ್ಲ ಆಗಿ, ಬರುವುದರೊಳಗೆ ಒಂದು ವರ್ಷ ಕಳೆಯಬಹುದು. ಅಷ್ಟೊತ್ತಿಗೆ ಇನ್ನೊಂದು ಬಣ್ಣದಲ್ಲಿ ಹೊಸ ಕಾರ್ಡ್ ಬಂದು, ಹೊಸಯೋಜನೆ ಜಾರಿ ಆಗಬಹುದು. ಅಥವಾ ಹೊಸ ಸರ್ಕಾರವೇ ಬಂದು ಹಳೆಯ ಯೋಜನೆ ಇದೆಂದು ರದ್ದುಗೊಳಿಸಬಹುದು ಎನ್ನುವ ಅಧಿಕಾರಿಗಳ ಮಾತನ್ನು ಅಲ್ಲಗೆಳೆಯುವಂತಿಲ್ಲ.

ಪಡಿತರ ಚೀಟಿಯ ಬಣ್ಣ ಬದಲಾಯಿಸಿದ ಮಾತ್ರಕ್ಕೆ ಪರಿಸ್ಥಿತಿ ಸುಧಾರಣೆ ಆಗಲಾರದು. ಪಡಿತರ ವ್ಯವಸ್ಥೆಯಲ್ಲಿಯೇ ಆಮೂಲಾಗ್ರ ಬದಲಾವಣೆ ಆಗಬೇಕಾಗಿದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಬಡವರನ್ನು ತಮ್ಮ ಪ್ರಯೋಗದ ಬಲಿಪಶುಗಳನ್ನಾಗಿಸುವ ಕ್ರಮ ಖಂಡನಾರ್ಹ. ಈಗಲಾದರೂ ಮತ್ತೊಮ್ಮೆ ಅರ್ಹರನ್ನು ತಕ್ಷಣ ಸೇರಿಸಿಕೊಂಡು, ಅನರ್ಹರನ್ನು ಕೈಬಿಟ್ಟು ಆದ ತಪ್ಪನ್ನು ಸ್ವಲ್ಪಮಟ್ಟಿಗಾದರೂ ತಿದ್ದಿಕೊಳ್ಳುವ ಕೆಲಸವನ್ನು ಸಂಬಂಧಪಟ್ಟವರು ಮಾಡಲಿ.

ಈ ವಿಷಯ ಓದಿ ಆಶ್ಚರ್ಯವಾಗಬಹುದು. ಆದರೂ ಸತ್ಯ. ರಾಜ್ಯದ ಕಡು ಬಡವರಿಗೆ ಕೊಡುವ ಹಳದಿ ಕಾರ್ಡ್ ಅರ್ಹರಿಗೆ ಸಿಕ್ಕಿಲ್ಲವೆಂಬ ಕೂಗು ಜಿಲ್ಲೆಯಾದ್ಯಂತ ಕೇಳುತ್ತಿದೆ. ಆದರೆ ಭಟ್ಕಳ ಕ್ಷೇತ್ರದ ಮಾಜಿ ಶಾಸಕರೂ, ಬಿಜೆಪಿಯ ಉ.ಕ. ಜಿಲ್ಲಾ ಅಧ್ಯಕ್ಷರೂ ಆಗಿರುವ ಶ್ರೀ ಶಿವಾನಂದ ನಾಯ್ಕ ಅವರಿಗೆ ಬಿ.ಪಿ.ಎಲ್.ಸರ್ವೆಯಲ್ಲಿ ಹೆಸರು ಸೇರ್ಪಡೆಯಾಗಿದ್ದು ಹಳದಿ ಕಾರ್ಡ್ ಪಡೆಯುವ ಅರ್ಹ ವ್ಯಕ್ತಿಗಳಲ್ಲಿ ಅವರ ಹೆಸರೂ ಇದೆ ಎಂದು ವಿವಿಧ ಪತ್ರಿಕೆಗಳು ವರದಿ ಮಾಡಿವೆ. ಅವರು ಯಾವಾಗ ಅಷ್ಟು ಬಡವರಾದರು? ಎಂದು ಜನ ತಲೆ ಕೆಡಿಸಿಕೊಳ್ಳುತ್ತಿದ್ದಾರೆ.





ಸಿಡ್ನಿಯಲ್ಲಿ ನಡೆಯುತ್ತಿರುವ ಪ್ಯಾರಾ ಒಲಿಂಪಿಕ್ಸ್‌ನ ಪುರುಷರ 48ಕೆ.ಜಿ. ವಿಭಾಗದಲ್ಲಿ 165 ಕೆ.ಜಿ. ಭಾರವೆತ್ತಿ ವಿಶ್ವದಾಖಲೆ ಸ್ಥಾಪಿಸಿದ ಇಂಗ್ಲೆಂಡ್‌ನ ಅಥೋಣಿ ಪೆಡಲ್

ಮಹಿಳೆಯರ 200 ಮೀಟರ್ ಓಡದ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಅಮೆರಿಕಾದ ಶಿಯಾ ಕೋವಾಂಟ್ರ್(ಅವರ ಎರಡೂ ಕಾಲುಗಳೂ ಕೃತಕ)

ಡೊಂಕು ಬಾಲದವರು

ಕುದುರೆ ಸವಾರಿ, ಕತ್ತಿ ವರಸೆ
ಯುದ್ಧದಲ್ಲಿ ಸಿದ್ಧಹಸ್ತರು
ತಾಳೆಗರಿ, ತಾಮ್ರ ಪಟ
ತತ್ವಮನೆಯ ಶಿಖಾಮಣಿಗಳು....

ನಡು ಬಗ್ಗಿದವರ ನೆಲ ತಿಂದರು
ದುಡಿವವರ ನೆತ್ತರು ಕುಡಿದರು
ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯ ಹಚ್ಚಿದರು
ಸೆರಗಿನ ಮರೆಯ ಅಂದವ ಹೀರಿದರು

ಬುದ್ಧನನ್ನು ಒದ್ದೋಡಿಸಿದರು
ಬಸವನನ್ನು ಅಸುನೀಗಿಸಿದರು
ಕನಲಿದ ಕಿಡಿಗಳನು ಕಣಕಿಳಿಸಿದರು
ಕೊನೆಗೊಮ್ಮೆ ಕೈ ಸುಟ್ಟುಕೊಂಡರು..!

ಕಾಲ ಮಾಗಿದರೂ ಬುದ್ಧಿ ಕಲಿಯರು
ಒಮ್ಮೆ ಹಿಂತಿರುಗಿ ನೋಡಿ ಸಟೆಯರಿಯರು
ಇವರು ಹೀಗೆಯೇ ಡೊಂಕು ಬಾಲದವರು
ಮಕ್ಕಳಿಗೆ ಕುತ್ತು ತಂದಿತ್ತವ.....

- ವನಮಾಲ ಕಟ್ಟೇಗೌಡರ

PRBDECR 319-79/79 AIKYARANGA WEEKLY Reg.No.17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India Marxist), Karnataka State Committee. Editor : G.N. NAGARAJ